# ತುಮಕೂರು ವಿಶ್ವವಿದ್ಯಾನಿಲಯ

## 2015–16ನೇ ಸಾಲಿನ

## ಲೆಕ್ಕ ಪರಿಶೋಧನಾ ವರದಿಗೆ

## ಅನುಪಾಲನಾ ವರದಿ

## Audit Compliance Report

## For the year 2015-16

# ತುಮಕೂರು ವಿಶ್ವವಿದ್ಯಾನಿಲಯ

**2015–16ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಪಾಲನಾ ವರದಿಯನ್ನು ಪರಿಚಲನೆ (Circulation) ಮುಖಾಂತರ ಹಣಕಾಸು ಸಮಿತಿಯು ಪರಿಶೀಲಿಸಿ ಅನುಮೋದಿಸಿತು.**

ಸಹಿ/–
ಹಣಕಾಸು ಅಧಿಕಾರಿಗಳು

## ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆ

**ದಿನಾಂಕ:16.05.2019 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆಯು 2015–16ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅನುಮೋದಿಸಿತು.**

ಸಹಿ/–
ಹಣಕಾಸು ಅಧಿಕಾರಿಗಳು

## ಸಿಂಡಿಕೇಟ್ ಸಭೆಯ ಅನುಮೋದನೆ

**ದಿನಾಂಕ:20.05.2019 ರಂದು ನಡೆದ ಸಿಂಡಿಕೇಟ್ ಸಭೆಯು 2015–16ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅನುಮೋದಿಸಿತು.**

ಸಹಿ/–
ಹಣಕಾಸು ಅಧಿಕಾರಿಗಳು

# ತುಮಕೂರು ವಿಶ್ವವಿದ್ಯಾನಿಲಯ

# 2015–16ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ

# ಅನುಪಾಲನಾ ವರದಿ

**2015-16ನೇ ತುಮಕೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ಕರಡು ವರದಿಯಲ್ಲಿನ ಕಂಡಿಕೆಗಳಲ್ಲಿ ಕಂಡು ಬಂದ ಆಕ್ಷೇಪಣೆ ಮತ್ತು ವಸೂಲಾತಿಯ ಮೊತ್ತಕ್ಕೆ ಅನುಸರಣಾ ವರದಿ**

| ಕ್ರ.ಸಂ | ಕಂಡಿಕೆ ಸಂ. | ಕಂಡಿಕೆ ವಿವರ | ಆಕ್ಷೇಪಣೆ ರೂ.ಗಳಲ್ಲಿ | ವಸೂಲಾತಿ ರೂ.ಗಳಲ್ಲಿ |
|---|---|---|---|---|
| | | **ಭಾಗ-2** | | |
| **1** | **5** | ನಿಶ್ಚಿತ ಠೇವಣಿ ಹೂಡಿಕೆಗಳಲ್ಲಿ ಕಂಡುಬಂದ ವ್ಯತ್ಯಾಸ ಮೊಬಲಗು | 2,37,81,664.00 | |
| **1(ಎ)** | **8** | ನಿಯಮ ಬಾಹಿರವಾಗಿ ಗೃಹ ಪರಿಚಾರಕ ಭತ್ಯೆ ಪಾವತಿಸಿರುವ ಬಾಬ್ತು | **–** | 2,52,000.00 |
| **2** | **9** | ನಿಯಮಬಾಹಿರವಾಗಿ ಬೋಧಕ ವರ್ಗದವರಿಗೆ ಗಳಿಕೆ ರಜೆ ನಗದೀಕರಣ ಬಾಬ್ತು | **–** | 4,16,326.00 |
| **3** | **10** | ಪರಿನಿಯಮ ರಚಿಸದೆ ಆಪ್ತ ಸಹಾಯಭತ್ಯೆ ಪಾವತಿಸಿರುವ ಬಾಬ್ತು | **–** | 1,25,573.00 |
| **4** | **11** | ನಿಯಮಬಾಹಿರವಾಗಿ ವೈದ್ಯಕೀಯ ವೆಚ್ಚ ಮರುಪಾವತಿಸಿರುವ ಬಾಬ್ತು | | 2,06,552.00 |
| **5** | **12** | ಪರಿನಿಯಮ ರಚಿಸದೇ ಆಪ್ತ ಸಹಾಯಕ ಹಾಗೂ ದೂರವಾಣಿ ವೆಚ್ಚ | **–** | **80,000.00** |
| **6** | **13** | ಪರಿನಿಯಮ ರಚಿಸದೇ ಆತಿಥ್ಯ ಭತ್ಯೆ ಪಾವತಿಸಿರುವ ಬಾಬ್ತು | **–** | **1,98,000.00** |
| **7** | **14** | ಹಂಗಾಮಿ ಸಂಚಿತ ನೌಕರರಿಗೆ ಹಿಂಬಾಕಿ ವೇತನ ಪಾವತಿಸಿರುವ ಮೊಬಲಗು | 54,14,296 | **–** |
| **8** | **15** | ಆಡಳಿತಾತ್ಮಕ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ವರ್ಗದವರಿಗೆ ಯುಜಿಸಿ ವೇತನ ಪಾವತಿಸಿರುವ ಮೊಬಲಗು | **–** | 2,26,431 |
| **9** | **17** | ಪರಿನಿಯಮ ರಚಿಸದ ಪರೀಕ್ಷಾ ಸಂಭಾವನೆ ಪಾವತಿಸಿರುವ ಬಾಬ್ತು | **–** | 28,92,550.00 |
| | | **ಸರಕು ಮತ್ತು ಸೇವೆಗಳು ಸಂಗ್ರಹಣೆಯಲ್ಲಿ ನಿಯಮ ಪಾಲನೆ ಮಾಡದೆ ಭರಿಸಿರುವ ವೆಚ್ಚಗಳು(ಕೆ.ಟಿ.ಪಿ.ಪಿ ಉಲ್ಲಂಘನೆ)** | | |
| **10** | **18** | ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ಕುಡಿಯುವ ನೀರಿನ ಸರಬರಾಜು ಪಡೆದು ಮೆ॥ ಸುರಭಿ ಆಕ್ವಾ ಇಂಟರ್ ನ್ಯಾಷನಲ್ ಸಂಸ್ಥೆಯವರಿಗೆ ಪಾವತಿಸಿರುವ ಮೊಬಲಗು | 82,960.00 | **–** |
| **11** | **19** | ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ರಾಸಾಯನಿಕಗಳನ್ನು ಖರೀದಿಸಿ ಪಾವತಿಸಿರುವ ಮೊಬಲಗು | 2,46,382.00 | **–** |
| **12** | **20** | ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ರಾಸಾಯನಿಕ ಖರೀದಿಸಿ ಪಾವತಿಸಿರುವ ಮೊಬಲಗು | 1,71,584.00 | **–** |
| **13** | **21** | ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ಮುದ್ರಣ ಮೆ॥ ನಿರುತ ಪಬ್ಲಿಕೇಷನ್ ಸಂಸ್ಥೆಯಿಂದ ಪರಿಚಯಿ ಕೈಪಿಡಿ ಮುದ್ರಿಸಿ ಪಾವತಿಸಿರುವ ಮೊಬಲಗು | 1,46,168.00 | **–** |

| | | | | |
|---|---|---|---|---|
| **14** | **22** | ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ಮೆ॥ ಹೇಮಲತಾ ಕ್ಲೀನ್ & ಕೇರ್ ಸಂಸ್ಥೆಯಿಂದ ಹೌಸ್‌ಕೀಪಿಂಗ್ ಸೇವೆ ಪಡೆದು ಪಾವತಿಸಿರುವ ಮೊಬಲಗು | 88,48,039.00 | – |
| **15** | **23** | ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ಪ್ರಶ್ನೆಪತ್ರಿಕೆ ಮುದ್ರಣ ಕಾರ್ಯ ಕೈಗೊಂಡು ಪಾವತಿಸಿರುವ ಮೊಬಲಗು | 27,05,595.00 | – |
| **16** | **24** | ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ಪರೀಕ್ಷಾ ಕಾರ್ಯ ಗಣಕೀಕರಣಗೊಳಿಸಿ ಮೆ॥ ಲಾಜಿಸಿಸ್ ಸಂಸ್ಥೆಗೆ ಪಾವತಿಸಿರುವ ಮೊಬಲಗು | 66,82,500.00 | – |
| **ಎ.ಸಿ. ಬಿಲ್ಲುಗಳಲ್ಲಿ ಕಂಡು ಬಂದ ನ್ಯೂನತೆಗಳು** | | | | |
| **17** | **25** | ಎ.ಸಿ ಬಿಲ್ಲುಗಳಲ್ಲಿ ಕಂಡುಬಂದ ನ್ಯೂನತೆಗಳು | 32,000.00 | 54,584.00 |
| **18** | **26** | ಎ.ಸಿ ಬಿಲ್ಲುಗಳಲ್ಲಿ ಕಂಡುಬಂದ ನ್ಯೂನತೆಗಳು ದೈಹಿಕ ಶಿಕ್ಷಣ ವಿಭಾಗದ ಕ್ರೀಡಾ ಯೋಜನೆಗೆ ಭರಿಸಿರುವ ವೆಚ್ಚದಲ್ಲಿ ಕಂಡುಬಂದ ನ್ಯೂನತೆಗಳು | 18,39,733.00 | 99068.00 |
| **19** | **27** | ಎ.ಸಿ ಬಿಲ್ಲುಗಳಲ್ಲಿ ಕಂಡುಬಂದ ನ್ಯೂನತೆಗಳು (ವಿದ್ಯಾರ್ಥಿ ನಿಲಯದ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು ಕಂಡುಬಂದ ನ್ಯೂನತೆಗಳು) | – | 73,450.00 |
| **20** | **29** | ಎ.ಸಿ. ಬಿಲ್ಲುಗಳ ಪರಿಶೀಲನೆಯಲ್ಲಿ ಕಂಡುಬಂದ ನ್ಯೂನತೆಗಳು | 23,664.00 | 35,000.00 |
| **21** | **30** | SCP/TSP ಯೋಜನೆಗೆ ಭರಿಸಲಾದ ವೆಚ್ಚಗಳಲ್ಲಿ ಕಂಡುಬಂದ ನ್ಯೂನತೆಗಳು | – | 19,546.00 |
| **ಅಧಿಕಾರಿಗಳ ನಿರ್ಲಕ್ಷ್ಯತೆಯಿಂದ ಉಂಟಾದ ನಷ್ಟದ ಪರಿಣಾಮಗಳು** | | | | |
| **22** | **31** | ಪ್ರವೇಶಾತಿ ಶುಲ್ಕ ಸ್ವೀಕೃತಿಯಲ್ಲಿ ಕಂಡುಬಂದ ನ್ಯೂನತೆಗಳು | – | 4,45,280.00 |
| **23** | **32** | ಡಾ॥ ಬಿ.ಆರ್.ಅಂಬೇಡ್ಕರ್ ಮತ್ತು ಡಾ॥ ಬಾಬು ಜಗಜೀವನರಾಮ್, ಅಧ್ಯಯನ ಕೇಂದ್ರಕ್ಕೆ ಬಿಡುಗಡೆಯಾದ ಅನುದಾನ ಸದ್ಬಳಕೆ ಆಗದಿರುವುದು. | 26,94,184.00 | – |
| **24** | **35** | Over head charges ಗೆ ಮೀಸಲಿಟ್ಟ ಮೊತ್ತದಲ್ಲಿ ವೇತನ ಪಾವತಿಸಿರುವ ಬಾಬ್ತು | 9,79,880.00 | – |
| **25** | **36** | ನಿಯಮಬಾಹಿರವಾಗಿ ಮನೆ ಬಾಡಿಗೆ ವೆಚ್ಚ ಪಾವತಿಸಿರುವುದು | – | 1,37,941.00 |
| **26** | **37** | ವಿಚಾರಣಾ ಸಂಕಿರಣ ಮತ್ತು ಸಮ್ಮೇಳನಕ್ಕಾಗಿ 2015–16ನೇ ಸಾಲಿನಲ್ಲಿ ವೆಚ್ಚ ಭರಿಸಿರುವಲ್ಲಿ ಕಂಡುಬಂದ ನ್ಯೂನತೆ | 13,42,044.00 | 1,25,000.00 |
| **27** | **38** | ಮೌಲ್ಯಮಾಪಕರಿಗೆ ಹೆಚ್ಚುವರಿ ದಿನಭತ್ಯೆ ಪಾವತಿಸಿರುವುದು | | 48,025.00 |
| **28** | **39** | ರೂಸಾ ಯೋಜನೆಗೆ ಸಂಬಂಧಪಟ್ಟ ಕಡತಗಳ ಪರಿಶೀಲನೆಯಲ್ಲಿ ಕಂಡುಬಂದ ನ್ಯೂನತೆಗಳು | 23,82,532.00 | – |
| **ಹಣಕಾಸಿನ ಇತರೆ ನ್ಯೂನತೆಗಳು** | | | | |
| **29** | **41** | ಇಸ್ರೋ ಸಂಸ್ಥೆಗೆ ಅನುದಾನ ಹಿಂದಿರುಗಿಸುವ ಕುರಿತು | 18,774.00 | – |
| **30** | **44** | ಖಾತೆ ಸಂಖ್ಯೆ: 2603101010533 ನಗದು ವಹಿ ಪರಿಶೀಲನೆಯಲ್ಲಿ | 35,200.00 | – |

| | | | | |
|---|---|---|---|---|
| **31** | **45** | ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಗೆ ಸಂಬಂಧಪಟ್ಟ ವೆಚ್ಚಗಳ ಪರಿಶೀಲನೆಯಲ್ಲಿ ಕಂಡುಬಂದ ನ್ಯೂನತೆಗಳು | 4,77,33,913.00<br>2,47,17,704.00 | – |
| **32** | **48** | ಅಭಿವೃದ್ಧಿ ಅನುದಾನ ನಗದು ವಹಿಯಲ್ಲಿ ಕಂಡು ಬಂದ ವ್ಯತ್ಯಾಸದ ಮೊಬಲಗು | 90,700.00 | – |
| **33** | **50** | ಪ್ರವೇಶ ಶುಲ್ಕವನ್ನು ಸ್ವೀಕೃತಿಯಲ್ಲಿ ಗಣನೆಗೆ ತೆಗೆದುಕೊಳ್ಳದಿರುವುದು | 13,80,776.00 | |
| **34** | **51** | ಗಿರಿಜನ ಉಪಯೋಜನೆಯಡಿ ಭರಿಸಿರುವ ವೆಚ್ಚಗಳಲ್ಲಿ ಕಂಡು ಬಂದ ನ್ಯೂನತೆಗಳು | 3,12,080.00 | 6,633.00 |
| **ಲೆಕ್ಕಪರಿಶೋಧನೆಗೆ ಒದಗಿಸದಿರುವ ಕಡತಗಳು/ವಹಿಗಳು/ದಾಖಲಾತಿಗಳು** | | | | |
| **35** | **55** | ರಾಸಾಯನಿಕ/ಗ್ಲಾಸ್‌ವೇರ್ ಖರೀದಿ ಸಂಬಂಧ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದಿರುವುದು | 2,98,119.00 | – |
| **36** | **56** | ಪ್ರವೇಶಾತಿ ವಹಿಯನ್ನು ಲೆಕ್ಕಪರಿಶೋಧನೆ ಒದಗಿಸದಿರುವುದು | 4,18,300.00 | – |
| **37** | **60** | ವೇತನ ಯೋಜನೆಗೆ ಸಂಬಂಧ ಪಟ್ಟ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದಿರುವುದು | 2,61,60,422.00 | |
| **38** | **63** | ವಿಚಾರಣಾ ಸಂಕಿರಣ ಮತ್ತು ಸಮ್ಮೇಳನ ಬ್ಯಾಂಕ್ ಖಾತೆಯ ವೆಚ್ಚದ ಬಿಲ್ಲುಗಳನ್ನು ಹಾಜರುಪಡಿಸದಿರುವುದು | 80,47,544.00 | – |
| **39** | **65** | ಅಭಿವೃದ್ಧಿ ಅನುದಾನದ ಓಚರ್‌ಗಳನ್ನು ಲೆಕ್ಕಪರಿಶೋಧನೆಗೆ ಸಲ್ಲಿಸದಿರುವುದು | 1,37,341.00 | – |
| | | **ಒಟ್ಟು ರೂ.** | **16,67,24,098.00** | **54,41,959.00** |

**2015–16ನೇ ಸಾಲಿನ ತುಮಕೂರು ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿರುವ ಅಧಿಕಾರಿಗಳ ಹೆಸರು, ಹುದ್ದೆ ಮತ್ತು ಅವಧಿಯ ವಿವರಗಳು**

| | | |
|---|---|---|
| 1 | ಕುಲಪತಿಗಳು<br>ಡಾ॥ ಎ.ಹೆಚ್.ರಾಜಸಹೇಬ್ | <br>01.04.2015 ರಿಂದ 31.03.2016 |
| 2 | ಕುಲಸಚಿವರು (ಆಡಳಿತ)<br>ಡಾ॥ ಡಿ. ಶಿವಲಿಂಗಯ್ಯ<br>ಡಾ॥ ಎಂ.ವೆಂಕಟೇಶ್ವರಲು | <br>01.04.2015 ರಿಂದ 14.03.2016<br>14.03.2016 ರಿಂದ 31.03.2016 |
| 3 | ಕುಲಸಚಿವರು (ಮೌಲ್ಯಮಾಪನ)<br>ಪ್ರೋ॥ ನಡುವಿನ ಮನಿ<br>ಡಾ॥ ಡಿ.ವಿ. ಪರಮಶಿವ ಮೂರ್ತಿ | <br>01.04.2015 ರಿಂದ 29.02.2016<br>01.03.2016 ರಿಂದ 31.03.2016 |
| 4 | ವಿತ್ತಾಧಿಕಾರಿಗಳು<br>ಡಾ॥ ಬಿ.ಕೆ. ಸುರೇಶ್ | <br>01.04.2015 ರಿಂದ 31.03.2016 |
| 5 | ಲೆಕ್ಕಪರಿಶೋಧನಾ ಅವಧಿ | 2015–16 |
| 6 | ವಿತ್ತಾಧಿಕಾರಿಗಳು ವಾರ್ಷಿಕ ಹಣಕಾಸು ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ನೀಡಿದ ದಿನಾಂಕ | 12.04.2017 |
| 7 | ವಾರ್ಷಿಕ ಲೆಕ್ಕಪತ್ರ ಪರಿಶೋಧನೆ ಪ್ರಾರಂಭ ದಿನಾಂಕ ಮುಕ್ತಾಯದ ದಿನಾಂಕ | 02.05.2017 ರಿಂದ 24.06.2017 |
| 8 | ಲೆಕ್ಕಪರಿಶೋಧನಾ ತಂಡ | ಶ್ರೀಮತಿ ಮಂಜುಳ ಆರ್.ಸಿ, ಲೆಕ್ಕಾಧೀಕ್ಷಕರು<br>ಶ್ರೀಮತಿ ಗೀತಾ ಕೆ, ಲೆಕ್ಕಸಹಾಯಕರು<br>ದಿನಾಂಕ: 02.05.2017 ರಿಂದ 24.06.2017)<br>ಶ್ರೀಮತಿ ಮಂಜುಳ ಎಲ್, ಲೆಕ್ಕಾಧೀಕ್ಷಕರು<br>ಶ್ರೀಮತಿ ರೂಪಶ್ರೀ ಪಿ, ಲೆಕ್ಕಸಹಾಯಕರು<br>ಶ್ರೀಮತಿ ಹೇಮಲತಾ, ಲೆಕ್ಕಸಹಾಯಕರು<br>(ದಿನಾಂಕ: 02.05.2017 ರಿಂದ 22.05.2017) |
| 9 | ಮಾನವ ದಿನಗಳು | 136 |
| 10 | ಲೆಕ್ಕಪರಿಶೋಧನಾ ವರದಿಯ ಪುನರ್ ಪರಿಶೀಲನಾಧಿಕಾರಿಗಳು | ಶ್ರೀ ಎನ್.ಬಿ. ಶಿವರುದ್ರಪ್ಪ<br>ಅಪರ ನಿರ್ದೇಶಕರು<br>ಬೆಂಗಳೂರು ಪ್ರಾಂತೀಯ ಕಛೇರಿ<br>ಬೆಂಗಳೂರು |
| 11 | ಲೆಕ್ಕಪರಿಶೋಧನಾ ವರದಿಯ ಪುನರ್ ಪರಿಶೀಲನಾ ದಿನಾಂಕ | 19.04.2018 |

**ಭಾಗ-1**

**ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಲು ಇರುವ ಅಧಿಕಾರ ಪ್ರತ್ಯಾಯೋಜನೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ 2000 ರಲ್ಲಿ ಕಲಂ 47(3) ರಡಿಯಲ್ಲಿ ರಾಜ್ಯ ಲೆಕ್ಕಪತ್ರ ಇಲಾಖೆಯ ನಿಯಂತ್ರಕರು ತುಮಕೂರು ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು ವರ್ಷಕ್ಕೊಂದು ಬಾರಿ ಲೆಕ್ಕಪರಿಶೋಧನೆ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ವಿಶ್ವವಿದ್ಯಾಲಯದ 2015-16 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕುರಿತು ಅಧಿನಿಯಮ ಕಲಂ 47(4) ರಂತೆ ವಿಶ್ವವಿದ್ಯಾಲಯವು ಮುಂದಿನ ಕ್ರಮ ಕೈಗೊಳ್ಳಬೇಕಾಗಿದೆ.

ಈ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯನ್ನು ತಯಾರಿಸಿ ಸಿದ್ಧಪಡಿಸುವಾಗ ಈ ಕೆಳಕಂಡ ಕಾಯ್ದೆ ಸಂಹಿತೆ/ಮ್ಯಾನ್ಯುಲ್/ಕೈಪಿಡಿ ಅಕೌಂಟ್ಸ್ ಕೋಡ್ ಹಾಗೂ ಇತರೆ ನಿಯಮಗಳಲ್ಲಿ ಹೇಳಲಾಗಿರುವಂತೆ ಆಧರಿಸಿ ಲೆಕ್ಕಪರಿಶೋಧನಾ ವರದಿಯನ್ನು ಸಿದ್ಧಪಡಿಸಲಾಗಿದೆ.

1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ 2000
2. ಕರ್ನಾಟಕ ಆರ್ಥಿಕ ಸಂಹಿತೆ 1958
3., ಸಾದಿಲ್ವಾರು ವೆಚ್ಚದ ಕೈಪಿಡಿ-1958
4. ಆಯವ್ಯಯದ ಕೈಪಿಡಿ
5 ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆ 1 ಮತ್ತು 2
6. ಕರ್ನಾಟಕ ಲೋಕೋಪಯೋಗಿ ಇಲಾಖೆ ಲೆಕ್ಕ ಸಂಹಿತೆ
7. ಬೆಂಗಳೂರು ವಿಶ್ವವಿದ್ಯಾಲಯ ಆರ್ಥಿಕ ಸಂಹಿತೆಯ ಸಂಪುಟ 1 ಮತ್ತು 2
8. ಕರ್ನಾಟಕ ಸಾರ್ವಜನಿಕ ಸಂಕಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999
9. ಬೆಂಗಳೂರು ವಿಶ್ವವಿದ್ಯಾಲಯ ಖರೀದಿ ನಿಯಮಗಳು 2003 ಇದರಲ್ಲಿನ ನಿಯಮಗಳಲ್ಲಿನ ಪರಿನಿಯಮ, ಅನುಶಾಸನಗಳು ಮತ್ತು ಆರ್ಡಿನೆನ್ಸ್, ಇವುಗಳನ್ನು ಆಧರಿಸಿ ವರದಿಯನ್ನು ಸಿದ್ಧಪಡಿಸಿದೆ.

ತುಮಕೂರು ವಿಶ್ವವಿದ್ಯಾಲಯದಲ್ಲಿ 2015-16ನೇ ಸಾಲಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರವು ನಿಗಧಿಪಡಿಸಿದ ಆಯವ್ಯಯದ ಅನುದಾನ ಯೋಜನೆ/ಯೋಜನೇತರ ಲೆಕ್ಕ ಶೀರ್ಷಿಕೆಗಳಲ್ಲಿ ಬಿಡುಗಡೆ ಮಾಡಿರುವ ಅನುದಾನಗಳು, ವಿಶ್ವವಿದ್ಯಾಲಯವು ಸ್ವೀಕರಿಸಿರುವ ಪ್ರಾಯೋಜಕತ್ವ ಹಣ, ನೋಂದಣಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 2015-16ನೇ ಸಾಲಿಗೆ 81 ಬ್ಯಾಂಕ್ ಉಳಿತಾಯ ಖಾತೆಗಳನ್ನು ತೆರೆದು ವ್ಯವಹರಿಸುವುದು ಪರಿಶೀಲನೆಯಿಂದ ಕಂಡು ಬಂದಿರುತ್ತದೆ. ಅದೇ ರೀತಿ ಯೋಜನೆ/ಯೋಜನೇತರ ಲೆಕ್ಕ ಶೀರ್ಷಿಕೆಗಳಡಿಯಲ್ಲಿ, ಲಭ್ಯ ಅನುದಾನ, ವಿಶ್ವವಿದ್ಯಾಲಯದ ಸಂಪನ್ಮೂಲದ ಹಣಕ್ಕೆ ಸರಿಯಾಗಿ ಕ್ರಿಯಾ ಯೋಜನೆಗಳನ್ನು ತಯಾರಿಸಿ, ಕಾಮಗಾರಿಗಳವಾರು ಟೆಂಡರ್/ಕೋಟೇಷನ್ ಆಧಾರನುಸಾರ, ಸಿಂಡಿಕೇಟ್ ಸಭೆ ಅನುಮೋದನೆಯೊಂದಿಗೆ ವೆಚ್ಚ ಭರಿಸಲಾಗಿರುತ್ತದೆ. ಸದರಿ ವೆಚ್ಚಗಳಿಗೆ ಸಂಬಂಧಿಸಿದಂತೆ ಕಾಮಗಾರಿ ಬಿಲ್ಲುಗಳು, ಸಾಮಗ್ರಿ ಬಿಲ್ಲುಗಳು, ಅಂತರಜಾಲಕ್ಕೆ ಸಂಬಂಧಿಸಿದ ಬಿಲ್ಲುಗಳು, ಅಧಿಕಾರಿ/ಸಿಬ್ಬಂದಿ ವೇತನ ಭತ್ಯೆಗಳು, ಪ್ರಯಾಣ ಭತ್ಯೆ ವೈದ್ಯಕೀಯ ವೆಚ್ಚ ಮತ್ತು ಇಂಧನ ವೆಚ್ಚ, ವಾಹನ ದುರಸ್ಥಿ, ಗೌರವ ಸಂಭಾವನೆ, ಜಾಹೀರಾತು, ಪುಸ್ತಕ ಖರೀದಿ, ಗಣಕಯಂತ್ರಗಳ ನಿರ್ವಹಣೆ ಮತ್ತು ಇತರೆ ಕೆಲಸಗಳ ಪ್ರತಿ ವೆಚ್ಚಗಳಿಗೆ ಕುಲಪತಿಗಳ ಆಡಳಿತಾತ್ಮಕ ಅನುಮೋದನೆ ಹಣಕಾಸು/ಸಿಂಡಿಕೇಟ್ ಸಭೆಗಳ ಅನುಮೋದನೆಯೊಂದಿಗೆ, ಹಣಕಾಸು ಅಧಿಕಾರಿಗಳ ಪಾವತಿಯ ಆದೇಶದೊಂದಿಗೆ, ಹಣಕಾಸು ವ್ಯವಹಾರಗಳನ್ನು ನಿರ್ವಹಿಸಿರುವುದು ಪರಿಶೀಲನೆಯಿಂದ ತಿಳಿದುಬಂದಿದೆ.

**ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗಳಿಗೆ ಅನುಪಾಲನಾ ವರದಿ ಸಲ್ಲಿಸದಿರುವ ಬಗ್ಗೆ:** ತುಮಕೂರು ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಅಧಿನಿಯಮ2000 ಕಲಂ 47(3) ರಂತೆ ಲೆಕ್ಕಪರಿಶೋಧನೆ ಮಾಡಿ ವರದಿ ಸಲ್ಲಿಸಲಾಗಿರುತ್ತದೆ. 2014–15 ನೇ ಸಾಲಿನಲ್ಲಿ ಆಕ್ಷೇಪಣೆ ಮೊತ್ತ ರೂ 17,17,18,591.00 ಹಾಗೂ ವಸೂಲಾತಿ ಮೊತ್ತ ರೂ 61,89,475.00 ಗಳಾಗಿದ್ದು, ಕಂಡಿಕೆವಾರು ಅನುಪಾಲನಾ ವರದಿ ಸಲ್ಲಿಸಿ ತೀರುವಳಿ ಕ್ರಮವನ್ನು ಕೈಗೊಂಡಿರುವುದಿಲ್ಲ.

**ಭಾಗ–2**

**ತುಮಕೂರು ವಿಶ್ವವಿದ್ಯಾಲಯದ ಲೆಕ್ಕಪತ್ರಗಳು**

1. **ಲೆಕ್ಕಪರಿಶೋಧನಾ ವ್ಯಾಪ್ತಿ:–**

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಯ್ದೆ 2000 ಕಲಂ 47ರ ಕಲಂ(3) ರನ್ವಯ ತುಮಕೂರು ವಿಶ್ವವಿದ್ಯಾಲಯದ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ಇಲಾಖೆ, ಬೆಂಗಳೂರು ಇವರಿಗೆ ಅಧಿಕಾರ ವಹಿಸಲಾಗಿರುತ್ತದೆ.

ತುಮಕೂರು ವಿಶ್ವವಿದ್ಯಾಲಯದ 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಹಣಕಾಸು ಸಮಿತಿ ಪರಿಶೀಲಿಸಿ ದಿನಾಂಕ:16.05.2017 ರಂದು ಅನುಮೋದಿಸಿ ಶಿಫಾರಸ್ಸು ಮಾಡಿರುವುದನ್ನು ದಿನಾಂಕ: 20.05.2017 ರಂದು ಸಿಂಡಿಕೇಟ್ ಸಭೆ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆ ಅನುಮೋದನೆ ನೀಡಲಾಗಿರುತ್ತದೆ. ಸದರಿ ಅನುಮೋದಿತ ವಾರ್ಷಿಕ ಲೆಕ್ಕಪತ್ರಗಳನ್ನು ತು.ವಿ.ವಿ ವಿತ್ತಾಧಿಕಾರಿಗಳ ದಿನಾಂಕ:12.04.2017ರಂದು ಅಪರ ನಿರ್ದೇಶಕರು, ಬೆಂಗಳೂರು ಪ್ರಾಂತೀಯ ಕಛೇರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು ಕಛೇರಿಗೆ ಸಲ್ಲಿಸಲಾಗಿರುತ್ತದೆ.

2. **ವಿಶ್ವವಿದ್ಯಾಲಯದ ನಿಧಿಗಳು:–**

ತುಮಕೂರು ವಿಶ್ವವಿದ್ಯಾಲಯವು ತನ್ನ ಉದ್ದೇಶಿತ ಉನ್ನತ ಶಿಕ್ಷಣ ಪ್ರಸರಣಾ ಕಾರ್ಯ ಚಟುವಟಿಕೆಗಳಿಗಾಗಿ ಅಗತ್ಯವಿರುವ ಹಣಕಾಸು ನಿಧಿಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಕಲಂ 46(1) ರನ್ವಯ ನಿರ್ವಹಿಸಲಾಗುತ್ತಿದ್ದು, ಬಂಡವಾಳ ನಿಧಿ, ನಿರ್ದಿಷ್ಟ ನಿಧಿಗಳು ಹಾಗೂ ದತ್ತಿ ನಿಧಿಗಳೆಂದು ಪ್ರತ್ಯೇಕವಾಗಿ ವರ್ಗೀಕರಿಸಲಾಗಿದೆ. ಈ ನಿಧಿಗಳಿಗೆ ರಾಜಸ್ವ ಮೂಲಗಳು ಪ್ರಮುಖವಾಗಿ ವಿಶ್ವವಿದ್ಯಾಲಯದ ಧನ ಸಹಾಯ ಆಯೋಗದ ಅನುದಾನ ಹಾಗೂ ಕೇಂದ್ರ ಸರ್ಕಾರವು ನೀಡುವ ಅನುದಾನ, ಹೂಡಿಕೆಗಳಿಂದ ಸ್ವೀಕರಿಸಿದ ಆದಾಯ, ರಾಜ್ಯ ಸರ್ಕಾರದ ಅನುದಾನ, ರಾಜ್ಯ ಸರ್ಕಾರದ ಬ್ಲಾಕ್ ಗ್ರಾಂಟ್ಸ್, ಸಂಯೋಜನೆ, ಪ್ರವೇಶಾತಿ ಮತ್ತು ಪರೀಕ್ಷಾ ಶುಲ್ಕ ಹಾಗೂ ಇತರೆ ಚಾರ್ಜುಗಳು ಮತ್ತು ಇತರೆ ಮೂಲದಿಂದ ಸ್ವೀಕರಿಸಿದ ಆದಾಯಗಳು ಒಳಗೊಂಡಿರುತ್ತದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಕಲಂ 46(2) ರನ್ವಯ ವಿಶ್ವವಿದ್ಯಾಲಯದ ನಿಧಿಗಳನ್ನು ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1943 ರಲ್ಲಿ ಪರಿಭಾಷಿಸಿರುವಂತೆ ಅನುಸೂಚಿತ ಬ್ಯಾಂಕ್ ಅಥವಾ ಬ್ಯಾಂಕಿಂಗ್ ಕಂಪನಿಗಳು ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ ಅಧಿನಿಯಮ 1970ರ ಮೇರೆಗೆ ರಚಿತವಾದ ಹೊಸ ಸಂವಾದಿ ಬ್ಯಾಂಕ್‌ನಲ್ಲಿ ಇಡತಕ್ಕದ್ದು ಹಾಗೂ ವಿಶ್ವವಿದ್ಯಾಲಯದ ನಿಧಿಗಳನ್ನು ಬ್ಯಾಂಕ್‌ಗಳ ಮೂಲಕ ವ್ಯವಸ್ಥಿತ ನಿರ್ವಹಣೆಯನ್ನು ರಾಜ್ಯ ಸರ್ಕಾರದ ಆರ್ಥಿಕ ಇಲಾಖೆ ಹೊರಡಿಸಿರುವ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ. 5 ಟಿ.ಎಆರ್ 2017 ದಿನಾಂಕ: 30.01.2017 ರಲ್ಲಿ ಮಾರ್ಗಸೂಚಿ ನೀಡಿರುವಂತೆ ನಿರ್ವಹಿಸಿಬೇಕಾಗಿರುತ್ತದೆ.

### 3. ವಿಶ್ವವಿದ್ಯಾಲಯದ ಲೆಕ್ಕಪತ್ರ ನಿರ್ವಹಣೆ:–

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ 2000ರ ಕಲಂ 47(1 & 2) ರನ್ವಯ ಸಿದ್ಧಪಡಿಸಿ ಸಿಂಡಿಕೇಟ್‌ನಿಂದ ಅನುಮೋದನೆಗೊಂಡ 2015–16ನೇ ಸಾಲಿನ ತುಮಕೂರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ವಿವಿಧ ನಿಧಿಗಳಿಗೆ ಸಂಗ್ರಹವಾಗುವ ರಾಜಸ್ವ ಜಮೆಗಳು ಮತ್ತು ಈ ನಿಧಿಗಳಿಂದ ಪಾವತಿಯಾದ ವೆಚ್ಚಗಳ ಲೆಕ್ಕಪತ್ರಗಳನ್ನು ದ್ವಿನಮೂದು ಪದ್ಧತಿಯ ನಿಯಮಗಳನ್ನು ಅನುಸರಿಸಿ ನಿರ್ವಹಿಸಲಾಗಿದೆ. ದ್ವಿನಮೂದು ಪದ್ಧತಿ ಲೆಕ್ಕಪತ್ರಗಳ ನಿಯಮಗಳನುಸಾರ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಒಳಗೊಳ್ಳಬೇಕಾದ ಸ್ವೀಕೃತಿ ಮತ್ತು ಪಾವತಿಗಳ ತಃಖ್ತೆ

**Abstract of Revenue & Expenditure for the year ended 31.03.2016**

| | |
|---|---|
| Total Revenue/Income for the year 2015-16 | 26,42,92,130.00 |
| Deficit Excess of Expenditure over Income | 4,77,44,375.00 |
| **Total Rs.** | **31,20,36,505.00** |
| Total Expenditure for the year 2015-16 | 31,20,36,505.00 |
| **Total Rs.** | **31,20,36,505.00** |

**Balance Sheet as on 31.03.2016**

| LIABILITIES | Rs. | Amount Rs. | ASSETS | Rs. | Amount Rs. |
|---|---|---|---|---|---|
| Fund Balance: Opening Balance<br>(-) Capital/action for Fixed assets acquired<br>(-) Fixed Deposits<br>(-) Excess of Expenditure over Income | 68,99,93,874<br>3,42,66,125<br>8,25,97,372<br>4,77,44,375 | 85,91,12,996 | Fixed Assets less Depreciation:<br>Lands<br>Furniture & Fixtures<br>Plant & Machinery-I<br>Plant & Machinery-II | <br>42,24,87,155<br>97,78,177<br>5,25,17,905<br>3,27,258 | 48,51,10,496 |
| **Unspent Grant** | | **19,59,10,664** | **Investments** | | **33,42,32,125** |
| **Current Liabilities:**<br>Bank Guarantee EMD Etc.,<br>NPS Contribution | <br>3,49,207<br>6,42,32,567 | 6,45,81,774 | **Deposits**<br>**Advances** | | 7,17,851<br>1,15,000 |
| | | | **Bank Balances** | | **29,94,29,964** |
| | **Total Rs.** | **1,11,96,05,434** | | **Total Rs.** | **1,11,96,05,434** |

**4. ವಿಶ್ವವಿದ್ಯಾಲಯದ 2015–16ನೇ ಸಾಲಿನಲ್ಲಿ ವಿತ್ತೀಯ ಸ್ಥಿತಿಯ ಲೆಕ್ಕಪರಿಶೋಧನಾ ಅಭಿಪ್ರಾಯ:–**

ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ತುಮಕೂರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳು ಹಾಗೂ ಅದರ ಪರಿಶೀಲನೆಯನುಸಾರ 2015–16ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಆದಾಯಕ್ಕಿಂತ ವೆಚ್ಚಗಳೆ ರೂ. 4,77,44,375/– ಗಳಷ್ಟು ಹೆಚ್ಚುವರಿಯಾಗಿರುತ್ತದೆ. ಈ ಹೆಚ್ಚುವರಿ ವೆಚ್ಚವನ್ನು ಹಿಂದಿನ ಸಾಲುಗಳ ಸಂಚಯನಗೊಂಡ ನಿಧಿಯಿಂದ ಭರಿಸಲಾಗಿದ್ದು, ವಿಶ್ವವಿದ್ಯಾಲಯದ 2015–16ನೇ ಸಾಲಿನ ವೆಚ್ಚಗಳನ್ನು ಭರಿಸಲು ಇದೇ ಸಾಲಿನಲ್ಲಿ ಅಗತ್ಯ ರಾಜಸ್ವ ಸಂಗ್ರಹಣೆಯಾಗದೆ ವಿತ್ತೀಯ ಕೊರತೆ ಉಂಟಾಗಿರುತ್ತದೆ. ವಿಶ್ವವಿದ್ಯಾಲಯದ ರಾಜಸ್ವ ಸಂಗ್ರಹಣೆಗೆ ಅನುಸಾರವಾಗಿ ವೆಚ್ಚಗಳ ಸಮತೋಲನ ಕಾಪಾಡುವುದು ಅಥವಾ ವೆಚ್ಚಗಳ ಅಂದಾಜುಗಳ ಆಧಾರದ ಮೇಲೆ ಸರಿದೂಗಿಸುವ ರಾಜಸ್ವ ಸಂಗ್ರಣೆಯ ಬಗ್ಗೆ ಸೂಕ್ತ ಆಡಳಿತಾತ್ಮಕ ಕ್ರಮವನ್ನು ಕೈಗೊಳ್ಳದೆ ಇದೇ ರೀತಿ ಹೆಚ್ಚುವರಿಯಾಗಿ ವ್ಯಯ ಮಾಡುವುದು ಮುಂದುವರೆದರೆ, ಸಂಗ್ರಹಿತ ನಿಧಿಯು ಕ್ಷೀಣಿಸಿ ಮುಂದಿನ ವರ್ಷಗಳಲ್ಲಿ ವಿತ್ತೀಯ ಕೊರತೆಯನ್ನು ವಿಶ್ವವಿದ್ಯಾಲಯವು ಎದುರಿಸಬೇಕಾಗುವ ಪರಿಸ್ಥಿತಿಯನ್ನು ತಳ್ಳಿಹಾಕುವಂತಿಲ್ಲ. ಮುಂದುವರೆದು, ನಿರ್ದಿಷ್ಟ ಆರ್ಥಿಕ ವರ್ಷದಲ್ಲಿ ಆದಾಯಕ್ಕಿಂತ ವೆಚ್ಚಗಳೆ ಹೆಚ್ಚಾಗಿದ್ದ ಸಂದರ್ಭದಲ್ಲಿ ಸರ್ಕಾರಿ ಸ್ವಾಯತ್ತ ಸಂಸ್ಥೆಯಾಗಿರುವ ವಿಶ್ವವಿದ್ಯಾಲಯವು ತನ್ನ ಸ್ಥಿರಾಸ್ತಿಗಳಿಗೆ ಸವಕಳಿ ವೆಚ್ಚವನ್ನು ವಿಧಿಸುವುದು ಅವಶ್ಯವಿರುವುದಿಲ್ಲ. 2015–16ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಆದಾಯ ಋಣಾತ್ಮಕವಾಗಿದ್ದರೂ ಸಹ ತನ್ನ ಸ್ವರಾಸ್ತಿಗಳ ಮೇಲೆ ರೂ. 1,17,29,919.00 ಗಳ ಸವಕಳಿ ವೆಚ್ಚವನ್ನು ವಿಧಿಸಿ, ನಷ್ಟವಾಗಿರುವ ಮೊತ್ತದ ಅಂಕಿಅಂಶವನ್ನು ಹೆಚ್ಚಿಸಲು ಕೊಡುಗೆ ನೀಡಿರುತ್ತದೆ. (Receipts & Payments Statement), ರಾಜಸ್ವ/ಆದಾಯ ಮತ್ತು ವೆಚ್ಚಗಳ ತಃಖ್ತೆ (Revenue/Income & Expenditure Statement) ಹಾಗೂ ಅಡಾವೆ ಪತ್ರಿಕೆ (Balance Sheet) ಗಳನ್ನು ಮಂಡಿಸಿರುತ್ತದೆ. ಈ ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ದ್ವಿ ನಮೂದು ಲೆಕ್ಕಪತ್ರ ಪದ್ಧತಿ ಪ್ರಕಾರ ವಿಶ್ವವಿದ್ಯಾಲಯವು ಅಳವಡಿಸಿಕೊಂಡಿರುವ ಲೆಕ್ಕಪತ್ರಗಳ ತತ್ವಗಳಾಗಲಿ (Accounting Policies) ಗಳನ್ನು ಹಾಗೂ ನಗದು ವಹಿವಾಟು ಅಥವಾ ಸಂಚಯನ ಪದ್ಧತಿಯನ್ನು (Accrual System) ಅನುಸರಿಸುತ್ತಿರುವ ವಿಷಯವಾಗಲಿ ಅಂಶಗಳ ಆಧಾರದ ಮೇಲೆ ವಿಶ್ವವಿದ್ಯಾಲಯದ ಲೆಕ್ಕಪತ್ರ ನಿರ್ವಹಣೆಯ ಕುರಿತು ಮುಂದಿನ ಕಂಡಿಕೆಗಳಲ್ಲಿ ಪ್ರಸ್ತಾಪಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಯ್ದೆ 2000ರ ಕಲಂ 32(3)(i) ರನ್ವಯ ಲೆಕ್ಕಪತ್ರಗಳ ನಿಖರತೆಯನ್ನು ಪರಿಶೀಲಿಸಿ ಖಚಿತಪಡಿಸುವ ಹೊಣೆ ವಿಶ್ವವಿದ್ಯಾಲಯದ ಹಣಕಾಸು ಸಮಿತಿಯ ಮೇಲಿದ್ದು, 2015–16ನೇ ಸಾಲಿನ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಪರಿಗಣಿಸಿರುವ ಬ್ಯಾಂಕ್ ಖಾತೆಗಳನ್ನು ಹಣಕಾಸು ಸಮಿತಿ ಪರಿಶೀಲಿಸಿ ದೃಢಪಡಿಸಿದೆ ಎಂದು ಭಾವಿಸಿ, ತುಮಕೂರು ವಿಶ್ವವಿದ್ಯಾಲಯದ 2015–16 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಲೆಕ್ಕಪರಿಶೋಧನಾ ಕಾರ್ಯವನ್ನು ಪರೀಕ್ಷಾರ್ಥವಾಗಿ ಕೈಗೊಳ್ಳಲಾಗಿದೆ.

ಸಿಂಡಿಕೇಟ್‌ನಿಂದ ಅಂಗೀಕೃತವಾದ ವಿಶ್ವವಿದ್ಯಾಲಯದ 2015–16ನೇ ಸಾಲಿನ ಲೆಕ್ಕಪತ್ರಗಳಾದ ಸ್ವೀಕೃತಿ ಮತ್ತು ಪಾವತಿಗಳ ತಃಖ್ತೆ ಮತ್ತು ಅಡಾವೆ ಪತ್ರಿಕೆಗಳ ಸಂಕ್ಷಿಪ್ತ ಚಿತ್ರಣ ಕೆಳಕಂಡಂತಿದೆ.

## Receipts and Payments for the year 2015-16

| Receipts | | | Paymentss | | |
|---|---|---|---|---|---|
| Opening Balance | | 28,06,83,464 | | | |
| Capital Receipts:<br>Specific Grants | | 34,12,64,135 | **Capital Payments:**<br>Fixed Assets<br>Fixed Deposit Renewed<br>FD Interest Receivable | 3,43,86,530<br>18,25,97,372<br>1,09,44,371 | **22,79,28,273** |
| Normal Receipts:<br>Receipt of<br>Various<br>Fees Charged by<br>the University | | 16,11,02,819 | **Normal Payments:**<br>Employee related Expenses<br>Education related expenses<br>Student welfare activities<br>Administration expenses | 19,52,74,050<br>3,86,75,322<br>22,90,847<br>6,40,66,367 | 30,03,06,586 |
| **Other Receipts:**<br>NPS<br>Contributions<br>Other incomes | | 1,81,65,525<br>2,65,63,878 | **Other Payments** | | |
| | | | Advances | | **1,15,000** |
| | | | Closing Balances | | **29,94,29,964** |
| | **Total Rs.** | **82,77,79,821** | | **Total Rs.** | **82,77,79,823** |

**ಟಿಪ್ಪಣಿ:–**

1) ಪಾವತಿಗಳ ಭಾಗದಲ್ಲಿ ಒಟ್ಟು ಮೊತ್ತದಲ್ಲಿ ರೂ. 3 ಗಳ ವ್ಯತ್ಯಾಸ ತೋರಿಸಲಾಗಿದೆ.
2) 2014–15ನೇ ಸಾಲಿನ ಅಂತಿಮ ಶಿಲ್ಕುವಿನೊಂದಿಗೆ 2015–16ನೇ ಸಾಲಿನ ಪ್ರಾರಂಭಿಕ ಶಿಲ್ಕುವನ್ನು ಪರಿಶೀಲಿಸಿದಾಗ ರೂ. 202.00 ಗಳ ವ್ಯತ್ಯಾಸ ಕಂಡುಬಂದಿದ್ದು, 2015–16ನೇ ಸಾಲಿನ ಪ್ರಾರಂಭಿಕ ಶಿಲ್ಕುವನ್ನು ಲೆಕ್ಕಪರಿಶೋಧನೆಯು ಒಪ್ಪಿರುವುದಿಲ್ಲ.

| ಕ್ರ.ಸಂ. | ಲೆಕ್ಕ ಪರಿಶೋಧನೆಯ ವಿವರಗಳು | ಅನುಸರಣಾ ವರದಿ |
|---|---|---|
| **5.** | **ನಿಶ್ಚಿತ ಠೇವಣಿಗಳ ಹೂಡಿಕೆಗಳು:–**<br>2015–16 ನೇ ಸಾಲಿನ ಲೆಕ್ಕಪತ್ರದಂತೆ Balance Sheet as on.31.03.2016 ರಂತೆ ಚಾಲ್ತಿ ಆಸ್ತಿಗಳು Investment Deposit ರೂ.334232125.00 ಗಳೆಂದು ತೋರಿಸಿದ್ದು, ಲೆಕ್ಕತನಿಖೆಯಲ್ಲಿ F.D.R ನಂತೆ ರೂ.35,80,13,789.00 ಗಳು ಕಂಡು ಬಂದಿದ್ದು. ರೂ.2,37,81,664.00 ಗಳ ವ್ಯತ್ಯಾಸ ಉಂಟಾಗಿದ್ದು, ರೂ.2,37,81,664.00 ಆಕ್ಷೇಪಣೆಯಲ್ಲಿಡಲಾಗಿದೆ. | ತುಮಕೂರು ವಿಶ್ವವಿದ್ಯಾನಿಲಯದಲ್ಲಿ 2015–16ನೇ ಸಾಲಿನಲ್ಲಿ ನಿಶ್ಚಿತ ಠೇವಣಿ ಹೂಡಿಕೆಗಳಲ್ಲಿ ವ್ಯತ್ಯಾಸದ ಬಗ್ಗೆ ರೂ. 2,37,81,664/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಮುಂದುವರೆಯುತ್ತಾ ವಿಶ್ವವಿದ್ಯಾನಿಲಯದಲ್ಲಿ ಹೂಡಿಕೆ ಮಾಡಿರುವ ನಿಶ್ಚಿತ ಠೇವಣಿಗಳನ್ನು ಲೆಕ್ಕ ಸಮನ್ವಯಗೊಳಿಸಿ ಮುಂದಿನ ಲೆಕ್ಕ ಪರಿಶೋಧನೆಯಲ್ಲಿ ಸಲ್ಲಿಸಲಾಗುವುದು ಆದ್ದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| **6.** | **ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ಕುರಿತು ಲೆಕ್ಕಪರಿಶೋಧನಾ ವಿಶ್ಲೇಷಣೆ:–**<br>ತುಮಕೂರು ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು ದ್ವಿ ನಮೂದು ಪದ್ಧತಿಯ ಅನ್ವಯ ನಿರ್ವಹಿಸಲಾಗಿರುವುದು ಕಂಡುಬಂದರೂ ಸಹ ಇದರ ನೈಜತೆಯ ಪರಿಶೀಲನೆಗೆ ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಲು ಅಗತ್ಯವಿರುವ ಲೆಡ್ಜರ್‌ಗಳನ್ನು ಹಾಗೂ ಲೆಕ್ಕಪತ್ರ ನಿರ್ವಹಣೆಗೆ ಪಾಸು ಮಾಡಲಾದ ಅಗತ್ಯ ವೋಚರ್‌ಗಳ ದಾಖಲಾತಿಗಳು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು ಯಾವುದೇ ಲೆಕ್ಕಪತ್ರಗಳ ತಂತ್ರಾಂಶದಲ್ಲಿ ನಿರ್ವಹಿಸಿರುವುದಿಲ್ಲ ಹಾಗೂ ಮ್ಯಾನ್ಯೂಯಲ್ ರೂಪದಲ್ಲಿ ಲೆಡ್ಜರ್‌ಗಳ ವಹಿಗಳನ್ನು ನಿರ್ವಹಿಸದಿರುವುದು ಲೆಕ್ಕಪರಿಶೋಧನೆಯಿಂದ ಕಂಡುಬಂದಿರುತ್ತದೆ. ನಗದು ಪುಸ್ತಕಗಳ ಅಂತಿಮ ಶಿಲ್ಕುಗಳನ್ನು ಬ್ಯಾಂಕ್ ಪಾಸ್ ಶೀಟುಗಳೊಂದಿಗೆ ಲೆಕ್ಕಸಮನ್ವಯಿಕರಿಸಿರುವುದು ಮಾತ್ರ ಖಾತರಿಯಾಗಿದ್ದು, ಇದರಲ್ಲಿ ಠೇವಣಿ ಖಾತೆಯ ಲೆಕ್ಕಸಮನ್ವಯ ಮಾಡದೇ ಇರುವುದೂ ಸಹ ಗಮನಿಸಲಾಗಿದೆ.<br><br>ದ್ವಿ ನಮೂದು ಪದ್ಧತಿಗೆ ಅನಿವಾರ್ಯವಾದ ಪ್ರತ್ಯೇಕ ಖಾತೆಗಳ ಲೆಡ್ಜರ್‌ಗಳನ್ನು ನಿರ್ವಹಿಸದೆ ಸ್ವೀಕೃತಿ ಮತ್ತು ಪಾವತಿಗಳ ತಃಖ್ತೆ (Receipts & Payments Statement) ರಾಜಸ್ವ/ಆದಾಯ ಮತ್ತು ವೆಚ್ಚಗಳ ತಃಖ್ತೆ (Revenue/Income & Expenditure Statement) ಹಾಗೂ ಅಡಾವೆ ಪತ್ರಿಕೆ (Balance Sheet) ಗಳನ್ನು ಸಿದ್ಧಪಡಿಸಿರುವುದು ಗಮನಿಸಿದರೆ, ನಗದು ಪುಸ್ತಕಗಳ ವಹಿವಾಟುಗಳ ಆಧಾರದ ಮೇಲೆ ಅನುಸೂಚಿಯಲ್ಲಿ ಸಂಕ್ಷಿಪ್ತ ವಿವರಣೆಯೊಂದಿಗೆ ಸಿದ್ಧಪಡಿಸಿರುವುದು ಖಚಿತವಾಗಿದೆ ಹಾಗೂ ದ್ವಿ ನಮೂದು ಪದ್ಧತಿಯ ಲೆಕ್ಕಪತ್ರಗಳ ನಿಯಮ/ತತ್ವಗಳ ಅನುಸಾರ ನಿರ್ವಹಿಸಬೇಕಾದ ಎಲ್ಲಾ ದಾಖಲಾತಿಗಳು ಪೂರ್ಣವಾಗಿ ನಿರ್ವಹಿಸದಿರುವುದೂ ಸಹ ಲೆಕ್ಕಪತ್ರಗಳ ಪರಿಶೀಲನೆಯಿಂದ ಸ್ವಯಂವೇದ್ಯವಾಗಿರುತ್ತದೆ.<br><br>ತುಮಕೂರು ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು ಸಂಪೂರ್ಣವಾಗಿ ನಗದು ವಹಿವಾಟುಗಳ ಆಧಾರದ ಮೇಲೆ ಸಿದ್ಧಪಡಿಸಿರುತ್ತದೆಯೆಂದು ಸಹ ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ. | ಸದರಿ ಅಂಶಗಳನ್ನು ಗಮನಿಸಲಾಗಿದ್ದು, ಇನ್ನು ಮುಂದೆ ಲೆಕ್ಕ ದಾಖಲೆಗಳ ನಿರ್ವಹಣೆಯಲ್ಲಿ ಅಳವಡಿಸಿಕೊಳ್ಳಲಾಗುವುದು. |
| **7.** | **ಲೆಕ್ಕಪರಿಶೋಧನಾ ಅಭಿಪ್ರಾಯ:–**<br>ತುಮಕೂರು ವಿಶ್ವವಿದ್ಯಾಲಯದ ದಿನಾಂಕ: 31.03.2016ರ ಅಂತ್ಯಕ್ಕೆ ಇರುವ ಅಡಾವೆ ಪತ್ರಿಕೆ, ರಾಜಸ್ವ ಮತ್ತು ವೆಚ್ಚಗಳ ತಃಖ್ತೆ ಹಾಗೂ ಸ್ವೀಕೃತಿ ಮತ್ತು ಪಾವತಿಗಳ ತಃಖ್ತೆಗಳನ್ನೊಳಗೊಂಡ ವಾರ್ಷಿಕ | **ಗಮನಿಸಲಾಗಿದೆ.** |

ಹಣಕಾಸು ಲೆಕ್ಕಪತ್ರಗಳನ್ನು ವಿಶ್ವವಿದ್ಯಾಲಯವು ಅಳವಡಿಸಿಕೊಂಡಿರುವ ಲೆಕ್ಕಪತ್ರ ನಿರ್ವಹಣಾ ನೀತಿಗಳು ಮತ್ತು ಲೆಕ್ಕಪತ್ರಗಳ ಕುರಿತು ನೀಡಲಾಗಿರುವ ವಿವರಣೆಗಳನ್ನಾಧರಿಸಿ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿದೆ.

ವಿಶ್ವವಿದ್ಯಾಲಯದ ಹಣಕಾಸು ಸ್ಥಿತಿ, ಹಣಕಾಸು ವಹಿವಾಟಿನ ಕಾರ್ಯಕ್ಷಮತೆ ಮತ್ತು ಹಣಕಾಸಿನ ಹರಿವುಗಳ ನೈಜ ಮತ್ತು ನ್ಯಾಯೋಚಿತ ಮಾಹಿತಿಗಳನ್ನೊದಗಿಸುವ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವ ಹೊಣೆ ವಿಶ್ವವಿದ್ಯಾಲಯದ ಹಣಕಾಸು ಸಮಿತಿಯದ್ದಾಗಿರುತ್ತದೆ. ಈ ಹೊಣೆ/ಜವಾಬ್ದಾರಿಯಲ್ಲಿ ಲೆಕ್ಕಪತ್ರದ ತಪ್ಪುಗಳು ಅಥವಾ ದುರುಪಯೋಗಗಳ ಮರೆಮಾಚುವಂತಹ ವಿಷಯಗಳಿಂದ ಮುಕ್ತವಾದ ಹಾಗೂ ನೈಜ ಮತ್ತು ನ್ಯಾಯೋಚಿತ ಸ್ಥಿತಿಗಳನ್ನು ತೋರಿಸುವ ವಾರ್ಷಿಕ ಲೆಕ್ಕಪತ್ರಗಳ ಸಿದ್ಧಪಡಿಸುವಿಕೆ ಮತ್ತು ಅದರ ಮಂಡನೆಗೆ ಅಗತ್ಯವಿರುವ ವಿಶ್ವವಿದ್ಯಾಲಯದ ಆಂತರಿಕ ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ವ್ಯವಸ್ಥಿತ ನಿರ್ವಹಣೆಗಳನ್ನೊಳಗೊಂಡಿರುತ್ತದೆ.

ಲೆಕ್ಕಪರಿಶೋಧನೆಯ ಹೊಣೆಯು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳ ಆಧಾರದ ಮೇಲೆ ವಿಶ್ವವಿದ್ಯಾಲಯದ ಹಣಕಾಸು ಲೆಕ್ಕಪತ್ರಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸುವ ಮಿತಿಗೆ ಸೀಮಿತವಾಗಿರುತ್ತದೆ. ತುಮಕೂರು ವಿಶ್ವವಿದ್ಯಾಲಯಕ್ಕೆ ಅನ್ವಯಿಸುವಂತಹ ಕಾಯ್ದೆ, ನಿಯಮಗಳು ಮತ್ತು ಇತರೆ ಶಾಸನಗಳಲ್ಲಿ ಕಲ್ಪಿಸಲಾದ ಅವಕಾಶಗಳು ಹಾಗೂ ಲೆಕ್ಕಪರಿಶೋಧನಾ ವಿಧಾನಗಳ ಅನುಸಾರ ಲೆಕ್ಕಪರಿಶೋಧನೆಯನ್ನು ಕೈಗೊಂಡಿರುತ್ತದೆ.

ಈ ಲೆಕ್ಕಪರಿಶೋಧನೆಯಲ್ಲಿ ಪರೀಕ್ಷಾರ್ಥವಾಗಿ ಕೈಗೊಳ್ಳಲಾದ ಹಣಕಾಸು ವಹಿವಾಟುಗಳ ಪರಿಶೀಲನೆ, ತೋರಿಸಲಾಗಿರುವ ಮೊತ್ತಕ್ಕೆ ಆಧಾರವಾಗಿರುವಂತಹ ವೋಚರ್‌ಗಳು ಮತ್ತು ವಾರ್ಷಿಕ ಲೆಕ್ಕಪತ್ರಗಳಲ್ಲಿ ಬಹಿರಂಗಪಡಿಸಲಾದ ಅಂಶಗಳು ಒಳಗೊಂಡಿರುತ್ತದೆ. ವಿಶ್ವವಿದ್ಯಾಲಯದ ಲೆಕ್ಕಪತ್ರಗಳಲ್ಲಿ ಲೆಕ್ಕಪತ್ರ ನಿರ್ವಹಣೆಯ ತತ್ವಗಳ ಅಳವಡಿಕೆ, ವಿಶ್ವವಿದ್ಯಾಲಯದ ಆಡಳಿತದಿಂದ ಮಾಡಲಾದ ಪ್ರಮುಖವಾದ ಅಂದಾಜುಗಳು ಹಾಗೂ ಒಟ್ಟಾರೆಯಾಗಿ ವಾರ್ಷಿಕ ಲೆಕ್ಕಪತ್ರಗಳ ಮಂಡನೆ ಮಾಡಲಾದ ಕುರಿತು ಮೌಲ್ಯೀಕರಣದ ಅಂಶಗಳೂ ಸಹ ಈ ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುತ್ತದೆ. ಲೆಕ್ಕಪರಿಶೋಧನಾ ಸಮಯದಲ್ಲಿ ಲಭ್ಯವಿದ್ದ ದಾಖಲೆಗಳ ಆಧಾರದ ಮೇಲೆ ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತದೆ.

ಲೆಕ್ಕಪರಿಶೋಧನೆಯ ಅಭಿಪ್ರಾಯದಂತೆ ಹಾಗೂ ಲೆಕ್ಕಪರಿಶೋಧನೆಗೆ ದೊರಕಿರುವ ಮಾಹಿತಿಗಳು ಮತ್ತು ವಿವರಣೆಗಳನುಸಾರ ಈ ಮೇಲೆ ಪ್ರಸ್ತಾಪಿಸಲಾದ ಕಂಡಿಕೆಗಳಲ್ಲಿರುವ ಅಂಶಗಳನ್ವಯ ತುಮಕೂರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳಲ್ಲಿ ವಿಶ್ವವಿದ್ಯಾಲಯಕ್ಕೆ ಅನ್ವಯಿಸುವ ಕಾಯ್ದೆ, ನಿಯಮಗಳು, ಶಾಸನಗಳಲ್ಲಿರುವ ಅವಕಾಶಗಳು ಮತ್ತು ಲೆಕ್ಕಪತ್ರ ನಿರ್ವಹಣೆಯ ತತ್ವಗಳಲ್ಲಿನ ಅಂಶಗಳು ಪೂರ್ಣವಾಗಿ ಪಾಲಿಸದಿರುವುದು ಸ್ಪಷ್ಟವಾಗುವ ಕಾರಣ ಲೆಕ್ಕಪತ್ರಗಳಲ್ಲಿನ ಅಂಕಿಅಂಶಗಳು ನೈಜ ಮತ್ತು ನ್ಯಾಯೋಚಿತವಾಗಿರುವುದೆಂದು ದೃಢಪಡಿಸಲು ಕಷ್ಟಸಾಧ್ಯವಾಗಿರುತ್ತದೆ ಮತ್ತು ವರದಿಯಲ್ಲಿ ಪ್ರಸ್ತಾಪಿಸಿರುವ ಎಲ್ಲಾ ಕಾರಣಗಳಿಂದ 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಯು ಅಂಗೀಕರಿಸಿ ದೃಢೀಕರಿಸಿರುವುದಿಲ್ಲ.

**ಹಣಕಾಸು ವಹಿವಾಟುಗಳಲ್ಲಿ ಕಂಡು ಬಂದ ಪ್ರಮುಖ ಪ್ರಕರಣಗಳು:**

**ಸಿಬ್ಬಂದಿ ಸಂಬಂಧಿತ ನಿಯಮ ಪಾಲಿಸದೆ ಮಾಡಿರುವ ವೆಚ್ಚಗಳು:**

| | | |
|---|---|---|
| **8.** | **ನಿಯಮ ಬಾಹಿರವಾಗಿ ಗೃಹ ಪರಿಚಾರಕ ಭತ್ಯೆ ಪಾವತಿಸಿರುವ ಬಾಬ್ತು ರೂ. 1,56,000 + 96,000 = 2,52,000 ಗಳನ್ನು ವಸೂಲಾತಿಯಲ್ಲಿಡಲಾಗಿದೆ:–**<br>2015–16ನೇ ಸಾಲಿನ ತುಮಕೂರು ವಿಶ್ವವಿದ್ಯಾನಿಲಯದ ಲೆಕ್ಕ ಪರಿಶೀಲನೆಯಲ್ಲಿ ಬ್ಯಾಂಕ್ ಖಾತೆ ಸಂ. 64061828368 ರ ವೋಚರ್‌ಗಳನ್ನು ಪರಿಶೀಲಿಸಲಾಗಿ ಕುಲಸಚಿವರು (ಆ) ಇವರಿಗೆ ಮಾಹೆಯಾನ ರೂ. 5,000/– ಮತ್ತು ಕುಲಸಚಿವರು (ಮೌ) ಮಾಹೆಯಾನ ಇವರಿಗೆ ರೂ.5,000/– ಹಾಗೂ ವಿತ್ತಾಧಿಕಾರಿಗಳಿಗೆ ಮಾಹೆಯಾನ ರೂ.3000/–ಗಳಂತೆ ಗೃಹ ಪರಿಚಾರಕ ಭತ್ಯೆಯನ್ನು ನೀಡಿರುವುದು ಕಂಡುಬಂದಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ:ಸಿ.ಆಸುಇ 232 ಸಿಸೇನಿ 2011, ಬೆಂ ದಿನಾಂಕ:22.10.2011 ರ ಆದೇಶದನ್ವಯ ಕುಲಸಚಿವರು (ಆ)ಕುಲಸಚಿವರು (ಮೌ) ಹಾಗೂ ವಿತ್ತಾಧಿಕಾರಿಗಳು ಇವರಿಗೆ ಗೃಹಪರಿಚಾರಕ ಭತ್ಯೆಯನ್ನು ನೀಡಲು ಅವಕಾಶವಿರುವುದಿಲ್ಲ. ನಿಯಮಗಳನ್ನು ಉಲ್ಲಂಘಿಸಿ ಸದರಿ ಸಾಲಿನಲ್ಲಿ ಪಾವತಿಸಿರುವ ಒಟ್ಟು ಮೊತ್ತ ರೂ. 1,56,000/–ಗಳನ್ನು ವಸೂಲಾತಿಗೆ ಸೂಚಿಸಿದೆ.<br>ಕಡತ ಸಂಖ್ಯೆ:TU/ENG120/2014–15 ರ ಪರಿಶೀಲನೆಯಲ್ಲಿ ಮೆ॥ ಕ್ಲೀನ್ ಅಂಡ್ ಕೇರ್ ಬೆಂ. ವತಿಯಿಂದ ದಿನನಿತ್ಯವೂ ಒಬ್ಬ ಸಿಬ್ಬಂದಿಯು ಕುಲಪತಿಗಳ ನಿವಾಸದಲ್ಲಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸಿರುವುದು ಕಂಡುಬಂದಿದ್ದು, ಈ ಮೇಲ್ಕಂಡ ಬ್ಯಾಂಕ್ ಖಾತೆ ವೋಚರ್‌ಗಳ ಪರಿಶೀಲನೆಯಲ್ಲೂ ಮಾನ್ಯ ಕುಲಪತಿಗಳಿಗೆ ಮಾಹೆಯಾನ ರೂ. 8,000/–ಗಳನ್ನು ಗೃಹ ಪರಿಚಾರಕ ಭತ್ಯೆಯನ್ನು ಪಾವತಿಸಿರುವುದು ಕಂಡು ಬಂದಿರುತ್ತದೆ. ನಿಯಮಗಳ ಪ್ರಕಾರ ಒಬ್ಬ ಸಿಬ್ಬಂದಿಯನ್ನು ಮಾತ್ರ ಕುಲಪತಿಗಳಿಗೆ ಗೃಹ ಪರಿಚಾರಕರನ್ನು ಅಥವಾ ಗೃಹಪರಿಚಾರಕ ಭತ್ಯೆ ನೀಡಲು ಅವಕಾಶವಿರುತ್ತದೆ. ಆದ್ದರಿಂದ ಸದರಿ ಸಾಲಿನಲ್ಲಿ ಮಾನ್ಯ ಕುಲಪತಿಗಳಿಗೆ ಪಾವತಿಸಿರುವ ಗೃಹ ಪರಿಚಾರಿಕ ಭತ್ಯೆ ಒಟ್ಟು ರೂ.96,000/–ಗಳನ್ನು ವಸೂಲಾತಿಗೆ ಸೂಚಿಸಿದೆ.<br>ನೀಡಿರುವ ಅನುಸರಣೆಯನ್ನು ಲೆಕ್ಕಪರಿಶೋಧನೆಯಲ್ಲಿ ಒಪ್ಪಲಾಗದ ಕಾರಣ ಕಂಡಿಕೆ ಮುಂದುವರೆದಿದೆ. | ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 232 ಸಿಸೇನಿ 2011, ದಿನಾಂಕ: 22.10.2011 ರಲ್ಲಿ ನಮೂದಿಸಿರುವಂತೆ ವಿಶ್ವವಿದ್ಯಾನಿಲಯದ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 14 ರಲ್ಲಿ ವಿವರಿಸಿರುವಂತೆ ಕುಲಪತಿಗಳು ಪೂರ್ಣ ಕಾಲಿಕ ರಾಜ್ಯ ಸರ್ಕಾರದ ಉನ್ನತ ಶ್ರೇಣಿಯ ಅಧಿಕಾರಿಗಳ ಶ್ರೇಣಿಗೆ ಸಮನಾಗಿರುವುದರಿಂದ ಸದರಿಯವರಿಗೆ ರೂ. 8,000/– ಗಳ ಗೃಹ ಪರಿಚಾರಕ ಭತ್ಯೆಯನ್ನು ಸಿಂಡಿಕೇಟ್ ಸಭಾ ನಿರ್ಣಯದಂತೆ ಪಾವತಿಸಲಾಗಿರುತ್ತದೆ.<br><br>ಮಾನ್ಯ ಕುಲಪತಿಗಳ ನಿವಾಸದ ಒಳಾಂಗಣ ಮತ್ತು ಅಡುಗೆ ಮನೆ ಸ್ವಚ್ಛತಾ ಕಾರ್ಯಗಳಿಗೆ ಮಾಹೆಯಾನ ರೂ. 8,000/– ಗಳ ಗೃಹ ಪರಿಚಾರಕ ಭತ್ಯೆಯನ್ನು ಪಾವತಿಸಲಾಗಿದೆ. ಆದರೆ ಕುಲಪತಿಗಳ ನಿವಾಸದ ಹೊರಾಂಗಣ, ಉದ್ಯಾನವನ, ಶೌಚಾಲಯ ಹಾಗೂ ಹೊರಗಿನ ಇನ್ನಿತರೆ ಸ್ವಚ್ಛತಾ ಕಾರ್ಯಗಳನ್ನು ನಿರ್ವಹಿಸಲು ಮೆ॥ ಕ್ಲೀನ್ ಅಂಡ್ ಕೇರ್ ಬೆಂ. ವತಿಯಿಂದ ಹೊರಗುತ್ತಿಗೆಯಡಿ ಒಬ್ಬ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಸದರಿ ಸಿಬ್ಬಂದಿಗೆ ಪಾವತಿಸಿರುವ ರೂ. 96,000/– ಗಳ ವಸೂಲಾತಿ ಆಕ್ಷೇಪಣೆಯನ್ನು ಕೈಬಿಡಬೇಕಾಗಿ ಕೋರಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 232 ಸಿಸೇನಿ 2011, ದಿನಾಂಕ:22.10.2011 ರಲ್ಲಿ ನಮೂದಿಸಿರುವಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 17 ರಲ್ಲಿ ವಿವರಿಸಿರುವಂತೆ ಕುಲಸಚಿವರು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು, ಸೂಪರ್–ಟೈಮ್ ಶ್ರೇಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ (ಕಾರ್ಯದರ್ಶಿಗಳು) ಅಧಿಕಾರಿಯಾಗಿರುತ್ತಾರೆ.<br>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 18 ರಲ್ಲಿ ವಿವರಿಸಿರುವಂತೆ ಕುಲಸಚಿವರು (ಮೌಲ್ಯ ಮಾಪನ)ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು,ಸಮೂಹ 'ಎ'ಹಿರಿಯ ಶ್ರೇಣಿಯ ದರ್ಜೆಗೆ ಕಡಿಮೆಯಿಲ್ಲದ ಕರ್ನಾಟಕ ಆಡಳಿತ ಸೇವೆಗೆ ಸೇರಿದ ಸಮಾನಂತರ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ(ಇಲಾಖಾಮುಖ್ಯಸ್ಥರು) ಅಧಿಕಾರಿಯಾಗಿರುತ್ತಾರೆ.<br>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 19 ರಲ್ಲಿ ವಿವರಿಸಿರುವಂತೆ ಹಣಕಾಸು ಅಧಿಕಾರಿಗಳು |

| | | |
|---|---|---|
| | | ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು, ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಜಂಟಿ ನಿಯಂತ್ರಕ ಕೇಡರ್ ಸಮಾಂತರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ(ಇಲಾಖಾಮುಖ್ಯಸ್ಥರು) ಅಧಿಕಾರಿಯಾಗಿರುತ್ತಾರೆ.<br><br>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 232 ಸಿಸೇನಿ 2011, ದಿನಾಂಕ:22.10.2011 ರಲ್ಲಿ ನಮೂದಿಸಿರುವಂತೆ ಸಮಾನಂತರ ಹುದ್ದೆಗಳ ಅಧಿಕಾರಿಗಳಿಗೆ ಗೃಹ ಪರಿಚಾರಕ ಭತ್ಯೆಯನ್ನು ಪ್ರಾಧಿಕಾರದ ಅನುಮೋದನೆಯಂತೆ ವಿಸ್ತರಿಸಲಾಗಿದೆ.<br><br>ಈ ಹಿನ್ನೆಲೆಯಲ್ಲಿ ಕುಲಸಚಿವರು(ಆಡಳಿತ), ಕುಲಸಚಿವರು(ಮೌಲ್ಯಮಾಪನ) ಹಾಗೂ ವಿತ್ತಾಧಿಕಾರಿಗಳಿಗೆ ಪಾವತಿಸಿರುವ ಗೃಹಪರಿಚಾರಕ ಭತ್ಯೆ ಮೊತ್ತ ರೂ. 1,56,000/– ಗಳು ಹಾಗೂ ಮಾನ್ಯ ಕುಲಪತಿಗಳಿಗೆ ಪಾವತಿಸಿರುವ ಗೃಹ ಪರಿಚಾರಕ ಭತ್ಯೆ ಮೊತ್ತ ರೂ. 96,000/– ಗಳು ಸೇರಿ ಒಟ್ಟು ರೂ **2,52,000 ಗಳ** ವಸೂಲಾತಿ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರಲಾಗಿದೆ. |
| **9.** | **ನಿಯಮ ಬಾಹಿರವಾಗಿ ಬೋಧಕ ವರ್ಗದವರಿಗೆ ಗಳಿಕೆ ರಜೆ ನಗದೀಕರಣ ಬಾಬ್ತು ಪಾವತಿಸಿರುವುದು ರೂ. 4,16,326.00 ವಸೂಲಾತಿಯಲ್ಲಿಡಲಾಗಿದೆ:–**<br><br>2015–16ನೇ ಸಾಲಿನ ತುಮಕೂರು ವಿಶ್ವವಿದ್ಯಾನಿಲಯದ ಲೆಕ್ಕ ಪರಿಶೀಲನೆಯಲ್ಲಿ ಬ್ಯಾಂಕ್ ಖಾತೆ ಸಂಖ್ಯೆ:64061828368 ರ ವೋಚರ್‌ಗಳ ಪರಿಶೀಲನೆಯಲ್ಲಿ ಬೋಧಕ ವರ್ಗದವರಿಗೆ 15 ದಿನಗಳ ಗಳಿಕೆ ರಜೆ ಅಧ್ಯರ್ಪಿಸಿ ನಗದೀಕರಣ ಸೌಲಭ್ಯವನ್ನು ನೀಡಿರುವುದು ಕಂಡುಬಂದಿದ್ದು ಸರ್ಕಾರಿ ಆದೇಶ ಸಂಖ್ಯೆ ಆಇ5 ಸೇನಿಸೇ 2010 ಬೆಂ ದಿನಾಂಕ:14.06.2012ರ ಆದೇಶದಲ್ಲಿ ಯುಜಿಸಿ ವೇತನ ಪಡೆಯುವ ಅಧ್ಯಾಪಕ, ಪ್ರಾಧ್ಯಾಪಕರುಗಳಿಗೆ ಗಳಿಕೆ ರಜೆ ನಗದೀಕರಣ ಸೌಲಭ್ಯ ಪಡೆಯಲು ಅವಕಾಶವಿಲ್ಲದಿದ್ದರೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 29 (3) (2) ರೀತ್ಯಾ ನೌಕರರ ವೇತನ ಶ್ರೇಣಿಗಳನ್ನು ಪರಿಷ್ಕರಿಸುವ ಅಥವಾ ಅವರಿಗೆ ಯಾವುದೇ ಭತ್ಯೆಗಳನ್ನು ಅಥವಾ ಉಪಲಬ್ಧಗಳನ್ನು ನೀಡುವ ಅಧಿಕಾರ ಸಿಂಡಿಕೇಟ್‌ಗೆ ಇರುವುದಿಲ್ಲ **ಅನುಬಂಧ–1(ಎ)** ರಲ್ಲಿ ವಿವರಿಸಿದಂತೆ ಯು.ಜಿ.ಸಿ. ವೇತನ ಪಡೆಯುವವರಿಗೆ ಪಾವತಿಸಿರುವ ಗಳಿಕೆ ರಜೆ ನಗದೀಕರಣ ಮೊತ್ತ ಒಟ್ಟು ರೂ. 4,16,326/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ವಿವರಗಳನ್ನು ಲೆಕ್ಕ ಪರಿಶೀಲನೆಗೆ ಒದಗಿಸಲು ಸೂಚಿಸಿದೆ. ಬೋಧಕ ವರ್ಗದವರಿಗೆ ಗಳಿಕೆ ರಜೆ ನಗದೀಕರಣ ಸೌಲಭ್ಯಕ್ಕೆ ನಿಯಮಗಳಲ್ಲಿ ಅವಕಾಶವಿಲ್ಲದ ಕಾರಣ ನೀಡಿರುವ ಅನುಸರಣೆಯನ್ನು ಲೆಕ್ಕಪರಿಶೋಧನೆಯಲ್ಲಿ ಒಪ್ಪಲಾಗದ ಕಾರಣ ವಸೂಲಾತಿ ಕಂಡಿಕೆ ಮುಂದುವರೆದಿದೆ. | ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಯು.ಜಿ.ಸಿ. ಶ್ರೇಣಿಯ ಬೋಧಕ ಸಿಬ್ಬಂದಿಯವರಿಗೆ ಕೆ.ಸಿ.ಎಸ್. ನಿಯಮದಂತೆ ಪ್ರತಿ ವರ್ಷ 10 ಗಳಿಕೆ ರಜೆಯನ್ನು ಸದರಿಯವರ ಖಾತೆಯಲ್ಲಿ ಕ್ರೋಢೀಕರಿಸಲಾಗಿದೆ. ಸರ್ಕಾರವು ಆದೇಶ ಸಂಖ್ಯೆ: ಎಫ್.ಡಿ. 05 ಎಸ್‌ಆರ್‌ಎಸ್ 2012 ದಿನಾಂಕ:14.06.2012 ರಲ್ಲಿ ಎಲ್ಲಾ ಸಿಬ್ಬಂದಿಗೂ ಗಳಿಕೆ ರಜೆ ಕ್ರೋಢೀಕರಣವನ್ನು 240 ರಿಂದ 300 ದಿನಗಳಿಗೆ ಹೆಚ್ಚಿಸಿರುತ್ತದೆ. ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿನ ಬೋಧಕ ಸಿಬ್ಬಂದಿಗಳಿಗೆ ಅವರ ಖಾತೆಯಲ್ಲಿನ ಗಳಿಕೆ ರಜೆಗಳನ್ನು ಅಧ್ಯಾರ್ಪಿಸಿಕೊಂಡು ನಗದೀಕರಣ ಸೌಲಭ್ಯವನ್ನು ಮಂಜೂರು ಮಾಡಿರುವುದರಿಂದ ಮುಂದೆ ಅಂತಿಮವಾಗಿ ಕ್ರೋಢೀಕೃತವಾಗುವ ಗಳಿಕೆ ರಜೆಗಳು ಗಣನೀಯವಾಗಿ ಕಡಿಮೆ ಜಮೆಯಾಗುತ್ತವೆ.<br><br>ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಗೆ ಈಗಾಗಲೇ 2015–16ನೇ ಸಾಲಿನಲ್ಲಿ ಪಾವತಿಸಿರುವ ರೂ. 4,16,326.00 ಗಳ ಗಳಿಕೆ ರಜೆ ನಗದೀಕರಣ ಮೊತ್ತವನ್ನು ಹಾಗೂ ನಂತರದ ಸಾಲುಗಳಿಲ್ಲಿಯೂ ಪಾವತಿಸಿರುವ ಗಳಿಕೆ ರಜೆ ನಗದೀಕರಣ ವಸೂಲಿಸುವ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರಿದೆ. |

| | | |
|---|---|---|
| **10.** | **ಪರಿನಿಯಮ ರಚಿಸದೆ ಆಪ್ತ ಸಹಾಯಕ ಭತ್ಯೆ ಪಾವತಿಸಿರುವ ಮೊಬಲಗು ರೂ. 1,25,573 ವಸೂಲಾತಿ:–**<br><br>2015–16ನೇ ಸಾಲಿನ ಪಾವತಿಗಳಿಗೆ ಸಂಬಂಧಿಸಿದಂತೆ ತುಮಕೂರು ವಿಶ್ವವಿದ್ಯಾಲಯದ ಲೆಕ್ಕ ಪರಿಶೀಲನೆಯಲ್ಲಿ ಬ್ಯಾಂಕ್ ಖಾತೆ ಸಂಖ್ಯೆ: 64061828368 ರ ಸಂಬಂಧಪಟ್ಟ ವೋಚರ್‌ಗಳ ಪರಿಶೀಲನೆಯಲ್ಲಿ ಆದೇಶ ಸಂಖ್ಯೆ:ತುವಿ:ಸಿಬ್ಬಂದಿ:2015–16/2594 ದಿನಾಂಕ:11.12.2015ರಲ್ಲಿ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ಹಾಗೂ ಮಾನ್ಯ ಕುಲಸಚಿವರ ಆಪ್ತ ಕಾರ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಆಪ್ತ ಸಹಾಯಕ ಭತ್ಯೆ ಮತ್ತು ಸಂಚಾರಿ ದೂರವಾಣಿ ವೆಚ್ಚವನ್ನು ಈ ಕೆಳಕಂಡಂತೆ ಪಾವತಿ ಮಾಡಲಾಗಿರುತ್ತದೆ.<br><br>**ಕ್ರಮ ಸಂಖ್ಯೆ** \| **ಹೆಸರು/ಹುದ್ದೆ** \| **ಮೊತ್ತ ರೂ.ಗಳಲ್ಲಿ**<br>1. \| ಶ್ರೀ ಸುರೇಶಾಚಾರಿ ವಿ. ಆಂಗ್ಲ ಶೀಘ್ರಲಿಪಿಗಾರರು \| 29013.00<br>2. \| ಶ್ರೀ ನಂದೀಶ ಡಿ.ಎನ್. ದ್ವಿತೀಯ ದರ್ಜೆ ಸಹಾಯಕರು \| 48507.00<br>3. \| ಶ್ರೀ ರವಿ ಡಿ.ಎನ್. ಬೆರಳಚ್ಚುಗಾರರು \| 48053.00<br>**ಒಟ್ಟು ಮೊತ್ತ ರೂ.** \| **125573.00**<br><br>ಸದರಿ ಮೇಲ್ಕಂಡ ಸಿಬ್ಬಂದಿಗಳಿಗೆ ಆಪ್ತ ಸಹಾಯಕ ಭತ್ಯೆ ರೂ. 800/– ಹಾಗೂ ಸಂಚಾರಿ ದೂರವಾಣಿ ವೆಚ್ಚ ರೂ.500/– ಅಥವಾ ಮೊಬೈಲ್ ಫೋನ್ ಬಿಲ್ ಯಾವುದು ಕಡಿಮೆ ಇರುವುದೋ ಆ ಮೊತ್ತವನ್ನು ಮಂಜೂರು ಮಾಡಲಾಗಿರುತ್ತದೆ. ಈ ಕುರಿತು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ರಚಿಸಿಕೊಂಡಿರುವ ಪರಿನಿಯಮಗಳ ವಿವರಗಳನ್ನು ಲೆಕ್ಕ ಪರಿಶೀಲನೆಗೆ ಈ ಕೂಡಲೇ ಒದಗಿಸಲು ಸೂಚಿಸಿದೆ. ಅನುಸರಣೆ ಸಲ್ಲಿಸಿದ್ದು ಲೆಕ್ಕಪರಿಶೋಧನೆಯಲ್ಲಿ ಒಪ್ಪಲಾಗದ ಕಾರಣ ವಸೂಲಾತಿ ಕಂಡಿಕೆ ಮುಂದುವರೆದಿದೆ. | ಘನತೆವೆತ್ತ ಕುಲಾಧಿಪತಿಗಳ ಆದೇಶದಂತೆ ವಿಶ್ವವಿದ್ಯಾನಿಲಯದ ಕುಲಪತಿಗಳು ರಾಜ್ಯ ಸರ್ಕಾರದ ಉನ್ನತ ಶ್ರೇಣಿಯ ಅಧಿಕಾರಿಗಳ ವರ್ಗಕ್ಕೆ ಸಮನಾಂತರವಾಗಿರುತ್ತದೆ. ಮುಂದುವರೆದು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 17 ರಲ್ಲಿ ವಿವರಿಸಿರುವಂತೆ ಕುಲಸಚಿವರು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು, ಸೂಪರ್–ಟೈಮ್ ಶ್ರೇಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ (ಕಾರ್ಯದರ್ಶಿಗಳು) ಅಧಿಕಾರಿಯಾಗಿರುತ್ತಾರೆ.<br><br>ಈ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ ಹಾಗೂ ಕುಲಸಚಿವರ ಆಪ್ತ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಪ್ತ ಸಹಾಯಕರು, ಶೀಘ್ರಲಿಪಿಗಾರರು ಹಾಗೂ ಬೆರಳಚ್ಚುಗಾರರು ಕಚೇರಿ ಪೂರ್ವ ಮತ್ತು ಕಚೇರಿಯ ನಂತರದ ವೇಳೆಯಲ್ಲಿ ಹಾಗೂ ಸಾರ್ವತ್ರಿಕ ರಜಾ ದಿನಗಳಲ್ಲೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕರ್ನಾಟಕ ನಾಗರಿಕ ಸೇವಾ ನಿಯಮಗಳು 1958 ಪ್ರಕರಣ 28(ಬಿ) ರಲ್ಲಿ ಸರ್ಕಾರಿ ಕೆಲಸದ ವೇಳೆಯಾಚೆಗೆ ಹೆಚ್ಚುಹೊತ್ತು ನಿರಂತರವಾಗಿ ಮತ್ತು ಅಧಿಕೃತ ರಜಾ ದಿನಗಳಲ್ಲಿ ಕೆಲಸ ಮಾಡುವ ಸನ್ನಿವೇಶವಿದ್ದಾಗ ಗೌರವಧನ ಅಥವಾ ವಿಶೇಷ ವೇತನವನ್ನು ಕೇಳುವುದು ನ್ಯಾಯಸಮ್ಮತವಾಗುತ್ತದೆ ಎಂದು ತಿಳಿಸಲಾಗಿದ್ದು, ಅದರಂತೆ ಮೇಲ್ಕಂಡ ಸಿಬ್ಬಂದಿಗಳ ಸೇವೆಯನ್ನು ವಿಶ್ವವಿದ್ಯಾನಿಲಯವು ಅವಶ್ಯಕವೆಂದು ಪರಿಗಣಿಸಿ ಸಿಂಡಿಕೇಟ್ ಸಭಾ ನಿರ್ಣಯದಂತೆ ಹಾಗೂ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಸದರಿ ಸಿಬ್ಬಂದಿಗಳಿಗೆ ಆಪ್ತ ಸಹಾಯಕ ಭತ್ಯೆ ಮಂಜೂರು ಮಾಡಲಾಗಿರುತ್ತದೆ.<br><br>ಈ ಹಿನ್ನೆಲೆಯಲ್ಲಿ ಶ್ರೀ ಸುರೇಶಾಚಾರಿ ವಿ., ಆಂಗ್ಲ ಶೀಘ್ರಲಿಪಿಗಾರರು, ಶ್ರೀ ನಂದೀಶ್ ಡಿ.ಎನ್., ದ್ವಿತೀಯ ದರ್ಜೆ ಸಹಾಯಕರು ಹಾಗೂ ಶ್ರೀ ರವಿ ಡಿ.ಎನ್., ಬೆರಳಚ್ಚುಗಾರರು ಇವರಿಗೆ ಈಗಾಗಲೇ ಪಾವತಿಸಿರುವ ಆಪ್ತ ಸಹಾಯಕ ಭತ್ಯೆಯ ವೆಚ್ಚ ರೂ. 1,25,573/– ಗಳ ವಸೂಲಾತಿ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರಲಾಗಿದೆ. |

**11.** **ನಿಯಮಬಾಹಿರವಾಗಿ ವೈದ್ಯಕೀಯ ವೆಚ್ಚ ಮರುಪಾವತಿಸಿರುವ ಮೊಬಲಗು ರೂ. 2,06,552/– ವಸೂಲಾತಿ:–**

2015–16ನೇ ಸಾಲಿಗೆ ತುಮಕೂರು ವಿಶ್ವವಿದ್ಯಾನಿಲಯದ ಬ್ಯಾಂಕ್ ಖಾತೆ ಸಂಖ್ಯೆ:64061828368ರ ಸಂಬಂಧಪಟ್ಟ ವೋಚರ್‌ಗಳ ಪರಿಶೀಲನೆಯಲ್ಲಿ ಆದೇಶ ಸಂಖ್ಯೆ:ತುವಿ:ಸಿಬ್ಬಂದಿ:2015–16 ದಿನಾಂಕ:10.09.2015 ರಲ್ಲಿ ಪ್ರೊ. ಎ.ಹೆಚ್. ರಾಜಾಸಾಬ್, ಮಾನ್ಯ ಕುಲಪತಿಗಳು ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ರವರಿಗೆ ಹೃದಯ ಸಂಬಂಧ ಶಸ್ತ್ರ ಚಿಕಿತ್ಸೆಗೆ ಒಳಗಾಗಿರುವ ತತ್ಸಂಬಂಧ ವೈದ್ಯಕೀಯ ವೆಚ್ಚಕ್ಕಾಗಿ ರೂ. 4,06,552/– ಗಳನ್ನು ಸಿಂಡಿಕೇಟ್ ಸಭಾ ನಿರ್ಣಯ ದಿನಾಂಕ:30.07.2015 ಹಾಗೂ ದಿನಾಂಕ:29.08.2015ರ ಮಾನ್ಯ ಘನತೆವೆತ್ತ ಕುಲಾಧಿಪತಿಗಳ ಆದೇಶದಂತೆ ವೈದ್ಯಕೀಯ ವೆಚ್ಚ ಮರುಪಾವತಿಸಲಾಗಿದ್ದು, ಪತ್ರ ಸಂ. GS 07 MTU 2015ದಿನಾಂಕ:29.08.2015ರ ಮಾನ್ಯ ಕುಲಾಧಿಪತಿಗಳ ಪತ್ರದಲ್ಲಿ ಅಧಿಸೂಚನೆ ಸಂ. GS 02 MTU 2013 ದಿನಾಂಕ:06.08.213 ರಲ್ಲಿ ಅನ್ವಯವಾಗುವಂತೆ ವೈದ್ಯಕೀಯ ವೆಚ್ಚ ಮರುಪಾವತಿಸಲು ಸೂಚಿಸಲಾಗಿರುತ್ತದೆ. ಅದರಂತೆ ಸದರಿ ವಿಶ್ವವಿದ್ಯಾನಿಲಯದಲ್ಲಿ ವೈದ್ಯಕೀಯ ವೆಚ್ಚಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ನಿಯಮಗಳನ್ನು ರಚಿಸಿಲ್ಲವಾದ್ದರಿಂದ ಕರ್ನಾಟಕ ಸರ್ಕಾರಿ ನೌಕರರ (ಮೆಡಿಕಲ್ ಅಟೆಂಡೆನ್ಸ್) ನಿಯಮಗಳು 1963 ರನ್ವಯ ಸಿ.ಜಿ. ಹೆಚ್. ಎಸ್. ದರದಂತೆ ಅಥವಾ ಜಿಲ್ಲಾ ಶಸ್ತ್ರ ಚಿಕಿತ್ಸಕರು/ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ ರವರ ಅಭಿಪ್ರಾಯದಂತೆ ವೈದ್ಯಕೀಯ ವೆಚ್ಚ ಮರುಪಾವತಿಸಬೇಕಿದ್ದು, ಅದರಂತೆ ಸಿ.ಜಿ. ಹೆಚ್ ಎಸ್ ದರದಂತೆ ಸದರಿ ಮೇಲ್ಕಂಡ ಶಸ್ತ್ರ ಚಿಕಿತ್ಸೆಗೆ ರೂ. 2,00,000/–ಗಳನ್ನು ಪಾವತಿಸಬೇಕಿದ್ದು, ಹೆಚ್ಚುವರಿಯಾಗಿ ಮರುಪಾವತಿಸಿರುವ ವ್ಯತ್ಯಾಸದ ಮೊತ್ತ ರೂ. 2,06,552/–ಗಳನ್ನು ವಸೂಲಿಸಿ ವಿಶ್ವವಿದ್ಯಾನಿಲಯದ ನಿಧಿಗೆ ಜಮೆ ಮಾಡಿ ವಿವರಗಳನ್ನು ಲೆಕ್ಕ ಪರಿಶೀಲನೆಗೆ ಒದಗಿಸಲು ಸೂಚಿಸಿದೆ.

ಘನತೆವೆತ್ತ ಕುಲಾಧಿಪತಿಗಳು ದಿನಾಂಕ:06.08.2013 ರಂದು ಹೊರಡಿಸಿರುವ ಪ್ರೊ.ಎ.ಎಚ್. ರಾಜಾಸಾಬ್ ಇವರ ಸೇವಾ ನಿಬಂಧನೆಗಳ ಆದೇಶದಲ್ಲಿ “ಕುಲಪತಿಗಳು ಕರ್ನಾಟಕ ನಾಗರೀಕ ಸೇವಾ (ಮೆಡಿಕಲ್ ಅಟೆಂಡೆನ್ಸ್) ನಿಯಮ 1963 ಅಥವಾ ವಿಶ್ವವಿದ್ಯಾನಿಲಯದ ವೈದ್ಯಕೀಯ ಪರಿನಿಯಮಗಳನ್ವಯ ಉಚಿತ ವೈದ್ಯಕೀಯ ವೆಚ್ಚ ಮರುಭರಿಕೆಗೆ ಅರ್ಹರಾಗಿರುತ್ತಾರೆಂದು” ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಪ್ರಾಧಿಕಾರವು (ಸಿಂಡಿಕೇಟ್) ದಿನಾಂಕ:30.07.2015 ರಂದು ನಡೆದ ಸಭೆಯಲ್ಲಿ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ. ಎ.ಎಚ್. ರಾಜಾಸಾಬ್ ಇವರಿಗೆ ಹೃದಯ ಸಂಬಂಧಿ ಶಸ್ತ್ರಚಿಕಿತ್ಸೆ ವೈದ್ಯಕೀಯ ವೆಚ್ಚ ರೂ. 4,06,552.00 ಗಳನ್ನು ಯಥಾವತ್ತಾಗಿ ಮರುಪಾವತಿಸಲಾಗಿದೆ. ಸದರಿಯವರು ಈಗಾಗಲೇ ವಯೋನಿವೃತ್ತರಾಗಿದ್ದು, ಸೂಚಿತ ರೂ. 4,06,552/– ಗಳನ್ನು ವಸೂಲಿಸುವ ಆಕ್ಷೇಪಣೆಯನ್ನು ಕೈಬಿಡಬೇಕೆಂದು ತಮ್ಮಲ್ಲಿ ಕೋರುತ್ತೇನೆ.

**12.** **ಪರಿನಿಯಮ ರಚಿಸದೇ ಆಪ್ತ ಸಹಾಯಕ ಹಾಗೂ ದೂರವಾಣಿ ವೆಚ್ಚ ಪಾವತಿಸಿರುವುದು ರೂ. 80,000/– ವಸೂಲಾತಿ:–**

2015–16ನೇ ಸಾಲಿಗೆ ತುಮಕೂರು ವಿಶ್ವವಿದ್ಯಾನಿಲಯ ಲೆಕ್ಕ ಪರಿಶೋಧನೆಯಲ್ಲಿ 64095498882 ಲೆಕ್ಕ ಖಾತೆಯಲ್ಲಿ ಪಾವತಿಸಲಾದ ಓಚರ್‌ಗಳನ್ನು ಪರಿಶೀಲಿಸಲಾಗಿ ಕುಲಪತಿಗಳು ಹಾಗೂ ಕುಲಸಚಿವರ ಆಪ್ತ ಕಾರ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕೆಲಸ ವೇಳೆಯಾಚೆಗೆ ಕಾರ್ಯನಿರ್ವಹಿಸುತ್ತಿರುವುದಕ್ಕೆ ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ:ತುವಿ:ಸಿಬ್ಬಂದಿ: 2015–16/2594 ದಿನಾಂಕ:11.12.2015 ಹಾಗೂ ದಿನಾಂಕ:17.11.2015 ರ 4ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಆಪ್ತ ಸಹಾಯಕ ಭತ್ಯೆ ಹಾಗೂ ಮೊಬೈಲ್ ವೆಚ್ಚವನ್ನು ಅವರ ಹೆಸರಿನ ಮುಂದೆ ಸೂಚಿಸಲಾದ ದಿನಾಂಕದಿಂದ ಪೂರ್ವಾನ್ವಯವಾಗುವಂತೆ ಪಾವತಿಸಲು ಆದೇಶಿಸಿದ್ದು, ವಿವರಗಳು ಕೆಳಕಂಡಂತಿವೆ.

| ಹೆಸರು | ಭತ್ಯೆ ಅನ್ವಯ ದಿನಾಂಕ | ಆಪ್ತ ಸಹಾಯಕರ ಭತ್ಯೆ | ದೂರವಾಣಿ ವೆಚ್ಚ |
|---|---|---|---|
| ಸುರೇಶಾಚಾರಿ ಆಂಗ್ಲಶೀಘ್ರಲಿಪಿಗಾರರು | 23.11.2012 | 800.00 | 500.00 |
| ಶ್ರೀ ನಂದೀಶ್ ಡಿ.ಎನ್. | 12.11.2010 | 800.00 | 500.00 |
| ಶ್ರೀ ರವಿ ಡಿ.ಎಸ್. ಬೆರಳಚ್ಚುಗಾರರು | 29.11.2010 | 800.00 | 500.00 |

ಘನತೆವೆತ್ತ ಕುಲಾಧಿಪತಿಗಳ ಆದೇಶದಂತೆ ಕುಲಪತಿಗಳು ರಾಜ್ಯ ಸರ್ಕಾರದ ಉನ್ನತ ಶ್ರೇಣಿಯ ಅಧಿಕಾರಿಗಳ ವರ್ಗಕ್ಕೆ ಸಮನಾಂತರವಾಗಿರುತ್ತದೆ. ಮುಂದುವರೆದು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 17 ರಲ್ಲಿ ವಿವರಿಸಿರುವಂತೆ ಕುಲಸಚಿವರು ಪೂರ್ಣಕಾಲಿಕ ಅಧಿಕಾರಿಯಾಗಿದ್ದು, ಸೂಪರ್–ಟೈಮ್ ಶ್ರೇಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಯಾಗಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ ಹಾಗೂ ಕುಲಸಚಿವರ ಆಪ್ತ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಪ್ತ ಸಹಾಯಕರು, ಶೀಘ್ರಲಿಪಿಗಾರರು ಹಾಗೂ ಬೆರಳಚ್ಚುಗಾರರು ಕಚೇರಿ ಪೂರ್ವ ಮತ್ತು ಕಚೇರಿಯ ನಂತರದ ವೇಳೆಯಲ್ಲಿ ಹಾಗೂ ಸಾರ್ವತ್ರಿಕ ರಜಾ ದಿನಗಳಲ್ಲೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅಲ್ಲದೇ, ಆಪ್ತ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಸಾರ್ವಜನಿಕ ವಲಯದ ಎಲ್ಲಾ ಕಚೇರಿಗಳ ಅಧಿಕಾರಿಗಳೊಂದಿಗೆ ದಿನನಿತ್ಯ ಸಂಪರ್ಕದಲ್ಲಿರಬೇಕಾಗಿರುತ್ತದೆ.

| | | |
|---|---|---|
| | ಕಛೇರಿ ವೇಳೆಗಿಂತ ಹೆಚ್ಚು ವೇಳೆ ಕಾರ್ಯ ನಿರ್ವಹಿಸುವ ಸಂಬಂಧ ತುಮಕೂರು ವಿಶ್ವವಿದ್ಯಾನಿಲಯ ಯಾವುದೇ ಪರಿನಿಯಮಗಳನ್ನು ರಚಿಸಿಕೊಳ್ಳದೇ ಪೂರ್ವಾನ್ವಯ ದಿನಾಂಕದಿಂದ ಪಾವತಿಸಿರುವ ದೂರವಾಣಿ ವೆಚ್ಚ ರೂ.80,000/-ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ವಿಶ್ವವಿದ್ಯಾನಿಲಯ ನಿಧಿಗೆ ಜಮೆ ಮಾಡಿ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸಲು ಸೂಚಿಸಿದೆ. ಸಲ್ಲಿಸಿರುವ ಅನುಸರಣೆಯನ್ನು ಒಪ್ಪಲಾಗದ ಕಾರಣ ವಸೂಲಾತಿ ಕಂಡಿಕೆ ಮುಂದುವರೆದಿದೆ. | ಕರ್ನಾಟಕ ನಾಗರಿಕ ಸೇವಾ ನಿಯಮಗಳು 1958 ಪ್ರಕರಣ 28(ಬಿ) ರಲ್ಲಿ ಸರ್ಕಾರಿ ಕೆಲಸದ ವೇಳೆಯಾಚೆಗೆ ಹೆಚ್ಚುಹೊತ್ತು ನಿರಂತರವಾಗಿ ಮತ್ತು ಅಧಿಕೃತ ರಜಾ ದಿನಗಳಲ್ಲಿ ಕೆಲಸ ಮಾಡುವ ಸನ್ನಿವೇಶವಿದ್ದಾಗ ಗೌರವಧನ ಅಥವಾ ವಿಶೇಷ ವೇತನವನ್ನು ಕೇಳುವುದು ನ್ಯಾಯಸಮ್ಮತವಾಗುತ್ತದೆ ಎಂದು ತಿಳಿಸಲಾಗಿದ್ದು, ಅದರಂತೆ ಮೇಲ್ಕಂಡ ಸಿಬ್ಬಂದಿಗಳ ಸೇವೆಯನ್ನು ವಿಶ್ವವಿದ್ಯಾನಿಲಯವು ಅವಶ್ಯಕವೆಂದು ಪರಿಗಣಿಸಿ ಸಿಂಡಿಕೇಟ್ ಸಭಾ ನಿರ್ಣಯದಂತೆ ಹಾಗೂ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಸದರಿ ಸಿಬ್ಬಂದಿಗಳಿಗೆ ಸಂಚಾರಿ ದೂರವಾಣಿ ವೆಚ್ಚವನ್ನು ಮಂಜೂರು ಮಾಡಲಾಗಿರುತ್ತದೆ.<br><br>ಈ ಹಿನ್ನೆಲೆಯಲ್ಲಿ ಶ್ರೀ ಸುರೇಶಾಚಾರಿ ವಿ., ಆಂಗ್ಲ ಶೀಘ್ರಲಿಪಿಗಾರರು, ಶ್ರೀ ನಂದೀಶ್ ಡಿ.ಎನ್., ದ್ವಿತೀಯ ದರ್ಜೆ ಸಹಾಯಕರು ಹಾಗೂ ಶ್ರೀ ರವಿ ಡಿ.ಎನ್., ಬೆರಳಚ್ಚುಗಾರರು ಇವರಿಗೆ ಈಗಾಗಲೇ ಪಾವತಿಸಿರುವ ಸಂಚಾರಿ ದೂರವಾಣಿ ಭತ್ಯೆಯ ವೆಚ್ಚ ರೂ. 80,000/- ಗಳ ವಸೂಲಾತಿ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರಲಾಗಿದೆ. |
| **13.** | **ಪರಿನಿಯಮ ರಚಿಸದೇ ಆತಿಥ್ಯ ಭತ್ಯೆ ಪಾವತಿಸಿರುವ ಬಾಬ್ತು ರೂ. 1,98,000/- ವಸೂಲಾತಿ:-**<br>ತುಮಕೂರು ವಿಶ್ವವಿದ್ಯಾನಿಲಯದ 2015-16ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಲೆಕ್ಕ ಖಾತೆ ಸಂಖ್ಯೆ 64095498882 ರ ವೆಚ್ಚಕ್ಕೆ ಸಂಬಂಧಿಸಿದ ನಗದು ಪುಸ್ತಕ, ಓಚರ್‌ಗಳನ್ನು ಪರಿಶೀಲಿಸಲಾಗಿ ತುಮಕೂರು ವಿಶ್ವವಿದ್ಯಾನಿಲಯ ಶಾಸನಬದ್ಧ ಅಧಿಕಾರಿಗಳಿಗೆ ಆತಿಥ್ಯ ಭತ್ಯೆ (Sumptuary Allowance)ಗೆ ಸಂಬಂಧಿಸಿದಂತೆ 15.09.2006ರ ಸಿಂಡಿಕೇಟ್ ಸಭೆ ನಿರ್ಣಯದಂತೆ ಆದೇಶ ಸಂಖ್ಯೆ:ತುವಿ:ಹವಿ:ಆಭ:2016-17 ದಿನಾಂಕ:22.09.2006 ದಿನಾಂಕ:01.09.2006ರಿಂದ ಪೂರ್ವಾನ್ವಯವಾಗುವಂತೆ ಆತಿಥ್ಯ ಭತ್ಯೆ ಪಡೆದು ಓಚರ್‌ಗಳನ್ನು ಸಲ್ಲಿಸಬೇಕೆಂದು ಕೆಳಕಂಡಂತೆ ಪಾವತಿಸಲು ಆದೇಶಿಸಿರುತ್ತಾರೆ.<br><br>1. ಕುಲಸಚಿವರು 3,000-00 ಪ್ರತಿ ಬಾರಿ<br>2. ಕುಲಸಚಿವರು (ಮೌಲ್ಯಮಾಪನ) 2,000-00 ಪ್ರತಿ ಬಾರಿ<br>3. ಹಣಕಾಸು ಅಧಿಕಾರಿಗಳು 2,000-00 ಪ್ರತಿ ಬಾರಿ<br><br>ಹಾಗೂ ಆದೇಶ ಸಂಖ್ಯೆ:ತುವಿ.ವಿ.ಸಿ.ಪಿ.ಎಸ್.328 2009-10 ದಿನಾಂಕ:26.09.2009ರ ಆದೇಶದಲ್ಲಿ ಕುಲಪತಿಗಳ ಆತಿಥ್ಯ ಭತ್ಯೆಗೆ ಮಾನ್ಯ ಕುಲಪತಿಗಳೇ ದಿನಾಂಕ:25.09.2009ರಲ್ಲಿ ರೂ. 10,000ಗಳು ಮಾಸಿಕವಾಗಿ ಆತಿಥ್ಯ ಭತ್ಯೆ ಪಾವತಿಸಲು ಅನುಮೋದಿಸಲಾಗಿದ್ದು, ಒಟ್ಟಾರೆ ಶಾಸನಬದ್ಧ ಅಧಿಕಾರಿಗಳಿಗೆ 2015-16ನೇ ಸಾಲಿಗೆ ರೂ. 1,98,000-00 ಪಾವತಿಸಿರುತ್ತಾರೆ.<br>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮಗಳು 2000 ಸೆಕ್ಷನ್ 29(3) ರೀತ್ಯಾ ಸಿಂಡಿಕೇಟ್‌ಗೆ ಭತ್ಯೆಗಳನ್ನು ಪರಿಷ್ಕರಿಸಲು ಅವಕಾಶವಿರುವುದಿಲ್ಲ. ಸೆಕ್ಷನ್ 46 (3) ರೀತ್ಯಾ | ಈ ಸಂಬಂಧ ಸಿಬ್ಬಂದಿ ವಿಭಾಗಕ್ಕೆ ಪರಿನಿಯಮಾವಳಿ ರಚಿಸಿಕೊಡುವಂತೆ ಕೋರಿ ಪತ್ರ ಬರೆಯಲಾಗಿರುತ್ತದೆ. |

| | | |
|---|---|---|
| | ವಿಶ್ವವಿದ್ಯಾನಿಲಯ ನಿಧಿಯಿಂದ ವೆಚ್ಚ ಭರಿಸಲು ಪರಿನಿಯಮಗಳನ್ನು ರಚಿಸಿಕೊಳ್ಳಬೇಕಿದ್ದು, ನಿಯಮಗಳ ಉಲ್ಲಂಘಿಸಿ ಪಾವತಿಸಲಾದ ಮೊತ್ತ ರೂ. 1,98,000–00ಗಳನ್ನು ವಸೂಲಾತಿಗೆ ಸೂಚಿಸಿದೆ. ಅನುಸರಣೆಯನ್ನು ಒಪ್ಪಲಾಗದ ಕಾರಣ ವಸೂಲಾತಿ ಕಂಡಿಕೆ ಮುಂದುವರೆದಿದೆ. | |
| **14.** | **ಹಂಗಾಮಿ ಸಂಚಿತ ನೌಕರರಿಗೆ ಹಿಂಬಾಕಿ ವೇತನ ಪಾವತಿಸಿರುವ ಮೊಬಲಗು: ಆಕ್ಷೇಪಣೆ ರೂ 54,14,296/–**<br>**ಅ**). ತುಮಕೂರು ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಂಗಾಮಿ ಸಂಚಿತ ವೇತನ ನೌಕರರಿಗೆ ಪರಿಷ್ಕೃತ ವೇತನ ಪಾವತಿಸಿರುವ ಕುರಿತು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಗಿ 68 ಮಂದಿ ಸಂಚಿತ ವೇತನ ನೌಕರರಿಗೆ 2015–16 ನೇ ಸಾಲಿಗೆ ಒಟ್ಟು ರೂ 54,14,296/– ಗಳನ್ನು ಪಾವತಿಸಿರುವುದು ಬ್ಯಾಂಕ್ ಲೆಕ್ಕ ಖಾತೆ ಸಂಖ್ಯೆ 64002425398 ನಿರ್ವಹಿಸಲಾದ ನಗದು ವಹಿಯನ್ನು ಹಾಗೂ ಹಂಗಾಮಿ ಸಂಚಿತ ವೇತನ ನೌಕರರ ನೇಮಕಾತಿ ಕಡತಗಳನ್ನು ಪರಿಶೀಲಿಸಲಾಗಿ ಹಲವಾರು ನ್ಯೂನತೆಗಳು ಕಂಡು ಬಂದಿದ್ದು ಶ್ರೀ ಉಮೇಶ್ ಪಿ. ಆರ್. ರವರು ದಿನಾಂಕ 1–12–1996 ರಂದು ಸೇವೆಗೆ ನೇಮಕಾತಿ ಹೊಂದಿದ್ದು ನೇಮಕಾತಿ ಹೊಂದಿದ್ದ ಸಮಯದಲ್ಲಿ ಇವರಿಗೆ 16 ವರ್ಷ 4 ತಿಂಗಳುಗಳು ಮಾತ್ರ ಆಗಿರುತ್ತದೆ. ನೇಮಕಾತಿ ನಿಯಮಗಳನ್ವಯ ಕನಿಷ್ಠ ವಯಸ್ಸು 18 ವರ್ಷಗಳು ಪೂರೈಸಬೇಕಿದ್ದು ನಿಯಮಗಳ ವಿರುದ್ಧವಾಗಿ ನೇಮಕಾತಿ ಮಾಡಿರಲು ಸ್ಪಷ್ಟೀಕರಣ ನೀಡುವುದು. ಮುಂದುವರೆದು, ಶ್ರೀ ಭ್ರಮರಾಂಭ peon ಇವರಿಗೆ ಸೇವೆಗೆ ಸೇರುವ ಸಮಯದಲ್ಲಿ 39 ವರ್ಷಗಳು 9 ತಿಂಗಳು ಆಗಿರುತ್ತದೆ. ಹಾಗೂ ಶ್ರೀ ಡಿ.ಎಸ್. ಬಗಲಿ ಇವರು ಸೇವೆಗೆ ಸೇರುವಾಗ 38 ವರ್ಷ 1 ತಿಂಗಳು ಆಗಿರುತ್ತದೆ. ನೇಮಕಾತಿ ನಿಯಮಗಳಲ್ಲಿ ನಿಗಧಿಪಡಿಸಿದ ವಯೋಮಿತಿಗೆ ವೈರುದ್ಧ್ಯವಾಗಿ ನೇಮಕಾತಿ ಮಾಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಲಾಗಿದೆ. ಶ್ರೀ ವೆಂಕಟೇಶ್ ಎನ್.ವಿ. ಇವರನ್ನು ಅತಿಥಿ ಗೃಹಕ್ಕೆ ನೇಮಕಾತಿ ಮಾಡಿದ್ದು, ಕರ್ನಾಟಕ ವಿಶ್ವವಿದ್ಯಾಲಯ ಅಧಿನಿಯಮ 2000 ಸೆಕ್ಷನ್ 56 ರನ್ವಯ ಸರ್ಕಾರದಿಂದ ಮಂಜೂರಾದ ಹುದ್ದೆಗಳಿಗೆದುರಾಗಿ ತಾತ್ಕಾಲಿಕ ನೇಮಕಾತಿ ಮಾಡಬಹುದಾಗಿದ್ದು, ಮಂಜೂರಾಗದ ಹುದ್ದೆಗೆದುರಾಗಿ ಶ್ರೀಯುತರನ್ನು ನೇಮಕಾತಿ ಮಾಡುವ ಕುರಿತು ಸ್ಪಷ್ಟೀಕರಣ ನೀಡಲು ಕೋರಿದೆ.<br>ಹಂಗಾಮಿ ಸಂಚಿತ ವೇತನ ನೌಕರರಿಗೆ ಪರಿಷ್ಕೃತ ವೇತನ ಬಾಕಿ ಮೊತ್ತ ಪಾವತಿಸುವ ಸಲುವಾಗಿ ಸರ್ಕಾರಿ ಪತ್ರ ಸಂಖ್ಯೆ ಇಡಿ 102 ಯುಟಿಟಿ 2012 ದಿನಾಂಕ: 11–10–2012 ರನ್ವಯ ದಿನಾಂಕ: 1–7–012 ರಿಂದ ಅನ್ವಯವಾಗುವಂತೆ ಮೂಲ ವೇತನದ ಹಂತಕ್ಕೆ ಸರಿಸಮನಾಗಿ ರೂ 10/– ಗಳನ್ನು ಕಡಿತಗೊಳಿಸಿ ಪಾವತಿಸುವಂತೆ ಹಾಗೂ ಈ ಬಗ್ಗೆ ತಗಲುಬಹುದಾದ ವೆಚ್ಚವನ್ನು ವಿ.ವಿ. ಆಂತರಿಕ ಸಂಪನ್ಮೂಲದಿಂದಲೇ ಭರಿಸಲು ತಿಳಿಸಲಾಗಿದ್ದು, ತುಮಕೂರು ವಿ.ವಿ. ಆದೇಶ ಸಂಖ್ಯೆ ತುವಿ. ಸಿಬ್ಬಂದಿ. 2015–16/2486 ದಿನಾಂಕ: 30–11–15 ರನ್ವಯ 54,14,296/– ಪಾವತಿಸಿರುತ್ತದೆ.<br>**ಆ**). 2015–16 ನೇ ಸಾಲಿನ ಆಯವ್ಯಯದಲ್ಲಿ ವೇತನ ಹಿಂಬಾಕಿ ಪಾವತಿಗೆ ಅವಕಾಶ ಮಾಡಿರುವುದಿಲ್ಲ. ಆದ್ದರಿಂದ Capital Expenditure ಮತ್ತು ಇತರೆ ಅಡಿಗಳಲ್ಲಿ ಉಳಿತಾಯದಿಂದ ಮರುಹೊಂದಾಣಿಕೆ ಮಾಡಿಕೊಳ್ಳುವ ಮುಖಾಂತರ ಆಂತರಿಕ ಸಂಪನ್ಮೂಲಗಳಿಂದ ರೂ 54,14,296/– ಗಳನ್ನು ದಿನಾಂಕ:1–7–2017 ರಿಂದ ಕಾರ್ಯ ನಿರ್ವಹಿಸುತ್ತಿರುವ 68 ಮಂದಿ ಸಂಚಿತ ವೇತನ ಸಿಬ್ಬಂದಿಯವರಿಗೆ ವ್ಯತ್ಯಾಸ ಪಾವತಿಸಿರುತ್ತಾರೆ. ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿ ವಿ.ವಿ.ಯ ವಾರ್ಷಿಕ ಆದಾಯವು ಋಣಾತ್ಮಕವಾಗಿರುವಾಗ ಬಂಡವಾಳ ವೆಚ್ಚಗಳಲ್ಲಿ ವೇತನ ಪಾವತಿಸಲು ಸಾಧ್ಯವಾಗಿರುವುದಾದರೂ ಹೇಗೆ? ಅವಕಾಶ ಕಲ್ಪಿಸದೇ ಪಾವತಿಸಿರುವ ಮೊತ್ತ ರೂ 54,14,296/– ಆಕ್ಷೇಪಣೆಯಲ್ಲಿಡಲಾಗಿದೆ. | 2014–15ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಕಂಡಿಕೆ 17 ರಲ್ಲಿ ಅಂದರೆ ವೇತನದ ವಿವರಗಳನ್ನು ಪರಿಶೀಲಿಸಿದಾಗ ಏಕ ರೂಪದ ವೇತನ ಪಾವತಿಸದೆ ಒಬ್ಬರಿಂದೊಬ್ಬರಿಗೆ ವೇತನದಲ್ಲಿ ಬಹಳಷ್ಟು ವ್ಯತ್ಯಾಸ ಮತ್ತು ತಾರತಮ್ಯವಾಗಿ ಪಾವತಿಸಿರುವುದು ಕಂಡು ಬಂದಿದ್ದರಿಂದ ವಿಚಾರಣಾ ಪತ್ರ ಸಂಖ್ಯೆ:25 ದಿನಾಂಕ:31.10.2014 ರಂದು ಅಗತ್ಯ ವಿವರಣೆ ಮತ್ತು ಸ್ಪಷ್ಟೀಕರಣ ಸಲ್ಲಿಸುವಂತೆ ತಿಳಿಸಲಾಗಿತ್ತು. ಆದರೆ ಸೇವಾ ನಿಯಮಗಳನ್ವಯ ವೇತನ ನಗದಿ ಮಾಡಿದ ಬಗ್ಗೆ ಸ್ಪಷ್ಟ/ಕಡತ ಸ್ಪಷ್ಟ ಆದೇಶ ಮತ್ತು ಕ್ರಮಗಳನ್ನು ತನಿಖೆಗೆ ಒದಗಿಸಿರುವುದಿಲ್ಲವೆಂದು ಆಡಳಿತ ವರ್ಗವು ಈ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ:ಇಡಿ 102 ಯುಟಿಟಿ 2012 ದಿನಾಂಕ:11.10.2012ರ ಅನ್ವಯ ಸೇವಾ ನಿಯಮಾನುಸಾರ ಕ್ರಮ ಕೈಗೊಂಡು ಸದರಿ ಸಿಬ್ಬಂದಿಗಳಿಗೆ ತಾರತಮ್ಯವಿಲ್ಲದೆ ಮತ್ತು ವ್ಯತ್ಯಾಸವಿಲ್ಲದೆ ಏಕರೂಪವಾದ ವೇತನ ಸೌಲಭ್ಯವನ್ನು ಪಾವತಿಸುವಂತೆ ಕೈಗೊಳ್ಳಬೇಕಾಗಿರುತ್ತದೆ ಎಂಬ ಸ್ಪಷ್ಟ ಅಭಿಪ್ರಾಯವನ್ನು ನೀಡಿರುತ್ತಾರೆ.<br>ಸದರಿ ಲೆಕ್ಕ ಪರಿಶೋಧಕರ ವರದಿಯಂತೆ ಸರ್ಕಾರಿ ಆದೇಶದಂತೆ ಹಂಗಾಮಿ ಸಂಚಿತ ವೇತನ ನೌಕರರಿಗೆ ದಿನಾಂಕ:11.10.2012ರ ಆದೇಶದಂತೆ ತಡೆ ಹಿಡಿದಿದ್ದ ವೇತನ ವ್ಯತ್ಯಾಸ ಪಾವತಿಸಲು ಹಣಕಾಸು ಅಧಿಕಾರಿಗಳು ಸರ್ಕಾರಿ ಲೆಕ್ಕ ಪರಿಶೋಧಕರಿಗೆ ತಮ್ಮ ಅಭಿಪ್ರಾಯಕ್ಕಾಗಿ ಕಡತವನ್ನು ಮಂಡಿಸಲಾಗಿತ್ತು. ಸದರಿ ಲೆಕ್ಕ ಪರಿಶೋಧಕರ ಅಭಿಪ್ರಾಯದಂತೆ ಕಂಡಿಕೆ 03 ರಂತೆ ಈಗಾಗಲೇ ಸರ್ಕಾರದ ಅಧೀನ ಕಾರ್ಯದರ್ಶಿಗಳು ತಮ್ಮ ಪತ್ರ ಸಂಖ್ಯೆ: ಇಡಿ 102 ಯುಟಿಟಿ 2012 ದಿನಾಂಕ:11.10.2012 ರಲ್ಲಿ ಅನುಮೋದನೆ ನೀಡಿರುತ್ತಾರೆ.<br>ಈ ಹಿನ್ನೆಲೆಯಲ್ಲಿ ಕಂಡಿಕೆ 2 ಮತ್ತು ಬಿ ಅನ್ನು ಅನುಸರಿಸಿ ವಿಶ್ವವಿದ್ಯಾನಿಲಯ ಸಂಪನ್ಮೂಲದ ಪರಿಸ್ಥಿತಿಯನ್ನು ಅವಗಾಹನೆಯಲ್ಲಿರಿಸಿಕೊಂಡು ಬಾಕಿ ಮೊತ್ತ ಪಾವತಿಸಬಹುದಾಗಿರುತ್ತದೆ ಎಂಬ ಸ್ಪಷ್ಟ ಅಭಿಪ್ರಾಯವನ್ನು |

| | | |
|---|---|---|
| | | ನೀಡಿರುತ್ತಾರೆ. ಅದರಂತೆ ಸಾಮಾನ್ಯ ಸಿಂಡಿಕೇಟ್ ಸಭೆ–01 ದಿನಾಂಕ:12.05.2015ರ ನಿರ್ಣಯದಂತೆ ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಂಗಾಮಿ ಸಂಚಿತ ವೇತನ ನೌಕರರಿಗೆ ದಿನಾಂಕ:04.06.2015ರಿಂದ ಅನ್ವಯ ವಾಗುವಂತೆ ಪ್ರಸ್ತುತ ಜಾರಿಯಲ್ಲಿರುವ ಮೂಲ ವೇತನದ ಹಂತಕ್ಕೆ ಮೂಲ ವೇತನಕ್ಕೆ ಸಮನಾಗಿ ಅವರು ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಮೂಲವೇತನದಲ್ಲಿ 10 ರೂ. ಕಡಿತಗೊಳಿಸಿ ಪಾವತಿಸುವಂತೆ ಹಾಗೂ ಸದರಿಯವರಿಗೆ ವೇತನದ ವ್ಯತ್ಯಾಸದ ಮೊತ್ತವನ್ನು ಪಾವತಿಸುವ ಸಂಬಂಧ ಲೆಕ್ಕ ಪರಿಶೋಧಕರ ಅಭಿಪ್ರಾಯ ಹಾಗೂ ಹಣಕಾಸು ಲಭ್ಯತೆಯ ಆಧಾರದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುವಂತೆ ನಿರ್ಣಯಿಸಿತು. ಅದರಂತೆ ಸರ್ಕಾರಿ ಲೆಕ್ಕ ಪರಿಶೋಧಕರ ಅಭಿಪ್ರಾಯದಂತೆ ಹಾಗೂ ದಿನಾಂಕ:27.02.2013ರಂದು ನಡೆದ 86ನೇ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಸದರಿ ವಿಷಯನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದಾಗ ಸಭೆಯಲ್ಲಿ ಹಣಕಾಸು ಅಧಿಕಾರಿಗಳ ಅಭಿಪ್ರಾಯ ಕೇಳಲಾಗಿ ಈ ಕುರಿತು ಹಣಕಾಸು ಅಧಿಕಾರಿಗಳು ವೇತನ ಹೆಚ್ಚಿಸಲು 2013–14ನೇ ಆಯವ್ಯಯದಲ್ಲಿ ಅವಕಾಶಮಾಡಿಕೊಂಡು ಪರಿಷ್ಕೃತ ವೇತನ ನೀಡಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ 2015–16ನೇ ಸಾಲಿನ ಆಯ–ವ್ಯಯದಲ್ಲಿ ಆಂತರಿಕ ಸಂಪನ್ಮೂಲಗಳ ಉಳಿತಾಯದಿಂದ ರೂ. 54,14,296–00ಗಳನ್ನು ಮರು ಹೊಂದಾಣಿಕೆ ಮುಖಾಂತರ ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ 68 ಸಂಚಿತ ವೇತನ ಸಿಬ್ಬಂದಿಯವರಿಗೆ ವೇತನ ವ್ಯತ್ಯಾಸವನ್ನು ಪಾವತಿಸಲು ಅನುಮೋದಿಸಲಾಗಿತ್ತು.<br>ಅದರಂತೆ ಸರ್ಕಾರಿ ಪತ್ರ ಸಂಖ್ಯೆ:ಇಡಿ 102 ಯುಟಿಟಿ 2012 ದಿನಾಂಕ:01.07.2012 ರಿಂದ ಅನ್ವಯವಾಗುವಂತೆ ವೇತನವನ್ನು ಪಾವತಿಸಲು ಅನುಮೋದನೆ ನೀಡಿರುವುದರಿಂದ ಸದರಿ ವೇತನ ವ್ಯತ್ಯಾಸವನ್ನು ಅದೇ ದಿನಾಂಕದಿಂದ ಅಂದರೆ 01.07.2012 ರಿಂದ ಅನ್ವಯವಾಗುವಂತೆ ಹಾಗೂ ಈ ಬಗ್ಗೆ ತಗಲಬಹುದಾದ ವೆಚ್ಚವನ್ನು ವಿಶ್ವವಿದ್ಯಾನಿಲಯದ ಅಂತರಿಕ |

| | | |
|---|---|---|
| | | ಸಂಪನ್ಮೂಲದಿಂದಲೇ ಭರಿಸಲು ಸರ್ಕಾರದ ಅನುಮೋದನೆ ಪಡೆಯಲು ನಿರ್ಣಯಿಸಲಾಯಿತು. ಹಾಗೂ ಮಾನ್ಯ ಕುಲಪತಿಗಳ ಅದೇಶದಂತೆ ಹಂಗಾಮಿ ಸಂಚಿತ ವೇತನ ನೌಕರರಿಗೆ ದಿನಾಂಕ:01.07.2012 ರಿಂದ ಪರಿಷ್ಕೃತ ವೇತನ ವ್ಯತ್ಯಾಸದ ಬಾಕಿ ಮೊತ್ತವನ್ನು ಪಾವತಿಸುವ ಸಂಬಂಧ ಕಾನೂನು ಅಭಿಪ್ರಾಯ ಕೋರಿ ಶ್ರೀ ರಾಮನಾಥ್ ಪಿ. ಹಿರಿಯ ವಕೀಲರು ಬೆಂಗಳೂರು ಇವರಿಗೆ ದಿನಾಂಕ:05.11.2015ರಂದು ಪತ್ರ ಬರೆಯಲಾಗಿದ್ದು ಸದರಿಯವರು ದಿನಾಂಕ;17.11.2015ರ ವಿಶ್ವವಿದ್ಯಾನಿಲಯದಲ್ಲಿ ಸ್ವೀಕೃತವಾದಂತಹ ಉಲ್ಲೇಖ (4) ಪತ್ರದಲ್ಲಿ ಕೆಳಕಂಡಂತೆ ದಿನಾಂಕ:21.09.2015ರಂದು ನಡೆದ 02ನೇ ಹಣಕಾಸು ಸಮಿತಿ ಸಭೆಯು ತೆಗೆದುಕೊಂಡ ನಿರ್ಣಯವನ್ನು ಹಾಗೂ ವಕೀಲರು ದಿನಾಂಕ:17.11.2015ರಂದು ನೀಡಿರುವ ಕಾನೂನು ಅಭಿಪ್ರಾಯವನ್ನು ಉಲ್ಲೇಖ (5)ರಂತೆ ಮಂಡಿಸಲಾಗಿತ್ತು.<br>ಸದರಿ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ಸಭೆಯು ವಿಶ್ವವಿದ್ಯಾನಿಲಯದ ವಕೀಲರು ನೀಡಿರುವ ಕಾನೂನು ಅಭಿಪ್ರಾಯವನ್ನು ಅಂಗಿಕರಿಸಿತು ಸದರಿ ಕಾನೂನು ಅಭಿಪ್ರಾಯದಲ್ಲಿ ತಿಳಿಸಿರುವಂತೆ ಹಂಗಾಮಿ ಸಂಚಿತ ವೇತನ ನೌಕರರು ರೂ. 50 ರೂ.ಗಳ ಛಾಪಾ ಕಾಗದದಲ್ಲಿ ಕಾನೂನು ಅಭಿಪ್ರಾಯದ ಜೊತೆಗೆ ವಕೀಲರು ಸಲ್ಲಿಸಿರುವ ನಮೂನೆಯಲ್ಲಿ ನೋಟರಿಯಿಂದ ದೃಢೀಕರಿಸಿ ಆಡಳಿತ ವಿಭಾಗಕ್ಕೆ ಸಲ್ಲಿಸುವಂತೆ ನಿರ್ಣಯಿಸಿತು. ಅದರಂತೆ 01.07.2012ರಿಂದ ಪರಿಷ್ಕೃತ ವೇತನ ವ್ಯತ್ಯಾಸದ ಬಾಕಿ ಮೊತ್ತವನ್ನು ಅರ್ಹ ಹಂಗಾಮಿ ಸಂಚಿತ ವೇತನ ನೌಕರರಿಗೆ ಕಛೇರಿ ಆದೇಶ ನೀಡುವಂತೆ ನಿರ್ಣಯಿಸಿರುತ್ತದೆ.ಆದ್ದರಿಂದ ಲೆಕ್ಕಪರಿಶೋಧನಾ ವರದಿಯಲ್ಲಿನ ಕಂಡಿಕೆ ಸಂಖ್ಯೆ 14 ರಲ್ಲಿ ಆಕ್ಷೇಪಿಸಲಾಗಿರುವ ಮೊಬಲಗು 54,14,296–00ಗಳನ್ನು ಕೈಬಿಡಬೇಕೆಂದು ಈ ಮೂಲಕ ಕೋರಲಾಗಿದೆ. |
| **15.** | **ಆಡಳಿತಾತ್ಮಕ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ವರ್ಗದವರಿಗೆ ಯುಜಿಸಿ ವೇತನ ಪಾವತಿಸಿರುವ ಮೊಬಲಗು ಆಕ್ಷೇಪಣೆ ರೂ 2,26,431/–**<br>ತುಮಕೂರು ವಿಶ್ವವಿದ್ಯಾಲಯದ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ವೋಚರುಗಳನ್ನು ಪರಿಶೀಲಿಸಲಾಗಿ ಆಡಳಿತಾತ್ಮಕ ಹುದ್ದೆಗಳಲ್ಲಿ ಬೋಧಕ ವರ್ಗದವರು ಕಾರ್ಯ ನಿರ್ವಹಿಸುತ್ತಿದ್ದು, ಆಡಳಿತಾತ್ಮಕ ಹುದ್ದೆಗೆ ಅನ್ವಯಿಸುವ ವೇತನವನ್ನು ಪಡೆಯದೇ ಯು.ಜಿ.ಸಿ. ವೇತನ | ಸರ್ಕಾರದ ಆದೇಶದನ್ವಯ ಬೋಧಕ ವರ್ಗದವರು ಶಾಸನಬದ್ಧ ಅಧಿಕಾರಿಗಳಾಗಿ ಆಡಳಿತಾತ್ಮಕ ಹುದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿನ್ನಲೆಯಲ್ಲಿ ಅವರಿಗೆ ಈ ಹಿಂದಿನಂತೆ ಯುಜಿಸಿ ವೇತನ ಪಾವತಿಸಿರುವ ಮೊಬಲಗು ಆಕ್ಷೇಪಣೆ ಮೊತ್ತ |

| | | |
|---|---|---|
| | ಪಾವತಿಯಾಗಿರುವುದು ಕಂಡು ಬಂದಿರುತ್ತದೆ. ಯು.ಜಿ.ಸಿ. ನಿಯಮಾವಳಿಗಳ ಪ್ರಕಾರ ಬೋಧನಾವಧಿಯನ್ನು ಹಂಚಿಕೆ ಮಾಡಲಾಗಿದ್ದು, ಕಾರ್ಯ ಹಂಚಿಕೆ ವಿವರಗಳನ್ನು ಪರಿಶೀಲಿಸಲಾಗಿ ನಿಯಮಾವಳಿಗಳ ಅನ್ವಯ ಕಾರ್ಯ ನಿರ್ವಹಿಸದಿರುವುದು ಕಂಡು ಬಂದಿರುತ್ತದೆ.<br><br>ಆಡಳಿತಾತ್ಮಕ ಹುದ್ದೆಗಳಲ್ಲಿ ಅನ್ವಯಿಸುವ ವೇತನವನ್ನು ನಿಗಧಿಪಡಿಸಿ, ಹೆಚ್ಚಿಗೆ ಪಾವತಿಸಲಾದ ಮೊತ್ತವನ್ನು ವಸೂಲಿಸಲು ಸೂಚಿಸಿ ಅಲ್ಲಿಯವರೆಗೂ ಪಾವತಿಸಲಾದ ವೇತನವನ್ನು ರೂ 2,26,431/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.<br><br>**ವಿವರಗಳು**<br><br>**ಕ್ರ.ಸಂ.** / **ಹೆಸರು/ಹುದ್ದೆ** / **ಅವಧಿ** / **ವೇತನ (ರೂಗಳಲ್ಲಿ)**<br>1 / ಪ್ರೊ. ಡಿ. ಶಿವಲಿಂಗಯ್ಯ ಕುಲಸಚಿವರು(ಆ) / ಮಾರ್ಚ್ 2016 / 51,585–00<br>2 / ಪ್ರೊ. ಎಂ. ವೆಂಕಟೇಶ್ವರಲು ಕುಲಸಚಿವರು(ಆ) / ಮಾರ್ಚ್ 2016 (15.3.16 ರಿಂದ 31.3.16 ರವರೆಗೆ) 17 ದಿನಗಳು / 67554–00<br>3 / ಪ್ರೊ. ಪರಮಶಿವಮೂರ್ತಿ ಡಿ.ವಿ. ಕುಲಸಚಿವರು (ಮೌ) / ಮಾರ್ಚ್ 2016 / 1,07,292–00<br>**ಒಟ್ಟು ರೂ.** / **2,26,431–00** | ರೂ. 2,26,431/- ಗಳ ವಸೂಲಾತಿ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರಲಾಗಿದೆ. |
| **16.** | **ಸೇವಾವಹಿಯ ಪರಿಶೀಲನೆಯಲ್ಲಿ ಕಂಡು ಬಂದ ನ್ಯೂನತೆಗಳು:–**<br>ಶಶಿಧರ.ಜಿ. Lab Assistant ಗಳಿಕೆ ರಜೆ ಕೊಡಬೇಕಿದ್ದು ಕೊಟ್ಟಿರುವುದು<br>ದಿ:01.01.2016 ರಿಂದ 30.06.2016 ರವರೆಗೆ ಲೆಕ್ಕದಲ್ಲಿದ್ದ ರಜೆ 129<br>2015–16 ನೇ ಸಾಲಿಗೆ ಗಳಿಕೆ ರಜೆ ನಗಧೀಕರಣ 15<br>114<br>01.07.2016 ರಿಂದ 31.12.2016 ವರೆಗೆ ನೀಡಬೇಕಾದ್ದು 15<br>129<br>ಆದರೆ 144 ದಿನಗಳ ಅಂತಿಮ ಶಿಲ್ಕು ಇದ್ದು ಹೆಚ್ಚುವರಿ 15 ದಿನಗಳನ್ನು ನೀಡಲಾಗಿದೆ. | ಶಶಿಧರ ಜಿ. Lab Assistant ಇವರ ಗಳಿಕೆ ರಜೆ ನಮೂದೀಕರಣವನ್ನು ಸರಿ ಪಡಿಸಿರುವ ಹಿನ್ನಲೆಯಲ್ಲಿ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರಲಾಗಿದೆ. |
| **17.** | **ಪರಿನಿಯಮ ರಚಿಸದೆ ಪರೀಕ್ಷಾ ಸಂಭಾವನೆ ಪಾವತಿಸಿರುವ ಬಾಬ್ತು ರೂ. 2892550/– ವಸೂಲಾತಿ:–**<br>2015–16 ನೇ ಸಾಲಿನಲ್ಲಿ ಏಪ್ರಿಲ್ ಹಾಗೂ ಮೇ 15 ಹಾಗೂ ನವೆಂಬರ್ ಮತ್ತು ಡಿಸೆಂಬರ್ 15 ನಡೆಯಲಾದ ಯುಜಿ/ಪಿಜಿ ಪರೀಕ್ಷೆಗಳ ಕಾರ್ಯ ನಿಮಿತ್ತ ಹಾಗೂ ಪರೀಕ್ಷಾ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕಾಗಿ ಈ ಕೆಳಕಂಡ ಮಾಹೆಗಳಲ್ಲಿ ಪ್ರಾಧ್ಯಾಪಕರುಗಳು ಪರೀಕ್ಷಾ ಸಂಭಾವನೆ ಪಡೆದಿರುತ್ತಾರೆ. ಆದರೆ, ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ಸೆಕ್ಷನ್ 28 ರನ್ವಯ ಹಾಗೂ ದಿ: 11–2–2002 ರ ಕರ್ನಾಟಕ ಸರ್ಕಾರದ ಆದೇಶದನ್ವಯ ಯುಜಿಸಿ ಹಾಗೂ ಎ.ಐ.ಸಿ.ಟಿ.ಇ. ವೇತನ ಪಡೆಯುವ | ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳ ವ್ಯಾಪ್ತಿಯಲ್ಲಿ ಪ್ರಶ್ನೆ ಪತ್ರಿಕೆಗಳ ರಚನೆ, ಕೊಠಡಿ ಮೇಲ್ವಿಚಾರಣೆ, ಮೌಲ್ಯಮಾಪನ, ಮರುಮೌಲ್ಯಮಾಪನ ಹಾಗೂ ಮೂರನೇ ಮೌಲ್ಯಮಾಪನ ಕಾರ್ಯಗಳು ಸೇರಿರುತ್ತವೆ. ಈ ಕಾರ್ಯಗಳನ್ನು ಅಧ್ಯಾಪಕರುಗಳೇ ನಿರ್ವಹಿಸ |

<table>
<tr>
<td></td>
<td>
ಪ್ರಾಧ್ಯಾಪಕರುಗಳು ಪರೀಕ್ಷಾ ಸಂಭಾವನೆ ಪಡೆಯಲು ಅವಕಾಶವಿರುವುದಿಲ್ಲ. ಏಕೆಂದರೆ, ಪರೀಕ್ಷಾ ಕಾರ್ಯವು ಅಧ್ಯಾಪಕರುಗಳ ಶೈಕ್ಷಣಿಕ ಕಾರ್ಯದ ಒಂದು ಭಾಗವಾಗಿರುತ್ತದೆ. ಆದಕಾರಣ ಪ್ರಾಧ್ಯಾಪಕರುಗಳಿಗೆ ಈ ಕೆಳಕಾಣಿಸಿರುವ ಮಾಹೆಗಳಲ್ಲಿ ಪಾವತಿಸಲಾದ ಪರೀಕ್ಷಾ ಸಂಭಾವನೆ ಒಟ್ಟು ಮೊತ್ತ ರೂ 28,92,550/- ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ವಿ.ವಿ. ನಿಧಿಗೆ ಜಮೆ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಸೂಚಿಸಿದೆ.
<table>
<tr><th colspan="2">ಸಂಭಾವನೆ ವಿವರ</th></tr>
<tr><td>ಏಪ್ರಿಲ್ 2015</td><td>84,641</td></tr>
<tr><td>ಮೇ 2015</td><td>-</td></tr>
<tr><td>ಜೂನ್ 2015</td><td>20,285</td></tr>
<tr><td>ಜುಲೈ 2015</td><td>2,09,353</td></tr>
<tr><td>ಆಗಸ್ಟ್ 2015</td><td>7,35,660</td></tr>
<tr><td>ಸೆಪ್ಟಂಬರ್ 2015</td><td>2,13,073</td></tr>
<tr><td>ಅಕ್ಟೋಬರ್ 2015</td><td>1,29,802</td></tr>
<tr><td>ನವೆಂಬರ್ 2015</td><td>54,400</td></tr>
<tr><td>ಡಿಸೆಂಬರ್ 2015</td><td>-</td></tr>
<tr><td>ಜನವರಿ 2016</td><td>1,02,290</td></tr>
<tr><td>ಫೆಬ್ರವರಿ 2016</td><td>11,000</td></tr>
<tr><td>ಮಾರ್ಚಿ 2016</td><td>13,32,046</td></tr>
<tr><td>ಒಟ್ಟು ಸಂಭಾವನೆ ಮೊತ್ತ</td><td>28,92,550-00</td></tr>
</table>
ಸರಕು ಮತ್ತು ಸೇವೆಗಳು ಸಂಗ್ರಹಣೆಯಲ್ಲಿ ನಿಯಮ ಪಾಲನೆ ಮಾಡದೆ ಭರಿಸಿರುವ ವೆಚ್ಚಗಳು:<br>
ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999, ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮಗಳು 2000 ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಖರೀದಿ ನಿಯಮಗಳು 2003 ರ ನಿಯಮ ಸರಕು ಮತ್ತು ಸೇವೆಗಳ ಸಂಗ್ರಹಣೆ ಪ್ರಕರಣಗಳಲ್ಲಿ ನಿಯಮ ಪಾಲಿಸದೆ ಪಾವತಿಸಿರುವ ವೆಚ್ಚ:
</td>
<td>ಬೇಕಾಗಿರುತ್ತದೆ. ಚೀಫ್ ಕಸ್ಟೋಡಿಯನ್ ಮತ್ತು ಉಪ ಕಸ್ಟೋಡಿಯನ್ ಕೆಲಸವನ್ನು ಯು.ಜಿ.ಸಿ./ಯು.ಜಿ.ಸಿ.ಯೇತರ ಸಿಬ್ಬಂದಿ ನಿರ್ವಹಿಸಬಹುದಾಗಿದ್ದು, ಹಾಗೂ ಸದರಿ ಕೆಲಸ ಸಂಪೂರ್ಣ ಆಡಳಿತಾತ್ಮಕ ಕೆಲಸವಾಗಿರುವುದರಿಂದ ಮತ್ತು ಪರೀಕ್ಷಾ ಕಾರ್ಯಗಳ ವ್ಯಾಪ್ತಿಯಲ್ಲಿ ಬರುದಿಲ್ಲವಾದ್ದರಿಂದ ಸದರಿ ಕೆಲಸ ನಿರ್ವಹಿಸಿದ ಸಿಬ್ಬಂದಿಗೆ ಸಂಭಾವನೆ ನೀಡಬೇಕಾಗಿರುತ್ತದೆ. ಹಾಗೂ ಅದರಂತೆ ಇತರೆ ವಿಶ್ವವಿದ್ಯಾನಿಲಯಗಳಲ್ಲಿ ನೀಡುತ್ತಿರುವಂತೆ ಪ್ರಾಧ್ಯಾಪಕರುಗಳಿಗೆ ಸಂಭಾವನೆಯನ್ನು ನೀಡಲಾಗಿರುತ್ತದೆ. ಪರೀಕ್ಷಾ ಪರಿನಿಯಮಗಳಿಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ವತಿಯಿಂದ ವಿಶ್ವವಿದ್ಯಾನಿಲಯಗಳ ಏಕರೂಪ ಮೌಲ್ಯಮಾಪನಕ್ಕೆ ಸಂಬಂಧಿಸಿದ ಪರೀಕ್ಷಾ ಕೈಪಿಡಿ ಮತ್ತು ಭತ್ಯೆ / ಸಂಭಾವನೆಗಳ ಕುರಿತಂತೆ ಪ್ರೊ. ಬಿ.ಬಿ. ಕಲಿವಾಲ್ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಕೈಪಿಡಿಯು ನಿರೀಕ್ಷಣೆಯಲ್ಲಿದೆ ಆದ್ದರಿಂದ ವಿಶ್ವವಿದ್ಯಾನಿಲಯವು ಸಂಭಾವನೆ ನೀಡಿರುವುದು ಸಮರ್ಪಕವಾಗಿದ್ದು ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.</td>
</tr>
<tr>
<td>18.</td>
<td>
ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ಕುಡಿಯುವ ನೀರಿನ ಸರಬರಾಜು ಪಡೆದು ಮೆ॥ ಸುರಭಿ ಆಕ್ವಾ ಇಂಟರ್ ನ್ಯಾಷನಲ್ ಸಂಸ್ಥೆಯವರಿಗೆ ಪಾವತಿಸಿರುವ ಮೊಬಲಗು ರೂ. 82960.00 ಆಕ್ಷೇಪಣೆಯಲ್ಲಿಡಲಾಗಿದೆ:-<br>
2015-16ನೇ ಸಾಲಿನ ತುಮಕೂರು ವಿಶ್ವವಿದ್ಯಾನಿಲಯದ ಲೆಕ್ಕ ಪರಿಶೋಧನೆಯನ್ನು ಕೈಗೊಳ್ಳಲಾಗಿದ್ದು, ಲೆಕ್ಕ ಖಾತೆ ಸಂಖ್ಯೆ: 64095498882 ಯ ಏಪ್ರಿಲ್ ಮಾಹೆಯ ವೋಚರ್‌ಗಳನ್ನು ಪರಿಶೀಲಿಸಲಾಗಿ, ವೋಚರ್ ಸಂಖ್ಯೆ 8 ಹಾಗೂ 9 ರಲ್ಲಿ ಮೆ ಸುರಭಿ ಆಕ್ವಾ ಇಂಟರ್ ನ್ಯಾಷನಲ್ ಇವರಿಗೆ ಕುಡಿಯುವ ನೀರಿನ ಸರಬರಾಜಿಗೆ ಆದೇಶ ಸಂಖ್ಯೆ:ತುವಿ:ಸಾವಿ.ಕು ನೇ-35 ನೀ ಹ.ಪಾ 14-15 ದಿನಾಂಕ:26.03.2015 ರನುಸಾರ ರೂ. 1,05,952/- ಗಳನ್ನು ಚೆಕ್ ಸಂಖ್ಯೆ:532278/07.04.2015 ರ ಮುಖಾಂತರ ಪಾವತಿಸಿರುವುದು ಕಂಡುಬಂದಿದ್ದು, ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಲಾಗಿ ಕುಡಿಯುವ ನೀರಿನ ಸರಬರಾಜಿಗೆ ಮೆ॥ ಸುರಭಿ ಆಕ್ವಾ ಇಂಟರ್ ನ್ಯಾಷನಲ್ ರವರೊಂದಿಗೆ ದಿನಾಂಕ:27.11.2014ರಲ್ಲಿ ಕರಾರು ಮಾಡಿಕೊಂಡಿದ್ದು, ತುಮಕೂರು ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯ ಎಲ್ಲಾ ವಿಭಾಗಗಳಿಗೆ ಘಟಕ ಕಾಲೇಜುಗಳಿಗೆ ಹಾಗೂ ವಸತಿ ನಿಲಯಗಳಿಗೆ ನೀರು
</td>
<td>ಲೆಕ್ಕ ಪರಿಶೋಧನಾಧಿಕಾರಿಗಳು ಕುಡಿಯುವ ನೀರಿನ ಸರಬರಾಜಿಗೆ ಮೆ॥ ಸುರಭಿ ಆಕ್ವಾ ಇಂಟರ್ ನ್ಯಾಷನಲ್ ರವರೊಂದಿಗೆ ದಿನಾಂಕ:27.11.2014ರಲ್ಲಿ ಕರಾರು ಒಪ್ಪಂದವು ದಿನಾಂಕವು 26.11.2015ಕ್ಕೆ ಮುಕ್ತಾಯಗೊಂಡಿದ್ದರೂ, ಮರು ಟೆಂಡರ್ ಮಾಡದೇ ಡಿಸೆಂಬರ್-15 ಮಾಹೆಯಿಂದ ಮಾರ್ಚ್-16ರ ಮಾಹೆಯವರೆಗೆ ಕೆ.ಟಿ.ಪಿ.ಪಿ. ನಿಯಮ ಸೆಕ್ಷನ್ 4(e)&5ರನ್ವಯ ಟೆಂಡರ್ ಮಾಡದೇ ಕುಡಿಯುವ ನೀರನ್ನು ಸದರಿ ಸಂಸ್ಥೆಯವರಿಂದ ಸರಬರಾಜು ಪಡೆದಿರುವ 2015-16 ಸಾಲಿನಲ್ಲಿ ಪಾವತಿಯಾದ ರೂ.</td>
</tr>
</table>

| | | |
|---|---|---|
| | ಸರಬರಾಜಾಗಿದ್ದು, ಸದರಿ ಸಂಸ್ಥೆಯು ರೂ. 5,18,688/– ಮೊತ್ತಗಳಿಗೆ ಬಿಲ್ಲನ್ನು ಸಲ್ಲಿಸಿದ್ದು, ತತ್ಸಂಬಂಧವಾಗಿ ರೂ. 3,80,828/–ಗಳನ್ನು ಮೊತ್ತವನ್ನು ಈಗಾಗಲೇ ಪಾವತಿಸಲಾಗಿದ್ದು, ಉಳಿದಂತೆ ರೂ. 1,37,860/–ಮೊತ್ತಕ್ಕೆ ಸಂಬಂಧಿಸಿದ ಬಿಲ್ಲುಗಳು 2016–17ನೇ ಸಾಲಿನಲ್ಲಿ ಪಾವತಿಯಾಗಿರುತ್ತದೆ. ಟೆಂಡರ್ ಅವಧಿಯು ದಿನಾಂಕ:26.11.2015ಕ್ಕೆ ಮುಕ್ತಾಯಗೊಂಡಿದ್ದರೂ, ಮರು ಟೆಂಡರ್ ಮಾಡದೇ ಡಿಸೆಂಬರ್–15 ಮಾಹೆಯಿಂದ ಮಾರ್ಚ್–16ರ ಮಾಹೆಯವರೆಗೆ ಒಟ್ಟಾರೆ 2,20,820/– ರೂ.ಗಳಿಗೆ ಸಂಬಂಧಿಸಿದಂತೆ ನೀರನ್ನು ಸರಬರಾಜು ಪಡೆದಿದ್ದು, ರೂ. 82,960/–ಗಳನ್ನು ಪಾವತಿಸಿದ್ದು, ಫೆಬ್ರವರಿ–16 ಹಾಗೂ ಮಾರ್ಚ್–16 ಮಾಹೆಯ ಬಿಲ್ಲುಗಳು 2016–17ನೇ ಸಾಲಿನಲ್ಲಿ ಪಾವತಿಯಾಗಿರುತ್ತದೆ. ಕೆ.ಟಿ.ಪಿ.ಪಿ. ನಿಯಮ ಸೆಕ್ಷನ್ 4(e) & 5 ರನ್ವಯ ಟೆಂಡರ್ ಮಾಡದೇ ನೀರಿನ ಸರಬರಾಜು ಪಡೆದಿರುವುದನ್ನು ಆಕ್ಷೇಪಿಸಿ. ರೂ. 82,960/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.<br><br>ಮುಂದುವರೆದು ಕಡತ ಸಂಖ್ಯೆ: ಸಾಮಾನ್ಯ ವಿಭಾಗ ಸಂಖ್ಯೆ:ತುವಿ:ಸಾ.ವಿ.23.ಗ.ಸಂ. 2218 2015–16ರನ್ನು ಪರಿಶೀಲಿಸಲಾಗಿ ದಿನಾಂಕ:17.11.2015ರ ಸಿಂಡಿಕೇಟ್ ಸಭೆಯಲ್ಲಿ ಕುಡಿಯುವ ನೀರಿಗೆ ಶಾಶ್ವತ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದ್ದರೂ, ಈವರೆಗೂ ಈ ನಿಟ್ಟಿನಲ್ಲಿ ಕ್ರಮ ಕೈಗೊಂಡಿರುವುದು ಈ ಕುರಿತು ಸ್ಪಷ್ಟೀಕರಣ ನೀಡುವುದು ಶುದ್ಧ ಕುಡಿಯುವ ನೀರಿನ ಯಂತ್ರವನ್ನು ಅಳವಡಿಸಿಕೊಂಡಿದ್ದಲ್ಲಿ ವಾರ್ಷಿಕವಾಗಿ ಕುಡಿಯುವ ನೀರಿಗೆ ಅನಗತ್ಯವಾಗಿ ಭರಿಸುವ ದುಂದುವೆಚ್ಚವನ್ನು ತಪ್ಪಿಸಬಹುದಾಗಿತ್ತೆಂದು ಲೆಕ್ಕ ಪರಿಶೋಧನೆಯಲ್ಲಿ ಅಭಿಪ್ರಾಯ ಪಡಲಾಗಿದ್ದು, ಕೂಡಲೇ ಈ ಕುರಿತು ಕ್ರಮ ಕೈಗೊಳ್ಳುವಂತೆ ಲೆಕ್ಕ ಪರಿಶೋಧನೆಯಲ್ಲಿ ಸಲಹೆ ನೀಡಲಾಗಿದೆ. ನೀಡಿರುವ ಅನುಸರಣೆಯನ್ನು ಲೆಕ್ಕಪರಿಶೋಧನೆಯಲ್ಲಿ ಒಪ್ಪಲಾಗದ ಕಾರಣ ಆಕ್ಷೇಪಣೆ ಮುಂದುವರೆದಿದೆ. | 82,960/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಎಂದು ತಿಳಿಸಿರುತ್ತಾರೆ. ಮುಂದುವರೆದು ಲೆಕ್ಕ ಪರಿಶೋಧನಾಧಿಕಾರಿಗಳು ದಿನಾಂಕ 17.11.2015 ರ ಸಾಮಾನ್ಯ ಸಿಂಡಿಕೇಟ್ ನಿರ್ಣಯವನ್ನು ಗಮನಿಸಿರುತ್ತಾರೆ. ಸದರಿ ನಿರ್ಣಯ ಈ ಕೆಳಕಂಡಂತಿರುತ್ತದೆ.<br>"ಮೆ. ಸುರಭಿ ಅಕ್ವಾ ಇಂಟರ್‌ನ್ಯಾಷನಲ್, ತುಮಕೂರು ಇವರ ವಾರ್ಷಿಕ ದರ ಕರಾರು ಒಪ್ಪಂದದ ಅವಧಿಯನ್ನು ದಿನಾಂಕ:27.11.2015ರಿಂದ ಟೆಂಡರ್ ಪ್ರಕ್ರಿಯೆಯು ಪೂರ್ಣಗೊಳ್ಳುವವರೆಗೆ ವಿಸ್ತರಿಸುವಂತೆ ಹಾಗೂ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಶಾಶ್ವತವಾಗಿ ಪರ್ಯಾಯ ವ್ಯವಸ್ಥೆಯನ್ನು ವಿಶ್ವವಿದ್ಯಾನಿಲಯವು ಮಾಡಿಕೊಳ್ಳುವಂತೆ ಸೂಚಿಸಿತು." (ಪ್ರತಿ ಲಗತ್ತಿಸಿದೆ)<br>ಈ ಮೇಲ್ಕಂಡ ನಿರ್ಣಯದಂತೆ ಕುಡಿಯುವ ನೀರಿಗೆ ಶಾಶ್ವತವಾಗಿ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಲು 24.11.2015 ರಂದು ಕಾರ್ಯಪಾಲಕ ಅಭಿಯಂತರರಿಗೆ, ತು.ವಿ.ತು ಇವರಿಗೆ ಆದೇಶಿಸಲಾಗಿದೆ.(ಪ್ರತಿ ಲಗತ್ತಿಸಿದೆ) ಹಾಗೂ ದರಕರಾರಿನಂತೆ ಎರಡು ಸಂಸ್ಥೆಗಳ ಪರಸ್ಪರ ಸಮ್ಮತಿಯ ಮೇರೆಗೆ ಕರಾರು ಒಪ್ಪಂದ ಮುಂದುವರೆಸುವ ಅವಕಾಶ ಇರುವುದರಿಂದ ಸಿಂಡಿಕೇಟ್ ನಿರ್ಣಯದಂತೆ 27.11.2015 ರಿಂದ ಟೆಂಡರ್ ಪ್ರಕ್ರಿಯೆಯು ಪೂರ್ಣಗೊಳ್ಳುವವರೆಗೆ ವಿಸ್ತರಿಸಲು ಮೆ. ಸುರಭಿ ಅಕ್ವಾ ಇಂಟರ್‌ನ್ಯಾಷನಲ್, ತುಮಕೂರು ದಿನಾಂಕ 27.11.2015 ರಿಂದ ಮುಂದಿನ ಆದೇಶದವರೆಗೂ ಕುಡಿಯುವ ನೀರನ್ನು ಸರಬರಾಜು ಮಾಡಲು ಆದೇಶ ನೀಡಲಾಗಿರುತ್ತದೆ. ತದನಂತರ ಟೆಂಡರ್ ಪ್ರಕ್ರಿಯೆಯು ಮಾರ್ಚ್ ಮಾಹೆಯಲ್ಲಿ ಅಂತ್ಯಗೊಂಡಿರುತ್ತದೆ ಸರಬರಾಜನ್ನು ನಿಲ್ಲಿಸಲಾಗಿರುತ್ತದೆ.<br>ಈ ಮೇಲ್ಕಂಡ ವಿವರಗಳ ಹಿನ್ನಲೆಯಲ್ಲಿ ವಿದ್ಯಾರ್ಥಿಗಳ ಹಾಗೂ ಸಿಬ್ಬಂದಿಗಳ ಆರೋಗ್ಯದ ಹಿತದೃಷ್ಟಿಯಿಂದ ಮೂಲಸೌಕರ್ಯವಾದ ಕುಡಿಯುವ ನೀರಿಗೆ ಆಕ್ಷೇಪಣೆ ಮಾಡಲಾದ ರೂ. 82,960/–ಗಳನ್ನು ಆಕ್ಷೇಪಣೆಯಿಂದ ಕೈಬಿಡುವಂತೆ ಮತ್ತೊಮ್ಮೆ ಕೋರಲಾಗಿದೆ. |

<table>
<tr>
<td>19.</td>
<td>ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ರಾಸಾಯನಿಕಗಳನ್ನು ಖರೀದಿಸಿ ಪಾವತಿಸಿರುವ ಮೊಬಲಗು ರೂ. 2,46,382/– ಆಕ್ಷೇಪಣೆ:–<br>ಸಂಶೋಧನಾ ಯೋಜನೆ (ಡಾ.ಗಿರೀಶ್ ಕೆ.ಎಸ್) "Ant arthntic activity of lipids from the dried exudates of Commiphorumukul SERB (Fund from Science & Engineering Research Building) New Delhi" ಯಿಂದ 30.03.2015 ರಲ್ಲಿ ಸಂಬಂಧಪಟ್ಟ ಬ್ಯಾಂಕ್ ಖಾತೆಗೆ ಜಮಾ ಆದ ರೂ. 16,00,000–00 (ಮೊದಲನೇ ಕಂತಿನ ಹಣ)ಗಳಲ್ಲಿ ರಾಸಾಯನಿಕ ಖರೀದಿ ಮಾಡಿರುವ ಬಿಲ್ಲು ದಿನಾಂಕ:29.10.2015ನ್ನು ಲೆಕ್ಕ ಪರಿಶೀಲಿಸಲಾಗಿದ್ದು, M/s Sudha Traders, Shimogga ರವರಿಂದ ಒಟ್ಟು ರೂ. 2,46,382/– ಗಳಿಗೆ ರಾಸಾಯನಿಕ ಖರೀದಿ ಮಾಡಿರುತ್ತೀರಿ. ಅದರೆ ರಾಸಾಯನಿಕ ಖರೀದಿ ಮಾಡಲು ಕೆ.ಟಿ.ಪಿ.ಪಿ.ನಿಯಮ ಪ್ರಕಾರ ಟೆಂಡರ್ ಮೂಲಕ ದರ ಅನುಮೋದನೆಗೊಂಡ ಸರಕು ಖರೀದಿ ಮಾಡಿರುವ ಬಗ್ಗೆ ದಾಖಲೆಗಳನ್ನು ಪರಿಶೀಲನೆಗೆ ಒದಗಿಸಿರುವುದಿಲ್ಲ.<br>ಆದಕಾರಣ ಸದರಿ ರಾಸಾಯನಿಕ ಖರೀದಿಯಲ್ಲಿ ತಾವು ಅನುಸರಿಸಲಾದ ಕ್ರಮಗಳೇನು? ಎಂಬ ಬಗ್ಗೆ ಸಂಬಂಧಪಟ್ಟ ದಾಖಲೆಗಳೊಂದಿಗೆ ವಿವರಣೆ ನೀಡಲು ಕೋರಲಾಗಿ ವಿವರಗಳನ್ನು ಒದಗಿಸಿರುವುದಿಲ್ಲ. ಕರ್ನಾಟಕ ಸಾರ್ವಜನಿಕ ಸಂಗ್ರಣೆಗಳಲ್ಲಿ ಪಾರದರ್ಶಕ ಅಧಿನಿಯಮಗಳು 1999–2000 ರ ಸೆಕ್ಷನ್ 5ರನ್ವಯ ಟೆಂಡರ್ ಪ್ರಕ್ರಿಯೆ ಕೈಗೊಳ್ಳದ ಕಾರಣ ಖರೀದಿಗೆ ಪಾವತಿಸಲಾದ ರೂ. 2,46,382.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.</td>
<td>ಒಟ್ಟು ರೂ. 2,46,382/–ಗಳಿಗೆ ರಸಾಯನಿಕ ಖರೀದಿ ಮಾಡಿದ್ದು, ಆದರೆ ರಸಾಯನಿಕ ಖರೀದಿ ಮಾಡಲು ಕೆ.ಟಿ.ಪಿ.ಪಿ. ನಿಯಮ ಪ್ರಕಾರ ಟೆಂಡರ್ ಮೂಲಕ ಧರ ಅನುಮೋದನೆಗೊಂಡ ಸರಕು ಖರಿದಿ ಮಾಡಿರುವ ಬಗ್ಗೆ ದಾಖಲೆಗಳನ್ನು ಪರಿಶೀಲನೆಗೆ ಒದಗಿಸಲಾಗಿದೆ.ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.</td>
</tr>
<tr>
<td>20.</td>
<td>ಕೆಟಿಪಿಪಿ ನಿಯಮ ಉಲ್ಲಂಘಿಸಿ ರಾಸಾಯನಿಕ ಖರೀದಿಸಿ ಪಾವತಿಸಿರುವ ಮೊಬಲಗು ಆಕ್ಷೇಪಣೆ ಮೊತ್ತ ರೂ 1,71,584/–<br>ತುಮಕೂರು ವಿಶ್ವವಿದ್ಯಾನಿಲಯವು VGST ಸಂಸ್ಥೆಯಿಂದ ಮಂಜೂರಾಗಿರುವ Identification of Novel factor Xa and thrombin inhibitors in the management of thromboem bolism ಸಂಶೋಧನಾ ಯೋಜನೆಯನ್ನು ನಿರ್ವಹಿಸುತ್ತಿದ್ದು, ಈ ಕೆಳಕಂಡ ನ್ಯೂನತೆ ಕಂಡು ಬಂದಿರುತ್ತದೆ.
<table>
<tr><th>ಕ್ರಮ ಸಂಖ್ಯೆ</th><th>ಖಾತೆ ಸಂಖ್ಯೆ ಕಾರ್ಯಕ್ರಮ</th><th>ಯಾರಿಗೆ ಪಾವತಿಸಿದ,</th><th>ವೆಚ್ಚದ ವಿವರ</th><th>ಚೆಕ್ ಸಂಖ್ಯೆ/ ದಿನಾಂಕ</th><th>ಮೊತ್ತ</th><th>ಆಕ್ಷೇಪಣೆ</th></tr>
<tr><td>1</td><td>64116998182 ಸಂಶೋಧನಾ ಯೋಜನೆ ಡಾ. ಎಸ್. ದೇವರಾಜು, ಸಹ ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ಅಧ್ಯಯನ ಹಾಗೂ ಸಂಶೋಧನಾ ವಿಭಾಗ,</td><td>Srusti Pharma Product Bangal ore</td><td>ರಾಸಾಯನಿಕ & ಇತರೆ ಉಪಕರಣ ಖರೀದಿ Pipetman Starter Kit & multi channel Pipetman & Lboratory Chemicals</td><td>906763 03.03.2016 906764 03.03.2016</td><td>171584.00</td><td>ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳು ಪಾರದರ್ಶಕ ಅಧಿನಿಯಮ 1999 ಪ್ರಕಾರ ಟೆಂಡರ್ ಮಾಡಿರುವುದಿಲ್ಲ</td></tr>
</table>
ಮೇಲ್ಕಂಡ ಸಂಸ್ಥೆಯಿಂದ ರಾಸಾಯನಿಕ ಮತ್ತು ಇತರೆ ಉಪಕರಣಗಳ ಖರೀದಿ ಸಂಬ ಕೆ.ಟಿ.ಪಿ.ಪಿ ನಿಯಮ ಸೆಕ್ಷನ್ 5 ರನ್ವಯ ಟೆಂಡರ್ ಮಾಡಿಲ್ಲದಿರುವುದು ರೂ. 1,71,584. ಆಕ್ಷೇಪಣೆಯಲ್ಲಿಡಲಾಗಿದೆ.</td>
<td>ರಾಸಾಯನಿಕ ಮತ್ತು ಇತರೆ ಉಪಕರಣಗಳನ್ನು ಖರೀದಿಸಿರುವ ಬಗ್ಗೆ ಟೆಂಡರ್ ಪ್ರಕ್ರಿಯೆ ಮಾಡದಿರುವ ಬಗ್ಗೆ ಆಕ್ಷೇಪಿಸಲಾಗಿದ್ದು, Srusti Pharma Product ಸಂಸ್ಥೆಯ ಕಿಯೋನಿಕ್ಸ್ ಸಂಸ್ಥೆಯಲ್ಲಿ ವಿಲೀನಗೊಂಡಿದ್ದು, ಸರ್ಕಾರಿ ಆದೇಶ ಸಂಖ್ಯೆ:ಅಇ 15 ವೆಚ್ಚ–12/15 ದಿನಾಂಕ:30.01.2015ರಲ್ಲಿ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮನಿಯಮಿತ (ಕೀಯೋನಿಕ್ಸ್) ಸಂಸ್ಥೆಯಿಂದ 30.01.2015ರಿಂದ ಒಂದು ವರ್ಷದ ಅವಧಿಗೆ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಸ್ಥೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಕಲಂ 4 (ಜಿ) ರಡಿ ಪ್ರದತ್ತವಾದ ಆರ್ಥಿಕ ಚಲಾಯಿಸಿ ಪಾರದರ್ಶಕ ಕಾಯ್ದೆಯಿಂದ ವಿನಾಯಿತಿ ನೀಡಿರುವುದರಿಂದ ಟೆಂಡರ್ ಪ್ರಕ್ರಿಯೆ ನಡೆಸಿರುವುದಿಲ್ಲ. ಆದ್ದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಿದೆ. ಇದಕ್ಕೆ ಸಂಬಂಧಿಸಿದ ಪ್ರತಿಗಳನ್ನು ಲಗತ್ತಿಸಿದೆ.</td>
</tr>
</table>

**21.**

**ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ಮುದ್ರಣ ಮೆ॥ ನಿರುತ ಪಬ್ಲಿಕೇಷನ್ ಸಂಸ್ಥೆಯಿಂದ ಪರಿಚಯಿ ಕೈಪಿಡಿ ಮುದ್ರಿಸಿ ಪಾವತಿಸಿರುವ ಮೊಬಲಗು ರೂ. 1,46,168/– ಆಕ್ಷೇಪಣೆ:–**

2015–16ನೇ ಸಾಲಿಗೆ ತುಮಕೂರು ವಿಶ್ವವಿದ್ಯಾನಿಲಯ ಲೆಕ್ಕ ಪರಿಶೋಧನೆಯಲ್ಲಿ ಲೆಕ್ಕ ಖ ಸಂಖ್ಯೆ:64095498882 ರಲ್ಲಿ ಪಾವತಿಯಾಗಿರುವ ಓಚರ್‌ಗಳನ್ನು ಪರಿಶೀಲಿಸಲಾಗಿ 2015–16ನೇ ಶೈಕ್ಷ ವರ್ಷದ ಸ್ನಾತಕೋತ್ತರ ಪರಿಚಯ ಕೈಪಿಡಿ ಮತ್ತು ಅರ್ಜಿ ನಮೂನೆಗಳನ್ನು ಮುದ್ರಿಸಿ ಸರಬರಾ ಮಾಡಿರುವುದಕ್ಕೆ ನಿರುತ ಪಬ್ಲಿಕೇಷನ್ ಸಂಸ್ಥೆಗೆ ಕೆಳಕಂಡಂತೆ ಪಾವತಿಸಿರುತ್ತಾರೆ.

| ಕ್ರಮ ಸಂಖ್ಯೆ | ಸಂಸ್ಥೆ | ವಿವರ | ಮೊತ್ತ | ಚೆಕ್ ಸಂಖ್ಯೆ/ ದಿನಾಂಕ |
|---|---|---|---|---|
| 1 | M/s ನಿರುತ ಪಬ್ಲಿಕೇಷನ್ | 2500 ಪರಿಚಯ ಕೈಪಿಡಿ ಹಾಗೂ ಅರ್ಜಿ ನಮೂನೆಗಳು | 97,445.00 | 532727/ 04.08.2015 |
| 2 | M/s ನಿರುತ ಪಬ್ಲಿಕೇಷನ್ | 1250 ಪರಿಚಯ ಕೈಪಿಡಿ ಹಾಗೂ ಅರ್ಜಿ ನಮೂನೆಗಳು | 48,723.00 | 462020/ 26.10.2015 |
| | | **ಒಟ್ಟು ಮೊತ್ತ ರೂ.** | **1,46,168.00** | |

ಸಂಬಂಧಪಟ್ಟ ಕಡತ ಸಂಖ್ಯೆ:ತುವಿ:AC:PGCDE-08 ಶೈಕ್ಷಣಿಕ ವಿಭಾಗ ಕಡತ ಪರಿಶೀಲಿಸಲಾಗಿ 20 16ನೇ ಶೈಕ್ಷಣಿಕ ವರ್ಷದ ಸ್ನಾತಕೋತ್ತರ 2500 ಸಂಖ್ಯೆ ಪರಿಚಯ ಕೈಪಿಡಿ ಮತ್ತು ಲಕೋ 12”x9”2500 ಸಂಖ್ಯೆ ಹಾಗೂ A4 ಅಳತೆಯ 2500 ಅರ್ಜಿ ನಮೂನೆಗಳ ಮುದ್ರಣ ಹಾ ಸರಬರಾಜಿಗೆ ನಿರ್ದೇಶಕರು ಸ್ನಾತಕೋತ್ತರ ಕೇಂದ್ರ, ತುಮಕೂರು ಇವರ ಪತ್ರ ಸಂಖ್ಯೆ: ತುವಿ ಸ್ನಾ 2015–16 ದಿನಾಂಕ:12.06.2015ರಲ್ಲಿ ದರ ಪಟ್ಟಿ ಆಹ್ವಾನಿಸಲಾಗಿದ್ದು, ಇದರಲ್ಲಿ ಮೆ॥ ನಿರುತ ಪಬ್ಲಿಕೇ ಸಂಸ್ಥೆಯು ಕನಿಷ್ಠ ದರ ಸೂಚಿಸಿರುವುದಾಗಿ ಇವರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಪುನಃ 1 ಪರಿಚಯ ಕೈಪಿಡಿ ಅರ್ಜಿ ನಮೂನೆಗಳ ಲಕೋಟೆಗಳನ್ನು ಮುದ್ರಿಸುವಂತೆ ಆದೇಶಿಸಲಾಗಿದ್ದು, ಆ ಸಂಖ್ಯೆ:ತುವಿ:ಶೈವಿ:2015–16:2080 ತುಮಕೂರು ದಿನಾಂಕ:17.08.2015 ರನ್ವಯ ರೂ. 49717 ಪಾವತಿಸಲಾಗಿರುತ್ತದೆ. ಒಟ್ಟಾರೆ ಮೆ॥ ನಿರುತ ಪಬ್ಲಿಕೇಷನ್ ಸಂಸ್ಥೆಯವರಿಗೆ ಪರಿಚಯ ಕೈಪಿಡಿ ಲಕೋ ಹಾಗೂ ಅರ್ಜಿ ನಮೂನೆಗಳ ಮುದ್ರಣ ಹಾಗೂ ಸರಬರಾಜಿಗೆ ಪಾವತಿಸಲಾದ ಮೊತ್ತ ರೂ.1 ಮೀರಿರುವುದರಿಂದ ಕೆ.ಟಿ.ಪಿ.ಪಿ. ಅಧಿನಿಯಮ 1999 & 2000 ಸೆಕ್ಷನ್ 4 (e) & 5 ರನ್ವಯ ಟೆಂ ಮಾಡದೇ ಪಾವತಿಸಿರುವುದರಿಂದ ರೂ. 1,46,168–00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಹಾ ತತ್ಸಂಬಂಧ ನಿರ್ವಹಿಸಲಾದ ದಾಸ್ತಾನು ವಿತರಣಾ ವಹಿಗಳನ್ನು ಲೆಕ್ಕ ಪರಿಶೋಧನೆಗೆ ಸಲ್ಲಿಸಿರುವುದಿಲ್ಲ ಕುರಿತು ಸ್ಪಷ್ಟೀಕರಣ ನೀಡಲು ಸೂಚಿಸಿದೆ. ನೀಡಿರುವ ಅನುಸರಣೆಯನ್ನು ಒಪ್ಪಲಾಗದ ಕಾರಣ ಆಕ್ಷೇ ಕಂಡಿಕೆ ಮುಂದುವರೆದಿದೆ.

ಈ ಕಚೇರಿ ಪತ್ರ ಸಂಖ್ಯೆ ತುವಿ:ಶೈವಿ:2017–18:745 ದಿನಾಂಕ: 26.05.2017 ರಲ್ಲಿ ಈಗಾಗಲೇ ಸ್ಪಷ್ಟೀಕರಣ ನೀಡಲಾಗಿದ್ದು., ಈ ಸಂಬಂಧ ಕೈಗೊಂಡ ಕ್ರಮಗಳನ್ನು ಕೆಳಕಂಡಂತೆ ಮತ್ತೊಮ್ಮೆ ತಮ್ಮ ಅವಗಾಹನೆಗೆ ತರಲಾಗಿದೆ.

2015–16ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿ ಸಂಬಂಧ ಪರಿಚಯ ಕೈಪಿಡಿ ಹಾಗೂ ಅರ್ಜಿ ನಮೂನೆಗಳನ್ನು ಮುದ್ರಿಸಿ, ಸರಬರಾಜು ಪಡೆಯುವಂತೆ ನಿರ್ದೇಶಕರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಅನುಮತಿಸಲಾಗಿತ್ತು.

ಸದರಿಯವರು ಪರಿಚಯ ಕೈಪಿಡಿ ಹಾಗೂ ಅರ್ಜಿ ನಮೂನೆಗಳನ್ನು ಮುದ್ರಿಸಿ ಸರಬರಾಜು ಪಡೆಯಲು ದರಪಟ್ಟಿಗಳನ್ನು ಆಹ್ವಾನಿಸಿ, ಮೆ॥ ನಿರುತಾ ಪಬ್ಲಿಕೇಷನ್, ಬೆಂಗಳೂರು ಇವರಿಂದ ಸರಬರಾಜು ಪಡೆಯಲು ಆದೇಶ ನೀಡಲಾಗಿತ್ತು.

ಅದರಂತೆ, ಸದರಿಯವರು 2,500 ಪರಿಚಯ ಕೈಪಿಡಿ ಹಾಗೂ ಅರ್ಜಿ ನಮೂನೆಗಳನ್ನು ಮುದ್ರಿಸಿ ಸರಬರಾಜು ಮಾಡಿರುತ್ತಾರೆ. ಸದರಿ ಸರಬರಾಜಿಗೆ ಸಂಬಂಧಿಸಿದಂತೆ ಒಟ್ಟು ರೂ.99,434/= ಗಳನ್ನು ಪಾವತಿಸಲು ಮಂಜೂರಾತಿ ನೀಡಲಾಗಿರುತ್ತದೆ. ಆದರೆ, 2015–16 ನೇ ಶೈಕ್ಷಣಿಕ ವರ್ಷದಲ್ಲಿ **ಶೇಕಡ 15ರಷ್ಟು ಹೊರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಸೀಟುಗಳನ್ನು ನೀಡುವ ಸಂಬಂಧ ವಿಶ್ವವಿದ್ಯಾನಿಲಯ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿದ ಹಿನ್ನೆಲೆಯಲ್ಲಿ ಪರಿಚಯ ಕೈಪಿಡಿ ಹಾಗೂ ಅರ್ಜಿ ನಮೂನೆಗಳಿಗೆ ವಿದ್ಯಾರ್ಥಿಗಳಿಂದ ಬೇಡಿಕೆ ಹೆಚ್ಚಾಗಿದ್ದ ಕಾರಣ ಮತ್ತೊಮ್ಮೆ ಹೆಚ್ಚುವರಿಯಾಗಿ 1,250 ಪರಿಚಯ ಕೈಪಿಡಿ ಹಾಗೂ ಅರ್ಜಿ ನಮೂನೆಗಳನ್ನು ಸದರಿ ಸಂಸ್ಥೆಯವರಿಂದ ಸರಬರಾಜು ಪಡೆಯಲಾಗಿರುತ್ತದೆ. ಈ ವಿಷಯವನ್ನು, ವಿಶೇಷ ಪ್ರಕರಣವೆಂದು ಪರಿಗಣಿಸಿ ಮತ್ತೊಮ್ಮೆ ಸದರಿ ಸಂಸ್ಥೆಗೆ ರೂ. 49,717/= ಗಳನ್ನು ಪಾವತಿಸಲು ಮಂಜೂರಾತಿ ನೀಡಲಾಗಿರುತ್ತದೆ** ಹಾಗೂ ದಾಸ್ತಾನು ವಿತರಣಾ ವಹಿಗಳು ನಿರ್ದೇಶಕರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಇವರ ಅಧೀನದಲ್ಲಿರುತ್ತದೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರಲಾಗಿದೆ.

| | | |
|---|---|---|
| **22.** | **ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ಮೆ॥ ಹೇಮಲತಾ ಕ್ಲೀನ್ & ಕೇರ್ ಸಂಸ್ಥೆಯಿಂದ ಹೌಸ್ ಕೀಪಿಂಗ್ ಸೇವೆ ಪಡೆದು ಪಾವತಿಸಿರುವ ಮೊಬಲಗು ರೂ. 88,48,039/– ಆಕ್ಷೇಪಣೆ:–**<br><br>2015–16ನೇ ಸಾಲಿಗೆ ತುಮಕೂರು ವಿಶ್ವವಿದ್ಯಾನಿಲಯ ಲೆಕ್ಕ ಪರಿಶೋಧನೆಯಲ್ಲಿ ಲೆಕ್ಕ ಖಾತೆ ಸಂಖ್ಯೆ:64095498882 ರಲ್ಲಿ ಪಾವತಿಯಾಗಿರುವ ಓಚರ್‌ಗಳನ್ನು ಪರಿಶೀಲಿಸಲಾಗಿ ತುಮಕೂರು ವಿಶ್ವವಿದ್ಯಾನಿಲಯ ಆಡಳಿತ ಕಛೇರಿ, ಕಾಲೇಜುಗಳು, ಅತಿಥಿ ಗೃಹ ಹಾಗೂ ಪುರುಷರ ಮತ್ತು ಮಹಿಳೆಯರ ವಿದ್ಯಾರ್ಥಿನಿಲಯಗಳ ಸ್ವಚ್ಛತಾ ಕಾರ್ಯನಿರ್ವಹಣೆ ಹಾಗೂ ಉದ್ಯಾನವನಗಳ ನಿರ್ವಹಣಾ ಕಾರ್ಯಕ್ಕೆ ಸಂಖ್ಯೆ:ತುವಿ/ತಾವಿ/ಟೆಂ.ಪ್ರ/2014–15/3 ದಿನಾಂಕ:05.08.2014ಇ–ಪ್ರೊಕ್ಯೂರ್‌ಮೆಂಟ್ ಆಹ್ವಾನಿಸಲಾಗಿರುತ್ತದೆ. ದಿನಾಂಕ:16.09.2014ರಂದು ತಾಂತ್ರಿಕ ಬಿಡ್‌ಅನ್ನು ಹಾಗೂ ದಿನಾಂಕ:23.09.2014ರಂದು ಆರ್ಥಿಕ ಬಿಡ್‌ಅನ್ನು ತೆರೆಯಲಾಗಿರುತ್ತದೆ.<br><br>ಹೌಸ್ ಕೀಪಿಂಗ್ ಮ್ಯಾನ್ ಪವರ್ ಸೇವೆಗೆ 6 ಜನ ಗುತ್ತಿಗೆದಾರರು ಭಾಗವಹಿಸಿದ್ದು, ವಿವರ ಕೆಳಕಂಡಂತಿರುತ್ತದೆ.<br>1.M/s Chinnahallai Virupakshaiah Udayakumar (Sri Udyog Enterprises) Bangalore<br>2.M/s Chinnamma Milla Narayana Reddy Venkatareddy (Pramad Security Services)<br>3.Dayananda R. (Appu Detective & Security Service) Bangalore<br>4.M.D. Devaiah (Sri Mathru Enterprises) Bangalore<br>5.M/s Hemalatha ( Clean & Care) Bangalore<br>6.Hemasunder Reddy (Panorama Enterprises) Bangalore.<br><br>ತಾಂತ್ರಿಕ ಬಿಡ್‌ನ್ನು ಪರಿಶೀಲಿಸದ ನಂತರ ಟೆಂಡರ್ ಮೌಲ್ಯಮಾಪನ ಸಮಿತಿಯು M/sChinnamma Milla Narayana Reddy Venkatareddy (Pramad Security Services) ಸಂಸ್ಥೆಯನ್ನು ತಾಂತ್ರಿಕವಾಗಿ ಪರಿಪೂರ್ಣವಾಗಿರುವುದಿಲ್ಲವೆಂದು ತಿರಸ್ಕರಿಸಿರುತ್ತಾರೆ. M.D. Devaiah (Sri Mathru Enterprises) Bangalore$L_1$ ಟೆಂಡರ್ ದಾರರಾಗಿದ್ದು, Hemalatha (Clean & Care) Bangalore $L_4$ ಟೆಂಡರ್ ದಾರರಾಗಿರುತ್ತಾರೆ. ಇವರಿಗೆ ಹೌಸ್ ಕೀಪಿಂಗ್ ಸೇವೆಯನ್ನು ನಿರ್ಣಯಿಸಲಾಗಿ ದಿನಾಂಕ:18.03.2015ರ ಸಿಂಡಿಕೇಟ್ ಸಭೆಯಲ್ಲಿ ಕುಲಪತಿಗಳಿಗೆ ಮರು ಟೆಂಡರ್ ಮಾಡುವ ನಿರ್ಣಯ ಕೈಗೊಳ್ಳಲು ಅಧಿಕಾರ ನೀಡಿರುತ್ತಾರೆ. ದಿನಾಂಕ:30.07.2015ರ ಸಿಂಡಿಕೇಟ್ ಸಭೆಯಲ್ಲಿ M/s Hemalatha (Clean & Care) ರವರಿಗೆ ದಿನಾಂಕ: 31.03.2016 ಸೇವೆಯನ್ನು ನೀಡಲು ತೀರ್ಮಾನಿಸಿರುತ್ತಾರೆ. ದಿನಾಂಕ:21.08.2015ರ ಕಾರ್ಯಪಾಲಕ ಇಂಜಿನಿಯರ್ ರವರ ಆದೇಶ ಸಂಖ್ಯೆ: No. TU/Eng/20/2014-15/98 ರಲ್ಲಿ Hemalatha (Clean & Care) Bangalore ಇವರೊಂದಿಗೆ ದಿನಾಂಕ:01.08.2015ರಿಂದ 31.03.2016ರ ವರೆಗೆ ಸೇವೆ ವಿಸ್ತರಿಸಲಾಗಿದ್ದು, ಕಾರ್ಯಾದೇಶ ನೀಡಿರುತ್ತಾರೆ. ದಿನಾಂಕ:31.08.2013ಕ್ಕೆ ಹೌಸ್ ಕೀಪಿಂಗ್ ಸೇವೆಯ ಟೆಂಡರ್ ಅವಧಿ ಮುಗಿದಿದ್ದರೂ ಕೆ.ಟಿ.ಪಿ.ಪಿ ನಿಯಮ1999&2000 ರ ಸೆಕ್ಷನ್ 4 (e) &5 ರನ್ವಯ ಟೆಂಡರ್ ಮಾಡದೇ | ತುಮಕೂರು ವಿಶ್ವವಿದ್ಯಾನಿಲಯದ ಆಡಳಿತ ಕಛೇರಿ, ಕಾಲೇಜುಗಳು, ಅತಿಥಿಗೃಹ ಹಾಗೂ ಪುರುಷರ ಮತ್ತು ಮಹಿಳೆಯರ ವಿದ್ಯಾರ್ಥಿನಿಲಯಗಳ ಸ್ವಚ್ಛತಾ ಕಾರ್ಯನಿರ್ವಹಣೆ ಹಾಗೂ ಉದ್ಯಾನವನಗಳ ನಿರ್ವಹಣೆಯ ಟೆಂಡರನ್ನು ದಿನಾಂಕ 01.08.2015 ರಿಂದ 31.03.2016ರವರೆಗೆ ವಿಸ್ತರಿಸಿ ಕಾರ್ಯಾದೇಶ ನೀಡಿದ್ದು, ಟೆಂಡರ್ ಅವಧಿ ಮುಗಿದಿದ್ದರೂ ಟೆಂಡರ್ ಮಾಡದೇ ಸೇವೆಯನ್ನು ಮುಂದುವರೆಸಿ ಮೆ. ಹೇಮಲತಾ, ಕ್ಲೀನ್ ಅಂಡ್ ಕೇರ್, ಬೆಂಗಳೂರು ಸಂಸ್ಥೆಯೊಂದಿಗೆ, ದಿನಾಂಕ 01.08.2015ರಿಂದ 31.03.2016ರ ವರೆಗೆ 08 ತಿಂಗಳ ಅವಧಿಗೆ ಕರಾರು ಮಾಡಿಕೊಂಡು ಸೇವೆ ಪಡೆದು ರೂ. 88,48,039/– ಗಳನ್ನು 2015–16ನೇ ಸಾಲಿನಲ್ಲಿ ಪಾವತಿಸಿರುವ ಬಗ್ಗೆ ಸದರಿ ಮೊತ್ತವನ್ನು ಆಕ್ಷೇಪಣೆಯಲ್ಲಿ ಇಡಲಾಗಿರುತ್ತದೆ. ದಿನಾಂಕ 31.03.2016 ರಿಂದ ಮೇ–2016 ರವರೆಗೆ ಸದರಿ ಸಂಸ್ಥೆಗೆ ಟೆಂಡರನ್ನು ವಿಸ್ತರಿಸಿರುವ ಬಗ್ಗೆ ಸ್ಪಷ್ಟೀಕರಣ ಕೇಳಲಾಗಿರುತ್ತದೆ.<br><br>ಸದರಿ ಸೇವೆಯನ್ನು ಪಡೆಯಲು ಈ ಹಿಂದೆ ಟೆಂಡರ್ ಅಧಿಸೂಚನೆ ಸಂಖ್ಯೆ: ತುವಿ/ತಾವಿ/ಟೆಂಪ್ರ/2013–14/20 ದಿನಾಂಕ 28.08.2013 ರಂದು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಅದರಲ್ಲಿ ಕೇವಲ ಏಕೈಕ ಬಿಡ್‌ದಾರರು ಭಾಗವಹಿಸಿದ್ದರಿಂದ ಪಾರದರ್ಶಕ ನಿಯಮ 17(ಸಿ) ಯ ಪ್ರಕಾರ ಕನಿಷ್ಠ ಕಾಲಾವಕಾಶವನ್ನು ನೀಡದೇ ಇದ್ದುದರಿಂದ ವಿಶ್ವವಿದ್ಯಾನಿಲಯವು ಟೆಂಡರನ್ನು ರದ್ದುಗೊಳಿಸಿ, ಮರು ಟೆಂಡರ್ ಅಧಿಸೂಚನೆಯನ್ನು ಅಧಿಸೂಚನೆ ಸಂಖ್ಯೆ: ತುವಿ/ತಾವಿ/ ಟೆಂಪ್ರ/2013–14/38ಅ ರಂತೆ ದಿನಾಂಕ 12.12.2013 ರಂದು ಪ್ರಕಟಣೆ ಹೊರಡಿಸಲಾಗಿರುತ್ತದೆ. ಈ ಮಧ್ಯೆಯಲ್ಲಿ ತುಮಕೂರು ನಗರ ಪಾಲಿಕೆಯು ಮಹಾನಗರ ಪಾಲಿಕೆಯಾಗಿ ಪರಿವರ್ತನೆಗೊಂಡಿದ್ದರಿಂದ ಕನಿಷ್ಠ ವೇತನದಲ್ಲಿ ಆದ ಬದಲಾವಣೆಯಿಂದಾಗಿ ಟೆಂಡರ್ ಅಧಿಸೂಚನೆ ಸಂಖ್ಯೆ: ತುವಿ/ತಾವಿ/ಟೆಂ.ಪ್ರ/2014–15/3(1) ರಂತೆ ದಿನಾಂಕ 05.08.2014 ರಂದು ಮರು ಟೆಂಡರ್ ಪ್ರಕಟಣೆ ಹೊರಡಿಸಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ತಾಂತ್ರಿಕವಾಗಿ ತೇರ್ಗಡೆ ಹೊಂದಿದ ಮೆ. ಕ್ಲೀನ್ ಅಂಡ್ ಕೇರ್, ಬೆಂಗಳೂರು ರವರಿಗೆ ದಿನಾಂಕ 01.08.2015 ರಿಂದ ಜಾರಿಗೆ ಬರುವಂತೆ ಸದರಿ ಸೇವೆಯ ಟೆಂಡರನ್ನು ವಹಿಸಲಾಗಿರುತ್ತದೆ. ಆಕ್ಷೇಪಣೆಯಲ್ಲಿ ಇರುವಂತೆ ಇದು ಟೆಂಡರ್ ವಿಸ್ತರಣೆ |

<table>
<tr>
<td></td>
<td>ಸೇವೆಯನ್ನು ಮುಂದುವರೆಸುತ್ತಾ M/s Hemalatha (Clean & Care) Bangalore ಸಂಸ್ಥೆಯವರೊಂದಿಗೆ ದಿನಾಂಕ:01.08.2015ರಿಂದ 31.03.2016ರ ವರೆಗೆ 8 ತಿಂಗಳವರೆಗೆ ಕರಾರು ಮಾಡಿಕೊಂಡು ಸೇವೆ ಪಡೆದು ರೂ. 88,48,039–00ಗಳನ್ನು 2015–16ನೇ ಸಾಲಿಗೆ ಪಾವತಿಸಿರುತ್ತಾರೆ. ಟೆಂಡರ್ ಮಾಡದೆ ಸೇವೆಯನ್ನು ಪಡೆದಿರುವುದರಿಂದ ರೂ. 88,48,039–00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಮುಂದುವರೆದು ದಿನಾಂಕ:31.03.2016 ರಿಂದ ಮೇ,2016ರ ವರೆಗೆ ಸದರಿ ಸಂಸ್ಥೆಗೆ ಸೇವೆಯನ್ನು ಟೆಂಡರ್ ಮಾಡದೇ ಮುಂದುವರೆಸಿರುವುದು ಕಡತಗಳ ಪರಿಶೀಲನೆಯಿಂದ ಕಂಡು ಬಂದಿದ್ದು, ಈ ಕುರಿತು ಸ್ಪಷ್ಟೀಕರಣ ನೀಡಲು ಕೋರಿದೆ. ಅನುಸರಣೆ ಸಲ್ಲಿಸಿದ್ದು ಲೆಕ್ಕಪರಿಶೋಧನೆಯಲ್ಲಿ ಒಪ್ಪಲಾಗದ ಕಾರಣ ಆಕ್ಷೇಪಣೆ ಕಂಡಿಕೆ ಮುಂದುವರೆದಿದೆ.</td>
<td>ಆಗಿರುವುದಿಲ್ಲ ಬದಲಾಗಿ ಹೊಸ ಟೆಂಡರ್‌ನ ಕಾರ್ಯಾದೇಶವಾಗಿರುತ್ತದೆ. ಮುಂದುವರೆದು, ದಿನಾಂಕ 31.03.2016 ರಿಂದ ಮೇ–2016ರವರೆಗೆ ಸದರಿ ಸಂಸ್ಥೆಗೆ ಟೆಂಡರನ್ನು ಮುಂದುವರೆಸಿರುವ ಬಗ್ಗೆ ಆಕ್ಷೇಪಿಸಲಾಗಿರುತ್ತದೆ. ಟೆಂಡರ್ ಅಧಿಸೂಚನೆ ಸಂಖ್ಯೆ: ತುವಿ/ತಾವಿ/ಟೆಂ.ಪ್ರ/2014–15/3(1), ದಿನಾಂಕ 05.08.2014 ರಂದು ಸದರಿ ಟೆಂಡರನ್ನು 01 ವರ್ಷದ ಅವಧಿಗೆ ಕರೆದಿದ್ದು, ಕಾರ್ಯಾದೇಶವನ್ನು ನೀಡುವಾಗ ಕೇವಲ 08 ತಿಂಗಳ ಅವಧಿಗೆ ನೀಡಲಾಗಿರುತ್ತದೆ. ಈತನ್ಮಧ್ಯೆ ಹೊಸದಾಗಿ ಟೆಂಡರ್ ಅಧಿಸೂಚನೆ ಸಂಖ್ಯೆ: ತುವಿ/ತಾವಿ/ಟೆಂ.ಪ್ರ/12/2015–16 ದಿನಾಂಕ 14.01.2016 ರಂದು ಸದರಿ ಸೇವೆಗೆ ಟೆಂಡರ್ ಪ್ರಕಟಣೆ ಹೊರಡಿಸಲಾಗಿದ್ದು, ಟೆಂಡರ್‌ನ ಷರತ್ತುಗಳಿಗೆ ಸಂಬಂಧಿಸಿದಂತೆ, ಕೆಲವು ಬಿಡ್‌ದಾರರಿಂದ ಆಕ್ಷೇಪಣೆ ಬಂದಿದ್ದರಿಂದ ಟೆಂಡರನ್ನು ರದ್ದುಗೊಳಿಸಿ, ಮರು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಟೆಂಡರ್ ಅಂತಿಮಗೊಳಿಸಲು ತಾಂತ್ರಿಕವಾಗಿ ವಿಳಂಬವಾಗಿರುವುದರಿಂದ ಹೊಸ ಟೆಂಡರ್ ಅಂತಿಮಗೊಳ್ಳುವವರೆಗೂ ಮೆ. ಕ್ಲೀನ್ ಅಂಡ್ ಕೇರ್, ಬೆಂಗಳೂರು ರವರಿಗೆ ದಿನಾಂಕ 31.03.2016ರಿಂದ 31.05.2016 ರವರೆಗೆ ಟೆಂಡರನ್ನು ವಿಸ್ತರಿಸಿ ಕಾರ್ಯಾದೇಶ ನೀಡಲಾಗಿರುತ್ತದೆ.</td>
</tr>
<tr>
<td>23.</td>
<td>ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ಪ್ರಶ್ನೆಪತ್ರಿಕೆ ಮುದ್ರಣ ಕಾರ್ಯ ಕೈಗೊಂಡು ಪಾವತಿಸಿರುವ ಮೊಬಲಗು ರೂ. 27,05,595/– ಆಕ್ಷೇಪಣೆಯಲ್ಲಿಡಲಾಗಿದೆ:–<br>
2015–16ನೇ ಸಾಲಿನ ತುಮಕೂರು ವಿಶ್ವವಿದ್ಯಾಲಯದ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿದ್ದು, ಈ ಸಾಲಿಗೆ ಸಂಬಂಧಿಸಿದಂತೆ ವೋಚರ್‌ಗಳನ್ನು ಪರಿಶೀಲಿಸಲಾಗಿ, ವಿವಿಧ ಸ್ನಾತಕೋತ್ತರ ಪರೀಕ್ಷೆಗಳಿಗೆ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣ ಕಾರ್ಯಕ್ಕೆ, ಸಂಬಂಧಿತ ಸಂಸ್ಥೆಗೆ ಕೆಳಕಂಡಂತೆ ವೆಚ್ಚ ಭರಿಸಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮಗಳನುಸಾರ ಸೆಕ್ಷನ್ 4(ಜಿ) ರ ಅಡಿಯಲ್ಲಿ ವಿನಾಯಿತಿ ಪಡೆಯದೇ ನಿಯಮಗಳನ್ನು ಉಲ್ಲಂಘಿಸಿ ಪಾವತಿಸಿರುವ ಮೊತ್ತ ರೂ.27,05,595 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ
<table>
<tr><th>ಕ್ರ.ಸಂ</th><th>ವಿವರಗಳು</th><th>ಮೊತ್ತ (ರೂ.ಗಳಲ್ಲಿ)</th></tr>
<tr><td>1</td><td>2015–16 ಸಾ.ಸಿಂ.02.ಪ.ವಿ.01. ವಿವಿಧ ಸ್ನಾತಕೋತ್ತರ ಪದವಿ ಪರೀಕ್ಷೆಗಳ ಪ್ರಶ್ನೆ ಪತ್ರಿಕಗಳ ಮುದ್ರಣ ವೆಚ್ಚ.</td><td>8,71,648.00</td></tr>
<tr><td>2</td><td>2015–16 ಸಾ.ಸಿಂ.02.ಪ.ವಿ.03.<br>2015–16 ರ ಮೇ/ಜೂನ್ ಮಾಹೆಯ ಸ್ನಾತಕ ಶಿಕ್ಷಣ ಪದವಿಯ ಪ್ರಥಮ ಸೆಮಿಸ್ಟರ್ (ನವೀನ & ಪೂರಕ) ಹಾಗೂ ಪಿ.ಎಚ್.ಡಿ ಪ್ರವೇಶ ಪರೀಕ್ಷೆ.</td><td>3,55,840.00</td></tr>
<tr><td>3</td><td>2015–16 ಸಾ.ಸಿಂ.02.ಪ.ವಿ.04 2015 ರ ನವೆಂಬರ್ ಡಿಸೆಂಬರ್ ಮಾಹೆಯ ಪದವಿ ಪರೀಕ್ಷೆಗಳು.</td><td>11,58,706.00</td></tr>
<tr><td></td><td></td><td></td></tr>
</table>
</td>
<td>ವಿಶ್ವವಿದ್ಯಾನಿಲಯದ ಪ್ರತಿಷ್ಠತೆ, ಘನತೆ ಮತ್ತು ಗೌರವವು ವಿಶ್ವವಿದ್ಯಾನಿಲಯವು ನಡೆಸುವ ಪರೀಕ್ಷಾ ಕಾರ್ಯ ವಿಧಾನ, ಫಲಿತಾಂಶ ಪ್ರಕಟಣೆ ಮತ್ತು ಪಾರದರ್ಶಕತೆ ಇವುಗಳನ್ನು ಅವಲಂಭಿಸಿದೆ. ಸಾರ್ವಜನಿಕ ನಂಬಿಕೆ ಮತ್ತು ವಿಶ್ವಾಸರ್ಹತೆಯುಳ್ಳಂತಹ ಕಾರ್ಯ ವಿಧಾನವನ್ನು ವಿಶ್ವವಿದ್ಯಾನಿಲಯವು ಅನುಸರಿಸಬೇಕಾಗುತ್ತದೆ. ವಿಶ್ವವಿದ್ಯಾನಿಲಯದ ಉನ್ನತ ಆಡಳಿತ ಪ್ರಾಧಿಕಾರವಾದ ಸಿಂಡಿಕೇಟ್ ಸಭೆಯ ಅನುಮೋದನೆಯ ಮೇರೆಗೆ ಸಂಬಂಧಿಸಿದ ಸಂಸ್ಥೆಯೊಂದಿಗೆ ಕರಾರು ಒಪ್ಪಂದ ಮಾಡಿಕೊಂಡು ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸಲಾಗುತ್ತಿದ್ದು, ಹಾಗೂ ಮುದ್ರಣ ವೆಚ್ಚವನ್ನು ಪಾವತಿಸಲಾಗಿರುತ್ತದೆ.<br>
ಪ್ರಶ್ನೆ ಪತ್ರಿಕೆಗಳ ಮುದ್ರಣ ರಹಸ್ಯ ಕಾರ್ಯಗಳನ್ನು ನಿರ್ವಹಿಸುವಾಗ ಟೆಂಡರ್‌ಗಳನ್ನು ಅಹ್ವಾನಿಸಿದಲ್ಲಿ ಪರೀಕ್ಷೆಯ ಮೂಲ ಉದ್ದೇಶ ವಿಫಲವಾಗುವ ಸಂಭವವಿರುತ್ತದೆ. ಈ ಹಿನ್ನಲೆಯಲ್ಲಿ ಪ್ರಶ್ನೆ ಪತ್ರಿಕೆಗಳ ಮುದ್ರಣ ಕಾರ್ಯಕ್ಕೆ ಸಂಬಂಧಿಸಿದಂತೆ ಟೆಂಡರ್</td>
</tr>
</table>

<table>
<tr>
<td></td>
<td><table><tr><td>4</td><td>2015–16 ವಿ.ಸಿಂ.02.ಪ.ವಿ.01. 2015 ರ ಡಿಸೆಂಬರ್/2016 ರ ಜನವರಿ ಸ್ನಾತಕ ಪದವಿ/ ಪರೀಕ್ಷೆಗಳು.</td><td>3,19,401.00</td></tr><tr><td></td><td>ಒಟ್ಟು ಮೊತ್ತ</td><td>27,05,595.00</td></tr></table></td>
<td>ಆಹ್ವಾನಿಸಿರುವುದಿಲ್ಲ ಹಾಗೂ ಪರೀಕ್ಷಾ ರಹಸ್ಯ ಮುದ್ರಣ ಕಾರ್ಯ ಸಂಸ್ಥೆಯ ಮೇಲೆ ಎಲ್ಲಾ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಲಾಗಿದೆ. ಆದ್ದರಿಂದ ರೂ. 27,05,595.00 ಗಳನ್ನು ಆಕ್ಷೇಪಣೆಯಿಂದ ಕೈಬಿಡುವಂತೆ ಕೋರಿದೆ.</td>
</tr>
<tr>
<td>24.</td>
<td>ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ಪರೀಕ್ಷಾ ಕಾರ್ಯ ಗಣಕೀಕರಣಗೊಳಿಸಲು ಮೆ॥ ಲಾಜಿಸಿಸ್ ಸಂಸ್ಥೆಗೆ ಪಾವತಿಸಿರುವ ಮೊಬಲಗು ರೂ. 66,82,500/– ಆಕ್ಷೇಪಣೆಯಲ್ಲಿಡಲಾಗಿದೆ:–<br>ವಿವಿಧ ಸ್ನಾತಕ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ Online ನಲ್ಲಿ ವಿದ್ಯಾರ್ಥಿಗಳ ನೋಂದಣಿ ಫೋಟೊ ಸಮೇತವಾಗಿ, ಆಂತರಿಕ ಅಂಕಗಳನ್ನು ದ್ವಿ–ದಾಖಲೀಕರಣ, ಉತ್ತರ ಪತ್ರಿಕೆಗಳ ಕೋಚಿಂಗ್ ಕಾರ್ಯ, ಮೌಲ್ಯಮಾಪನವಾಗಿರುವ ಉತ್ತರ ಪತ್ರಿಕೆಗಳ ಅಂಕಗಳ ದಾಖಲೀಕರಣ ಮತ್ತು ಫಲಿತಾಂಶ ಪ್ರಕಟಿಸುವ ಇತ್ಯಾದಿ ಕಾರ್ಯಗಳನ್ನು ಮೆ॥ ಲಾಜಿಸಿಸ್ ಸಂಸ್ಥೆಗೆ ವಹಿಸಲಾಗಿದ್ದು ರೂ.66,82,500/– ಕೆಳಕಂಡಂತೆ ಪಾವತಿಸುತ್ತಾರೆ. ವೆಚ್ಚವನ್ನು 4–18–33–101–109–123 ರ ಶೀರ್ಷಿಕೆಯಡಿಯಲ್ಲಿ ಕೆಳಕಂಡಂತೆ ಭರಿಸಿರುತ್ತಾರೆ.
<table>
<tr><th>ಕ್ರ.ಸಂ</th><th>ಆದೇಶ ಸಂಖ್ಯೆ</th><th>ವಿವರಗಳು</th><th>ಮೊತ್ತ</th></tr>
<tr><td>1</td><td>2015–16. ಸಾ.ಸಿ.0.02 ಪ.ವಿ.04</td><td>2015 ರ ಮೇ/ಜೂನ್ ಪದವಿ ಪರೀಕ್ಷೆಗಳು.</td><td>29,70,000.00</td></tr>
<tr><td>2</td><td>2015–16. ಸಾ.ಸಿಂ.4 ಪ.ವಿ.03</td><td>2015 ರ ಮೇ/ಜೂನ್ ಪದವಿ ಪರೀಕ್ಷೆಗಳು.</td><td>37,12,500.00</td></tr>
</table>
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ನಿಯಮಗಳು 4(ಎ) ಮತ್ತು 5 ರನುಸಾರ ಟೆಂಡರ್ ಮಾಡದೇ ಹಳೆಯ ಟೆಂಡರನ್ನು ಮುಂದುವರೆಸಿದ್ದು, ನಿಯಮಾನುಸಾರ ನಿಗಧಿತ ಇ.ಎಂ.ಡಿ ಹಣವನ್ನು ಸ್ವೀಕರಿಸದಿರುವುದು ಕಂಡುಬಂದಿದ್ದು ನಿಯಮಗಳನ್ನುಲ್ಲಂಘಿಸಿ ಪಾವತಿಸಿರುವ ಮೊಬಲಗು ರೂ.66,82,500/– ಗಳನ್ನು ಆಕ್ಷೇಪಣೆಯಲ್ಲಿರಿಸಿದೆ.<br>ಎ.ಸಿ.ಬಿಲ್ಲುಗಳಲ್ಲಿ ಕಂಡು ಬಂದ ನ್ಯೂನತೆಗಳು:</td>
<td>ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಫಲಿತಾಂಶ ಗಣಕೀಕರಣ ಕಾರ್ಯ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 , ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮಗಳು ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಖರೀದಿ ನಿಯಮಗಳು 2003 ರ ನಿಯಮ ಸರಕು ಮತ್ತು ಸೇವೆಗಳ ಸಂಗ್ರಹಣೆ ಪ್ರಕರಣಗಳಲ್ಲಿ ನಿಯಮ ಪಾಲಿಸಲಾಗಿದ್ದು, ಟೆಂಡರ್ ಆಹ್ವಾನಿಸಲಾಗಿರುತ್ತದೆ. (ಟೆಂಡರ್ ಅಧಿಸೂಚನೆ : TU/EV/2013-14/935 Dated: 27.09.2013) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ರೂ. 1,20,000–00 ಇ.ಎಂ.ಡಿ. ಮೊತ್ತವನ್ನು ಸ್ವೀಕರಿಸಲಾಗಿರುತ್ತದೆ. ವಿಶ್ವವಿದ್ಯಾನಿಲಯದ ಉನ್ನತ ಆಡಳಿತ ಪ್ರಾಧಿಕಾರವಾದ ಸಿಂಡಿಕೇಟ್ ಸಭೆಯ ಅನುಮೋದನೆಯ ಮೇರೆಗೆ ಎರಡು ವರ್ಷಗಳವರೆಗೆ ಕರಾರು ಒಪ್ಪಂದವನ್ನು ಸದರಿ ಸಂಸ್ಥೆಯೊಂದಿಗೆ ಮಾಡಿಕೊಳ್ಳಲಾಗಿರುತ್ತದೆ ಮತ್ತು ಸದರಿ ಮೊತ್ತವನ್ನು ಸಿಂಡಿಕೇಟ್ ಸಭೆಯ ಅನುಮೋದನೆ ಮೇರೆಗೆ ಪಾವತಿಸಲಾಗಿರುತ್ತದೆ. ಆದ್ದರಿಂದ ಇಲ್ಲಿ ಯಾವುದೇ ತರಹದ ನಿಯಮ ಉಲ್ಲಂಘನೆಯಾಗಿರುವುದಿಲ್ಲ ಆದ್ದರಿಂದ ಈ ಎಲ್ಲಾ ಅಂಶಗಳನ್ನು ಮನಗಂಡು ರೂ. 66,82,500/– ಗಳನ್ನು ಆಕ್ಷೇಪಣೆಯಿಂದ ಕೈಬಿಡುವಂತೆ ಕೋರಿದೆ.</td>
</tr>
<tr>
<td>25.</td>
<td>ಎ.ಸಿ. ಬಿಲ್ಲುಗಳ ಪರಿಶೀಲನೆಯಲ್ಲಿ ಕಂಡುಬಂದ ನ್ಯೂನತೆಗಳು ವಸೂಲಾತಿ ರೂ. 54,584/– ಮತ್ತು ರೂ. 32,000/– ಆಕ್ಷೇಪಣೆಯಲ್ಲಿಡಲಾಗಿದೆ:–<br>2015–16ನೇ ಸಾಲಿಗೆ ತುಮಕೂರು ವಿಶ್ವವಿದ್ಯಾನಿಲಯದ ಡಾ॥ ಅಂಬೇಡ್ಕರ್ ಮತ್ತು ಡಾ॥ ಬಾಬು ಜಗಜೀವನ್‌ರಾಂ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ವಿಭಾಗದ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಪರಿಶೀಲನೆಯಲ್ಲಿ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತದೆ. ಎನ್.ಡಿ.ಸಿ ಬಿಲ್ಲುಗಳು ವಿಳಂಬ ಸಲ್ಲಿಕೆಗೆ ಆ ಅವಧಿಯಲ್ಲಿ ಚಾಲ್ತಿಯಲ್ಲಿದ್ದ ಬ್ಯಾಂಕ್ ಬಡ್ಡಿದರ ದಂಡ ವಿಧಿಸಿ ವಸೂಲಿಸಿ, ವಿವರಗಳನ್ನು ಸಲ್ಲಿಸಲು ಸೂಚಿಸಿದೆ.<br><br>1. ಅನುಬಂಧ–2 ರಲ್ಲಿರುವ ಎನ್.ಡಿ.ಸಿ. ಬಿಲ್ಲುಗಳಲ್ಲಿ ಆದಾಯ ತೆರಿಗೆ ಕಟಾಯಿಸಿರುವುದಿಲ್ಲ. (ಶೇ</td>
<td>1. ಅನುಬಂಧ–2 ರಲ್ಲಿನ ಆದಾಯ ತೆರಿಗೆ ಮೊತ್ತ ರೂ. 4,584/–ಗಳನ್ನು ಕಟಾಯಿಸಿ ವಿಶ್ವವಿದ್ಯಾನಿಲಯ ಖಾತೆಗೆ ಜಮಾ ಮಾಡಲಾಗಿದೆ. ಸದರಿ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ.<br>2. ವಿ.ವಿ. ಅನುಮತಿ ಪತ್ರ ಸಂಖ್ಯೆ:ತುವಿ:ಅ.ವಿ.:258 2015–16/1479 ದಿನಾಂಕ:05.08.2015 ರಲ್ಲಿ ದರಪಟ್ಟಿ ಆಹ್ವಾನಿಸಲು ಸಕ್ಷಮ ಪ್ರಾಧಿಕಾರದಿಂದ ಅನುಮತಿ ನೀಡಲಾಗಿದೆ.<br>ಅನುಬಂಧ–3 ರಲ್ಲಿ ಲಗತ್ತಿಸಿರುವ ಎ.ಸಿ. ಬಿಲ್ಲುಗಳ ಒಟ್ಟು</td>
</tr>
</table>

| | | |
|---|---|---|
| | 2 ರೀತ್ಯಾ) ಆದಾಯ ತೆರಿಗೆ ಕಟಾಯಿಸದೆ ಪಾವತಿಸಲಾದ ಮೊತ್ತ ರೂ.2,29,200/– ರ ಆದಾಯ ತೆರಿಗೆ ಮೊತ್ತ 4584/–ಗಳನ್ನು ಕಟಾಯಿಸಿರುವುದಿಲ್ಲವಾದ್ದರಿಂದ ವಸೂಲಾತಿಗೆ ಸೂಚಿಸಿದೆ.<br><br>2.ಸಕ್ಷಮ ಪ್ರಾಧಿಕಾರದಿಂದ ದರಪಟ್ಟಿ ಅನುಮೋದನೆಯಾಗದಿರುವ ಬಗ್ಗೆ ಸ್ಪಷ್ಟೀಕರಣ ಕೊಡಲು ಸೂಚಿಸಿದೆ **ಅನುಬಂಧ–3** ರಲ್ಲಿ ಲಗತ್ತಿಸಿರುವ ಎ.ಸಿ. ಬಿಲ್ಲುಗಳಿಗೆ ಎನ್.ಡಿ.ಸಿ. ಬಿಲ್ಲುಗಳನ್ನು ಸಲ್ಲಿಸಿರುವುದಿಲ್ಲ. ಹಾಗೂ ಕೆಲವು ಬಿಲ್ಲುಗಳಿಗೆ ವಿಳಂಭವಾಗಿ ಸಲ್ಲಿಸಿರುತ್ತಾರೆ. ಎನ್.ಡಿ.ಸಿ. ಬಿಲ್ಲುಗಳನ್ನು ಸಲ್ಲಿಸದಿರುವುದರಿಂದ ರೂ. 50,000/– ಗಳನ್ನು ವಸೂಲಾತಿಗೆ ಸೂಚಿಸಿದೆ.<br>3. **ಅನುಬಂಧ–4** ರಲ್ಲಿರುವ ಗೌರವ ಸಂಭಾವನೆ ಪಾವತಿ ಸಂಬಂಧ ಯಾವ ನಿಯಮ ಮತ್ತು ಪರಿನಿಯಮಗಳಡಿ ಪಾವತಿಸಲಾಗಿದೆ ವಿವರಣೆ ಒದಗಿಸಲು ಕೋರಲಾಗಿ ವಿವರ ಸಲ್ಲಿಸದ ಕಾರಣ ರೂ. 32,000/– ಗಳನ್ನು ಅಕ್ಷೇಪಣೆಯಲ್ಲಿರಿಸಲಾಗಿದೆ.<br><br>ಮೇಲ್ಕಂಡ ನ್ಯೂನತೆಗಳಿಗೆ ಸ್ಪಷ್ಟೀಕರಣ ನೀಡಲು ಸೂಚಿಸಿದೆ. ಪರಿನಿಯಮಗಳನ್ನು ರಚಿಸದೇ ಪಾವತಿಸಿರುವುದು ಹಾಗೂ ಸಲ್ಲಿಸಿರುವ ಅನುಸರಣೆ ಸಮಂಜಸವಾಗಿರದ ಕಾರಣ ಕಂಡಿಕೆ ಯಥಾವತ್ತಾಗಿ ಮುಂದುವರೆದಿರುತ್ತದೆ. | ಮೊತ್ತ ರೂ. 50,000/– ಗಳಿಗೆ ಎನ್.ಡಿ.ಸಿ. ಬಿಲ್ಲುಗಳನ್ನು ಸಲ್ಲಿಸಿರುತ್ತಾರೆ. ಹಾಗೂ ಇನ್ನು ಮುಂದೆ ಸಕಾಲದಲ್ಲಿ ಎನ್.ಡಿ.ಸಿ. ಬಿಲ್ಲುಗಳನ್ನು ಸಲ್ಲಿಸುವಂತೆ ಪ್ರಾಧ್ಯಾಪಕರುಗಳಿಗೆ ಸೂಚಿಸಲಾಗಿದೆ ಆದ್ದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಿದೆ.<br>**ಅನುಬಂದ 4ರಲ್ಲಿನ** ಗೌರವ ಸಂಭಾವನೆ ಮೊತ್ತಗಳನ್ನು ವಿ.ವಿ. ಆದೇಶ ಸಂಖ್ಯೆ:ತುವಿ:ಡಿಇವಿ: 01:32/2011–12/ 2001 ದಿನಾಂಕ:27.07.2011 ರ ಆದೇಶದಲ್ಲಿನ ದರಗಳಂತೆ ರೂ. 32,000/–ಗಳನ್ನು ಪಾವತಿಸಿದ್ದು, ಸದರಿ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಿದೆ. |
| **26.** | **ಎ.ಸಿ. ಬಿಲ್ಲುಗಳಲ್ಲಿ ಕಂಡು ಬಂದ ನ್ಯೂನತೆಗಳು**<br>**ರೂ.(12,45,472+45,150+55,341+1,01,900+22,482 +7,389+3,61,999) ಆಕ್ಷೇಪಣೆ ರೂ. 18,39,733/– ಮತ್ತು ವಸೂಲಾತಿ ಮೊತ್ತ ರೂ.99,068/–**<br><br>1. ತುಮಕೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದಲ್ಲಿ ಆಯೋಜಿಸುವ ಕ್ರೀಡೆಗಳಿಗೆ ಸಂಬಂಧಿಸಿದಂತೆ ಅಳವಡಿಸಿಕೊಂಡಿರುವ ಕ್ರೀಡಾ ನಿಯಮಗಳು ಹಾಗೂ ಸರ್ಕಾರದಿಂದ ಅನುಮೋದನೆಯಾಗಿರುವ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಸಲ್ಲಿಸುವುದು.<br><br>2. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ 46(3) ರಂತೆ ವಿಶ್ವವಿದ್ಯಾನಿಲಯದ ನಿಧಿಯನ್ನು ಪರಿನಿಯಮಗಳ ಮೂಲಕ ಯಾವುದೇ ಉದ್ದೇಶಗಳಿಗಾಗಿ ಸದರಿ ನಿಧಿಯನ್ನು ವಿನಿಯೋಗಿಸಬಹುದು ಎಂದಿರುತ್ತದೆ.<br>ದೈಹಿಕ ಶಿಕ್ಷಣ ವಿಭಾಗದಿಂದ ಆಯೋಜಿಸಲಾಗಿರುವ ಕ್ರೀಡೆಗಳಿಗೆ ವೆಚ್ಚ ಮಾಡಿರುವ ಪಾವತಿಗಳಿಗೆ ಪರಿನಿಯಮಗಳನ್ನು ಅಳವಡಿಸಿಕೊಂಡಿರುವುದಿಲ್ಲ. ಈ ಬಗ್ಗೆ ಸ್ಪಷ್ಟೀಕರಣ ನೀಡುವುದು.<br><br>3. **ಅನುಬಂದ–5** ರಲ್ಲಿ ಇರುವ ಪಾವತಿಗಳ ಎನ್.ಡಿ.ಸಿ. ಬಿಲ್ಲುಗಳ ಪರಿಶೀಲನೆಯಲ್ಲಿ ಪ್ರತಿ ಬಿಲ್ಲಿನಲ್ಲಿ ವಿಧ್ಯಾರ್ಥಿಗಳಿಗೆ ತರಬೇತಿ (Coaching) ಅವಧಿಯಲ್ಲಿ TA/DA ನೀಡಿರುವುದು ಕಂಡು ಬಂದಿರುತ್ತದೆ. ಕೋಚಿಂಗ್ ಅವಧಿಯಲ್ಲಿ ವಿದ್ಯಾರ್ಥಿಗಳು ತುಮಕೂರಿನಲ್ಲಿಯೇ ತಂಗಿದ್ದರೆ ಮಾತ್ರ ದಿನಭತ್ಯೆಗೆ ಅರ್ಹರಾಗಿದ್ದು, ಕೋಚಿಂಗ್ ಅವಧಿಯಲ್ಲಿ ಪಾವತಿಸಿರುವ ದಿನಭತ್ಯೆಗಳ ಬಗ್ಗೆ ಸ್ಪಷ್ಟೀಕರಣ ನೀಡುವುದು ಈ ರೀತಿ ಎರಡೆರಡು ಬಾರಿ TA/DA ನೀಡಲು ಅವಕಾಶವಿದೆಯೇ? ತತ್ಸಂಬಂಧವಾಗಿ ಯಾವುದೇ ವಿವರಗಳನ್ನು ಒದಗಿಸಿರುವುದಿಲ್ಲ. ಹಾಗೂ ಪರಿನಿಯಮ ರಚಿಸದೆ ಪಾವತಿಸಿರುವ ಮೊತ್ತ ರೂ. 12,45,472/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | 1. ತುಮಕೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದಲ್ಲಿ ಆಯೋಜಿಸುವ ಕ್ರೀಡೆಗಳಿಗೆ ಸಂಬಂಧಿಸಿದಂತೆ ಅಳವಡಿಸಿಕೊಂಡಿರುವ ಕ್ರೀಡಾ ಮಾರ್ಗ ಸೂಚಿಯ ದೃಢೀಕರಿಸಿದ ನಕಲು ಪ್ರತಿಯನ್ನು ಲಗತ್ತಿಸಿದೆ.<br>**2.** ತುಮಕೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದಿಂದ ಆಯೋಜಿಸುವ ಕ್ರೀಡೆಗಳಿಗೆ ಕ್ರೀಡಾ ಸಲಹಾ ಸಮಿತಿ ಸಭೆಯ ಸಲಹೆಗಳನ್ನು ಪಡೆದು ಸಿಂಡಿಕೇಟ್ ಸಭೆಯ ನಿರ್ಣಯದಂತೆ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ವಿವಿಧ ಕ್ರೀಡೆಗಳಿಗೆ ಅಗತ್ಯವಿರುವ ಮೊತ್ತವನ್ನು ಮುಂಗಡವಾಗಿ ಪಡೆದು ಲೆಕ್ಕ ತೀರುವಳಿಗಾಗಿ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಲಾಗಿದೆ ಹಾಗೂ ಅನುಬಂಧ 3ಕ್ಕೆ ಸಂಬಂಧಿಸಿದಂತೆ ದೈಹಿಕ ಶಿಕ್ಷಣ ವಿಭಾಗದಿಂದ ಆಯೋಜಿಸುವ ಕ್ರೀಡೆಗಳಿಗೆ ಕ್ರೀಡಾ ಸಲಹಾ ಸಮಿತಿ ಸಭೆಯ ಸಲಹೆಗಳನ್ನು ಪಡೆದು ಸಿಂಡಿಕೇಟ್ ಸಭೆಯ ನಿರ್ಣಯದಂತೆ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ವಿವಿಧ ಕ್ರೀಡೆಗಳಿಗೆ ಅಗತ್ಯವಿರುವ ಮೊತ್ತದ ಮಂಜೂರಾತಿ ಆದೇಶದ ಪ್ರತಿಯನ್ನು ದೃಢೀಕರಿಸಿ ಲಗತ್ತಿಸಿದೆ.<br>**3.** ಕ್ರೀಡಾಪಟುಗಳು ಕಡ್ಡಾಯವಾಗಿ ತರಬೇತಿ ಅವಧಿಯಲ್ಲಿ ಪಾಲ್ಗೊಂಡಿರುತ್ತಾರೆ. ಸದರಿ ಕ್ರೀಡಾಪಟುಗಳಿಗೆ |

| | | |
|---|---|---|
| | 4. ನಿರ್ದೇಶಕರು ಆಯೋಜಿಸಿರುವ ಕ್ರೀಡೆಗಳಲ್ಲಿ ಕೋಚ್, ಮ್ಯಾನೇಜರ್ ರವರಿಗೆ ದಿನಭತ್ಯೆ ರೂ. 350/– ರಂತೆ ನೀಡಿದ್ದು, ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಉಪಯೋಗಿಸಿಲ್ಲವೆಂದು ದೃಢೀಕರಿಸಿದ್ದರೇ ಮಾತ್ರ ದಿನಭತ್ಯೆಗೆ ಅರ್ಹರಾಗಿರುತ್ತಾರೆ ಹಾಗೂ ಕೋಚ್‌ಗಳ, ಮ್ಯಾನೇಜರ್‌ಗಳ ಪ್ರಯಾಣ ಬಿಲ್ಲು ಕ್ಲೇಮು ಮಾಡಿದ್ದು, ಟಿಕೆಟ್ ಲಗತ್ತಿಸಿಲ್ಲದಿರುವುದರಿಂದ ರೂ. 45,150/– ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು **ಅನುಬಂಧ–6** ರಲ್ಲಿ ನೀಡಿದೆ.<br><br>5. **a**) ಚೆಕ್ ಸಂಖ್ಯೆ:367044 ರೂ. 1,10,000/–ಗಳನ್ನು 2015–16ನೇ ಸಾಲಿನ ಅಂತರ್ ವಿಭಾಗಗಳ ಮಟ್ಟದ ವಿವಿಧ ಒಳಾಂಗಣ & ಹೊರಾಂಗಣ ಕ್ರೀಡಾಸ್ಪರ್ಧೆಗಳನ್ನು ಆಯೋಜಿಸಲು ಎ.ಸಿ. ಬಿಲ್ಲಿನ ಮುಖಾಂತರ ಹಣ ಸೆಳೆದಿದ್ದು, ಎನ್.ಡಿ.ಸಿ. ಬಿಲ್ಲುಗಳನ್ನು ಪರಿಶೀಲಿಸಲಾಯಿತು. ಸ್ಪರ್ದೆಯ ದಿನಾಂಕ:11.04.2016 ರಿಂದ 25.04.2016 ರವರೆಗೆ ನಡೆದಿದ್ದು, ದಿನಾಂಕ:28.04.2016ರಂದು ರೂ. 55,341/–ಗಳಿಗೆ Soi Mani Enterprisesರವರಿಂದ Trophy & Medalsಗಳನ್ನು ಖರೀದಿಸಿದ್ದು, Stock Register ದಾಸ್ತಾನು ವಹಿ ಸಲ್ಲಿಸದ ಕಾರಣ ರೂ 55,341/– ಗಳನ್ನು ಆಕ್ಷೇಪಣೆಯಲ್ಲಿರಿಸಿದೆ.<br><br>**b)** ದಿನಾಂಕ 03.05.2016ರಂದು **Aishwarya Cab** ರವರಿಗೆ ರೂ. 3900/– ಪಾವತಿಸಿದ್ದು, ಅತಿಥಿಗಳು ಸ್ಪರ್ಧೆಯ ದಿನಾಂಕ ಅಂತ್ಯಗೊಂಡಿದ್ದರ ನಂತರ ಪ್ರಯಾಣಿಸಿದ್ದರೇ ಹಾಗೂ ಎಲ್ಲಿಂದ ಎಲ್ಲಿಗೆ ಪ್ರಯಾಣಿಸಿದ್ದರು, ಎಂಬ ಬಗ್ಗೆ ವಿವರಗಳು ಇಲ್ಲದ ಕಾರಣ ಸದರಿ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.<br><br>**c**) ಆಮಂತ್ರಣ ಪತ್ರಿಕೆ ರೂ. 4800/– ದಿನಾಂಕ:04.05.2016 ಹಾಗೂ ವೀರಶೈವ ಕುಕಿಂಗ್ ದಿನಾಂಕ:05.05.2016 ರೂ. 20,000/– ಈ ಎಲ್ಲಾ ಬಿಲ್ಲುಗಳು ಸ್ಪರ್ಧೆಯ ಅಂತಿಮ ದಿನಾಂಕದ ನಂತರ ಪಾವತಿಯಾಗಿದ್ದು, ಸದರಿ ಬಿಲ್ಲುಗಳನ್ನು ಡಿ.ಸಿ.ಬಿಲ್ಲುಗಳಲ್ಲಿ ಸಲ್ಲಿಸಬಹುದಾಗಿದ್ದರೂ ಎ.ಸಿ. ಬಿಲ್ಲುಗಳಲ್ಲಿ ಹಣ ಸೆಳೆದಿರುತ್ತಾರೆ.<br><br>6. ಚೆಕ್ ನಂ. 773998 ರೂ. 80,000/– ಚೆಸ್ ಟೂರ್ನಿಯಲ್ಲಿ ಭಾಗವಹಿಸಲು 6 ಜನ ವಿದ್ಯಾರ್ಥಿಗಳಿದ್ದು, 6 ಜನ ವಿದ್ಯಾರ್ಥಿಗಳು ಸ್ಪರ್ಧಿಗಳೇ ಎಂಬ ಬಗ್ಗೆ ಸ್ಪಷ್ಟ ವಿವರಗಳು ಇಲ್ಲದ ಕಾರಣ, ಸದರಿ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.<br><br>7. ಚೆಕ್ ನಂ. 773989 ವೀರಶೈವ ಕ್ಯಾಂಟೀನ್ ದಿನಾಂಕ:29.04.2015 ರೂ. 18,000/–ಗಳಿಗೆ ಉಪಹಾರ ನೀಡಿದ್ದು, ದರಪಟ್ಟಿಯ ವಿವರ ನೀಡದ ಕಾರಣ ಸದರಿ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.<br><br>8. ಚೆಕ್ ನಂ. 773999 ಎನ್.ಡಿ. ಸಿ. ಬಿಲ್ಲುಗಳನ್ನು ಪರಿಶೀಲಿಸಿದಾಗ ದಿನಾಂಕ:22.10.2015 ರಿಂದ 28.10.2015ರವರೆಗೆ ಪಂದ್ಯ ನಡೆದಿದ್ದು, ದಿನಾಂಕ:28.10.2015ರ ಕಾಯ್ದಿರಿಸಿದ್ದ ಟಿಕೆಟ್‌ನ್ನು ರದ್ದುಪಡಿಸಿ ದಿನಾಂಕ:29.10.2015 ರಂದು ಎಸ್.ಆರ್.ಎಸ್. ಟ್ರಾವೆಲ್ಸ್‌ನಲ್ಲಿ ಬಸ್ | ಯಾವುದೇತರಹದ ವಾಸ್ತವ್ಯದ ವ್ಯವಸ್ಥೆ ಕಲ್ಪಿಸಿರುವುದಿಲ್ಲ ಆದುದರಿಂದ ಸದರಿ ರವರಿಗೆ ವಿಶ್ವವಿದ್ಯಾನಿಲಯದ ನಿಯಮಾವಳಿಯಂತೆ ದಿನಭತ್ಯೆಯನ್ನು ಪಾವತಿ ಮಾಡಲಾಗಿದೆ. ಎಂದು ದೃಡೀಕರಿಸಿದೆ.<br><br>ಕ್ರೀಡಾಪಟುಗಳು ತರಬೇತಿಯ ಅವಧಿಯಲ್ಲಿ ಅವರ ಕಾಲೇಜಿನ ಸ್ಥಳದಿಂದ ವಿಶ್ವವಿದ್ಯಾನಿಲಯದ ತರಬೇತಿ ಸ್ಥಳಕ್ಕೆ ಬರುವ ಪ್ರಯಾಣ ಭತ್ಯೆ ಮತ್ತು ತರಬೇತಿ ಪಡೆದ ನಂತರ ಹಿಂತಿರುಗುವ ಸಂದರ್ಭದಲ್ಲಿ ಒಂದು ಸಲ ಪ್ರಯಾಣ ಭತ್ಯೆ ನೀಡಲಾಗುವುದು.<br><br>ತರಬೇತಿ ಪಡೆದ ಕ್ರೀಡಾಪಟುಗಳು ಅಂತರ ವಿಶ್ವವಿದ್ಯಾನಿಲಯದ ಕ್ರೀಡಾಕೂಟಕ್ಕೆ ಭಾಗವಹಿಸಲು ಸದರಿರವರ ವಿಶ್ವವಿದ್ಯಾನಿಲಯದಿಂದ ಕ್ರೀಡಾ ಕೂಟ ನಡೆಯುವ ಸ್ಥಳಕ್ಕೆ ತೆರಳುವ ಮತ್ತು ಹಿಂದಿರುಗುವ ಪ್ರಯಾಣ ಭತ್ಯೆಯನ್ನು ಮಾತ್ರ ವಿಶ್ವವಿದ್ಯಾನಿಲಯದ ನಿಯಮಾವಳಿಯಂತೆ ನೀಡಲು ಅವಕಾಶವಿರುತ್ತದೆ. ಆದ್ದರಿಂದ ರೂ.12,45,472/–ಗಳನ್ನು ಆಕ್ಷೇಪಣೆಯಿಂದ ಕೈಬಿಡಲು ಕೋರಿದೆ.<br>**4.** ಅಂತರ ವಿಶ್ವವಿದ್ಯಾನಿಲಯದ ಕ್ರೀಡಾಕೂಟಗಳಲ್ಲಿ ತರಬೇತುದಾರರು ಹಾಗೂ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸುವವರಿಗೆ ತುಮಕೂರು ವಿಶ್ವವಿದ್ಯಾನಿಲಯದ ನಿಯಮಾವಳಿಯಂತೆ 350ರೂ ನಂತೆ ದಿನಭತ್ಯೆ ನೀಡಲಾಗಿದ್ದು, ಈ ಅವಧಿಯಲ್ಲಿ ತರಬೇತುದಾರರು ಹಾಗೂ ವ್ಯವಸ್ಥಾಪಕರು ಬೋರ್ಡಿಂಗ್ ಲಾಡ್ಜಿಂಗ್ ವ್ಯವಸ್ಥೆಯನ್ನು ಉಪಯೋಗಿಸಿರುವುದಿಲ್ಲ ಹಾಗೆಯೇ ತುಮಕೂರು ವಿಶ್ವವಿದ್ಯಾನಿಲಯದ ಕ್ರೀಡಾ ಸಲಹಾ ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ನಿರ್ಣಯದಂತೆ 3 ಎಸಿ ಟ್ರೈನ್ ಚಾರ್ಜ್ ಪಡೆಯಲು ಅರ್ಹರಾಗಿರು ತ್ತಾರೆಂಬ ಸಂಬಂಧಪಟ್ಟ ದಾಖಲಾತಿಗಳ ನಕಲು ಪ್ರತಿಯನ್ನು ದೃಢೀಕರಿಸಿ ಲಗತ್ತಿಸಲಾಗಿದೆ.<br><br>5. **a**) 2015–16ನೇ ಸಾಲಿನ ಅಂತರ ವಿಭಾಗಗಳ ಕ್ರೀಡಾಕೂಟಗಳನ್ನು ನಡೆಸಲಾಗಿದ್ದು, ಅಗತ್ಯವಿರುವ ಟ್ರೋಫಿ ಮೆಡಲ್ಸ್‌ಗಳನ್ನು ಮಣಿ ಎಂಟರ್‌ಪ್ರೈಸಸ್ ಇವರಿಂದ |

| | | |
|---|---|---|
| | ಪ್ರಯಾಣ ದರ ರೂ. 16,474/-ಗಳನ್ನು ಪಾವತಿಸಿದ್ದು, ವಿದ್ಯಾರ್ಥಿಗಳು 2nd Class ರೈಲು ಪ್ರಯಾಣ ದರಕ್ಕೆ ಮಾತ್ರ ಅರ್ಹರಾಗಿರುತ್ತಾರೆ. ಹಾಗೂ ದಿನಾಂಕ:28.10.2015ರ ಟಿಕೆಟ್ ರದ್ದುಪಡಿಸಿರುವ ಕಾರಣವೇನು? ಹಾಗೂ ಹೆಚ್ಚುವರಿ ಮೊತ್ತ ಚೆಕ್ ನಂ. 774000 ರಲ್ಲಿ ರೂ. 4818/- ಗಳನ್ನು ಪಾವತಿಸಿರುವುದರಿಂದ ರೂ 4,818/- ಗಳನ್ನು ವಸೂಲಾತಿಗೆ ಸೂಚಿಸಿದೆ.<br><br>9. ಚೆಕ್ ನಂ. 773995 ರೂ. 15,000/-ಗಳನ್ನು Sports Advisory Committee ಯಲ್ಲಿ ಭಾಗವಹಿಸಿರುವ ಅತಿಥಿಗಳಿಗೆ ದಿನಭತ್ಯೆ ರೂ. 650/-ರಂತೆ ಪಾವತಿಸಿದ್ದು, KCS ನಿಯಮದಂತೆ ತುಮಕೂರಿಗೆ ದಿನಭತ್ಯೆ ರೂ. 225/- ರ ದರವನ್ನು ಪಾವತಿಸಬೇಕಾಗಿದ್ದು, ಹೆಚ್ಚಾಗಿ ಪಾವತಿಸಿರುವ ದಿನಭತ್ಯೆ ರೂ. 4,250/- ಗಳನ್ನು ಸಂಬಂಧಿಸಿದವರಿಂದ ವಸೂಲಿಸಲು ಸೂಚಿಸಿದೆ.<br><br>10. ಚೆಕ್ ನಂ. 367031 ರೂ. 90,000/- ಗಳ ಎನ್.ಡಿ.ಸಿ. ಬಿಲ್ಲುಗಳನ್ನು ಸಲ್ಲಿಸದಿರುವುದರಿಂದ ವಸೂಲಾತಿಗೆ ಸೂಚಿಸಿದೆ.<br><br>11. ಚೆಕ್ ನಂ. 773990 ದಿನಾಂಕ:21.05.2015 ರಲ್ಲಿ M/s Planet Sport ರವರಿಗೆ ಕಡಿತಗೊಳಿಸಿರುವ 7% ರಿಯಾಯಿತಿಯ ಮೊತ್ತ ರೂ. 22,482/-ಗಳನ್ನು ಎರಡನೇ ಬಾರಿ ಪಾವತಿಸಿರುವ ಬಗ್ಗೆ ವಿವರಗಳನ್ನು ಒದಗಿಸದ ಕಾರಣ ಆಕ್ಷೇಪಣೆಯಲ್ಲಿರಿಸಿದೆ.<br><br>12. ಚೆಕ್ ನಂ. 773988 ರೂ. 7,389/- ಗಳ ಬಿಲ್ಲುಗಳನ್ನು ಸಲ್ಲಿಸದ ಕಾರಣ ಆಕ್ಷೇಪಣೆಯಲ್ಲಿಡಲಾಗಿದೆ.<br><br>**13.** ಚೆಕ್ ನಂ. 773987 ರೂ. 69,280/- ಹಾಗೂ ಚೆಕ್ ನಂ. 773986 ರೂ.2,92,719/- ಗಳಿಗೆ ಖರೀದಿಸಿರುವ ಕ್ರೀಡಾ ಸಾಮಗ್ರಿಗಳ ದಾಸ್ತಾನು ವಿವರ ಸಲ್ಲಿಸದ ಕಾರಣ ರೂ. 3,61,999/- ಆಕ್ಷೇಪಣೆಯಲ್ಲಿರಿಸಿದೆ. | ಖರೀದಿಸಿದ್ದು, ದಾಸ್ತಾನು ಪುಸ್ತಕದ ಪುಟ ಸಂಖ್ಯೆ 232ರ ದೃಢೀಕರಿಸಿದ ನಕಲು ಪ್ರತಿಯನ್ನು ಲಗತ್ತಿಸಿದೆ.<br>**b)**2015-16ನೇ ಸಾಲಿನ ಸ್ನಾತಕೋತ್ತರ ವಿಭಾಗಗಳ ಕ್ರೀಡಾಕೂಟಗಳನ್ನು ನಡೆಸಲಾಗಿದ್ದು, ಕ್ರೀಡಾಕೂಟಗಳನ್ನು ದಿನಾಂಕ 11-04-2016 ರಿಂದ 25-04-2016 ರವರೆಗೆ ನಡೆಸಲಾಗಿದ್ದು, ಸಮಾರೋಪ ಸಮಾರಂಭವನ್ನು ದಿನಾಂಕ 03-05-2016ರಂದು ಏರ್ಪಡಿಸಲಾಗಿತ್ತು. ಕ್ರೀಡಾಪಟುಗಳಿಗೆ ಬಹುಮಾನ ವಿತರಿಸಲು ಮುಖ್ಯ ಅತಿಥಿಗಳು ಬೆಂಗಳೂರಿಂದ ತುಮಕೂರು ವಿಶ್ವವಿದ್ಯಾನಿಲಯಕ್ಕೆ ಆಗಮಿಸಿ ಪುನಃ ಬೆಂಗಳೂರಿಗೆ ವಾಪಾಸ್ಸಾಗಿರುತ್ತಾರೆ ಎಂದು ದೃಢೀಕರಿಸಿದೆ.<br>**c)** ಆಮಂತ್ರಣ ಪತ್ರಿಕೆ ಹಾಗೂ ವೀರಶೈವ ಕುಕ್ಕಿಂಗ್ ಕಾಂಟ್ರಾಕ್ಟರ್ ಇವರುಗಳು ದಿನಾಂಕ:04-05-2016 ಹಾಗೂ ದಿನಾಂಕ:05-05-2016 ರಂದು ಬಿಲ್ಲುಗಳನ್ನು ಸಲ್ಲಿಸಿದ್ದು, ಆ ದಿನದಂದು ಹಣ ಪಾವತಿಸಲಾಗಿದೆ.<br><br>**6.** ಚೆಕ್ ಸಂಖ್ಯೆ: 773998 ರೂ 80,000ಗಳಿಗೆ ಸಂಬಂಧಿಸಿದಂತೆ ಅಮೃತ ವಿಶ್ವವಿದ್ಯಾನಿಲಯ ಕೊಯಮತ್ತೂರಿನಲ್ಲಿ ನಡೆದ ಅಂತರ ವಿಶ್ವವಿದ್ಯಾನಿಲಯ ಚೆಸ್ ಕ್ರೀಡಾಕೂಟದಲ್ಲಿ 06 ಜನ ವಿದ್ಯಾರ್ಥಿಗಳು ತುಮಕೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿರುತ್ತಾರೆ. ವಿದ್ಯಾರ್ಥಿಗಳು ವರದಿ ಮಾಡಿಕೊಂಡಿರುವ ಪುಸ್ತಕದ ನಕಲು ಪ್ರತಿಯನ್ನು ಹಾಗೂ ಅಂರ ವಿಶ್ವವಿದ್ಯಾನಿಲಯದ ಚೆಸ್ ಪಂದ್ಯಾವಳಿಯಲ್ಲಿ ಭಾಗವಹಿಸಿದ ಬಾಬ್ತು ದೈಹಿಕ ಶಿಕ್ಷಣ ವಿಭಾಗದಿಂದ ದಿನಭತ್ಯೆಯನ್ನು ಪಾವತಿ ಮಾಡಿರುವುದಕ್ಕೆ 06 ಜನ ವಿದ್ಯಾರ್ಥಿಗಳ ಸಹಿಯುಳ್ಳ ರಸೀದಿ ಪ್ರತಿಯ ನಕಲನ್ನು ದೃಢೀಕರಿಸಿ ಲಗತ್ತಿಸಲಾಗಿದೆ.<br>**7.** ಚೆಕ್‌ಸಂಖ್ಯೆ: 773989 ವೀರಶೈವ ಕುಕ್ಕಿಂಗ್ ದಿನಾಂಕ:29-04-2015 ರೂ.18,000/-ಗಳಿಗೆ ಉಪಹಾರ ನೀಡಿದ್ದು, ಇದರ ದರಪಟ್ಟಿಯ ವಿಷಯಕ್ಕೆ ಸಂಬಂಧಿಸಿದಂತೆ ವೀರಶೈವ ಕುಕ್ಕಿಂಗ್ ಕಾಂಟ್ರಾಕ್ಟ್ (ವಿಶ್ವವಿದ್ಯಾನಿಲಯ ಕ್ಯಾಂಟೀನ್)ನಿಂದ ಉಪಹಾರ ಖರೀದಿಸಿದ್ದು, ಇವರೊಂದಿಗೆ ವಿಶ್ವವಿದ್ಯಾನಿಲಯವು Rate |

| | | |
|---|---|---|
| | | Contract ಮಾಡಿಕೊಂಡಿರುತ್ತದೆ. ಆದ್ದರಿಂದ ನೇರವಾಗಿ ಕ್ಯಾಂಟೀನ್‌ನಲ್ಲಿ ಉಪಹಾರ, ಮಧ್ಯಾಹ್ನದ ಊಟ ಪಡೆಯಲಾಗಿದ್ದು, ದರಪಟ್ಟಿ ಆಹ್ವಾನಿಸುವ ಸಂಭವ ಉದ್ಭವಿಸಿರುವುದಿಲ್ಲ. (ಸಂಬಂಧಪಟ್ಟ ದಾಖಲಾತಿ ಒದಗಿಸಿದೆ) ಎಂದು ದೃಢೀಕರಿಸಿದೆ.<br>**8**. ದಿನಾಂಕ:28.10.2015ರಂದು ವಿಶಾಖಪಟ್ಟಣಂ ಸ್ಥಳದಲ್ಲಿ 03 ದಿನಗಳಕಾಲ ಪ್ರಾಂತೀಯ ದರ್ಗಾಸ್ವಮಿ ಹಬ್ಬದ ಪ್ರಯುಕ್ಕೆ ರೈಲೆಸ್ಟೇಷನ್ ಪ್ರಾಂತ್ಯದಲ್ಲಿ ಗೊಂದಲಗಳು ಸೃಷ್ಟಿಯಾಗಿದ್ದು , ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಸಗಳು ಇದ್ದುದರಿಂದ ಪೋಲೀಸ್ ಅಧಿಕಾರಿಗಳು ಪರಿಸ್ಥಿತಿ ನಿಯಂತ್ರಣಮಾಡಲು ರಸ್ತೆಗಳನ್ನು ತಡೆಹಿಡಿದುದರಿಂದ ಕಾಯ್ದಿರಿಸಿರುವ ಸಮಯಕ್ಕೆ ರೈಲಿನಲ್ಲಿ ಪ್ರಯಾಣ ಮಾಡಲು ಆಗಿರುವುದಿಲ್ಲ ಆದ್ದರಿಂದ ಮ್ಯಾನೇಜರ್, ತರಬೇತುದಾರ, ಮತ್ತು ಸ್ಪರ್ಧಿಗಳು ಅನಿವಾರ್ಯವಾಗಿ ಮರುದಿನ ಹಿಂದಿರಗಲು ಲಭ್ಯವಿದ್ದ ಖಾಸಗಿ (ಎಸ್.ಆರ್.ಎಸ್ ಟ್ರಾವೆಲ್ಸ್) ಬಸ್ಸಿನಲ್ಲಿ ಪ್ರಾಯಾಣ ಮಾಡಿ ಬಂದಿರುತ್ತಾರೆ ಸದರಿ ಹೆಚ್ಚುವರಿ ಮೊತ್ತವನ್ನು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಕುಲಸಚಿವರ ಹಣ ಕಾಸು ಮಂಜೂರಾತಿ ಆದೇಶದಂತೆ 4,818/–ಗಳನ್ನು ಪಾವತಿಸಲಾಗಿರುತ್ತದೆ ಎಂದು ದೃಡೀಕರಿಸಿದೆ.<br>**9**. ತುಮಕೂರು ವಿಶ್ವವಿದ್ಯಾನಿಲಯ ನಿಯಮಾವಳಿಯಂತೆ ಕ್ರೀಡಾ ಸಲಹಾ ಸಮಿತಿಯ ಸದಸ್ಯರಿಗೆ ದಿನಭತ್ಯೆ ಹಾಗೂ ಪ್ರಯಾಣ ಭತ್ಯೆಯನ್ನು ನೀಡಲಾಗಿದೆ. ನಿಯಮಾವಳಿಯ ನಕಲು ದೃಢೀಕರಿಸಿದ ನಕಲು ಪ್ರತಿಯನ್ನು ಲಗತ್ತಿಸಿದೆ.<br>**10**. ಎನ್.ಡಿ.ಸಿ ಬಿಲ್ಲನ್ನು ಹಣಕಾಸು ವಿಭಾಗಕ್ಕೆ ಸಲ್ಲಿಸಿರುವ ಬಗ್ಗೆ ದೃಢೀಕರಿಸಿದ ನಕಲು ಪ್ರತಿಯನ್ನು ಲಗತ್ತಿಸಿದೆ.<br>**11**. ಎರಡು ಬಾರಿ 7% ರಿಯಾಯಿತಿ ಕಡಿತಗೊಳಿಸಿರುವುದರಿಂದ ಶ್ರೀ. ಪ್ಲಾನೆಟ್ ಸ್ಪೋಟ್ಸ್, ಬೆಂಗಳೂರು ಇವರು ರಿಯಾಯಿತಿ ನೀಡಿರುವ ಮೊತ್ತದ ಹಣವನ್ನು ಹಿಂದಿರುಗಿಸಬೇಕಾಗಿ ಕೋರಿಕೆಯ ಮೇರೆಗೆ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಮಾನ್ಯ ಕುಲಸಚಿವರ ಹಣ ಮಂಜೂರಾತಿ ಆದೇಶದಂತೆ 22,482/– ರೂಗಳನ್ನು ಪಾವತಿಸಲಾಗಿದೆ. ಹಣ ಮಂಜೂರಾತಿ ಆದೇಶದ ನಕಲು ಪ್ರತಿಯನ್ನು ದೃಢೀಕರಿಸಿ |

| | | |
|---|---|---|
| | | ಲಗತ್ತಿಸಲಾಗಿದೆ.<br>**12**. ರೂ. 7,389/-ಗಳು ಖರೀದಿಯ ಮೊತ್ತದಲ್ಲಿ 2% ಆದಾಯ ತೆರಿಗೆ ಮೊತ್ತವಾಗಿದ್ದು, ಸಂಬಂಧಪಟ್ಟ ದಾಖಲಾತಿಗಳ ನಕಲು ಪ್ರತಿಯನ್ನು ದೃಢೀಕರಿಸಿ ಲಗತ್ತಿಸಲಾಗಿದೆ.<br>**13**. ಚೆಕ್ ಸಂಖ್ಯೆ 773987, ರೂ.69280/-ಪಾವತಿಗೆ ಸಂಬಂಧಿಸಿದಂತೆ ದಾಸ್ತಾನು ಪುಸ್ತಕದ ಸಂಖ್ಯೆ.01 ರ ಪುಟಸಂಖ್ಯೆ54,144,135,109,22,331,38,39,23,04,5 9 ನಲ್ಲಿ ನಮೂದಿಸಲಾಗಿದೆ ಎಂದು ದೃಡೀಕರಿಸಿದೆ ದಾಸ್ತಾನು ಪುಸ್ತಕದ ನಕಲು ಪ್ರತಿಯನ್ನು ದೃಡೀಕರಿಸಿ ಲಗತ್ತಿಸಲಾಗಿದೆ.<br><br>ಚೆಕ್ ಸಂಖ್ಯೆ 773986, ರೂ.2,92,719/-ಪಾವತಿಗೆ ಸಂಬಂಧಿಸಿದಂತೆ ದಾಸ್ತಾನು ಪುಸ್ತಕದ ಸಂಖ್ಯೆ.01 ರ ಪುಟಸಂಖ್ಯೆ<br>122,123,413,84,308,17,144,243,415,421,58 ನಲ್ಲಿ ನಮೂದಿಸಲಾಗಿದೆ ಎಂದು ದೃಡೀಕರಿಸಿದೆ, ದಾಸ್ತಾನು ಪುಸ್ತಕದ ನಕಲು ಪ್ರತಿಯನ್ನು ದೃಡೀಕರಿಸಿ ಲಗತ್ತಿಸಲಾಗಿದೆ. |
| **27.** | **ಎ.ಸಿ. ಬಿಲ್ಲುಗಳಲ್ಲಿ ಕಂಡುಬಂದ ನ್ಯೂನತೆಗಳು (ವಿದ್ಯಾರ್ಥಿ ನಿಲಯದ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ ಕಂಡು ಬಂದ ನ್ಯೂನತೆಗಳು ರೂ. 73,450/-( 50,000+ 23,450) ವಸೂಲಾತಿ:-**<br>2015-16ನೇ ಸಾಲಿಗೆ ತುಮಕೂರು ವಿಶ್ವವಿದ್ಯಾನಿಲಯದ ಪುರುಷ ಮತ್ತು ಮಹಿಳಾ ವಿದ್ಯಾರ್ಥಿನಿಲಯದ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಪರಿಶೀಲನೆಯಲ್ಲಿ ಈ ಕೆಳಕಂಡ ನ್ಯೂನತೆಗಳು ಕಂಡು ಬಂದಿರುತ್ತದೆ.<br><br>1. ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಿಗೆ ಸವಿವರ ಬಿಲ್ಲುಗಳನ್ನು ಸಲ್ಲಿಸಲು ವಿಳಂಭ ಹಾಗೂ ಸಲ್ಲಿಸದಿರುವುದು ಕಂಡು ಬಂದಿದ್ದು, ಬಿಲ್ಲುಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸಲು ಸೂಚಿಸಿದೆ. ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದ ಕಾರಣ ರೂ. 50,000.00 ವಸೂಲಾತಿಗೆ ಸೂಚಿಸಿದೆ.<br>2. ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿ ಹಾಜರಾತಿ ರಿಜಿಸ್ಟರ್ ನಿರ್ವಹಿಸಿರುವುದಿಲ್ಲ.<br>3. ದಿನಸಿ ಸಾಮಗ್ರಿ ಖರೀದಿ ದಾಸ್ತಾನು ವಹಿ ನಿರ್ವಹಿಸಿರುವುದಿಲ್ಲ.<br>4. ಮಹಿಳಾ ಹಾಸ್ಟಲ್ ನಿರ್ವಹಣೆಗಾಗಿ ಮಾರುತಿ ಗ್ಯಾಸ್ ಏಜೆನ್ಸಿ, ತುಮಕೂರು ಇವರಿಂದ 17 ಕೆ.ಜಿ. ತೂಕದ ಸಿಲಿಂಡರ್‌ಗಳನ್ನು ರೂ. 1500-00ಗೆ ಖರೀದಿಸಿದ್ದು, ಸರ್ಕಾರಿ ಸ್ವಾಮ್ಯದ ಕಂಪೆನಿಯಿಂದ ಖರೀದಿಸಿದ್ದರೆ ವೆಚ್ಚವು ಕಡಿಮೆಯಾಗುತ್ತಿದ್ದು, ವಿವರ ಕೆಳಕಂಡಂತಿದೆ. | ತುಮಕೂರು ವಿಶ್ವವಿದ್ಯಾನಿಲಯದ ಪುರುಷ ವಿದ್ಯಾರ್ಥಿ ನಿಲಯಕ್ಕೆ ಸಂಬಂಧಿಸಿದಂತೆ ಬಿಲ್ಲುಗಳನ್ನು ನಿಗಧಿತ ಸಮಯದಲ್ಲಿ ಸಲ್ಲಿಸಿದೆ ಹಾಗೂ ಸದರಿ ವಿದ್ಯಾರ್ಥಿನಿಲಯಗಳ ಭೋಜನ ನಿರ್ವಹಣೆಯ ಹೊಣೆಯನ್ನು ವಿದ್ಯಾರ್ಥಿಗಳಿಗೆ ವಹಿಸಿಕೊಡುವ ಪದ್ಧತಿ ಇರುವುದರಿಂದ ವಿದ್ಯಾರ್ಥಿಗಳು ಭೋಜನ ವೆಚ್ಚಕ್ಕೆ ಸಂಬಂಧಿಸಿದ ಬಿಲ್ಲುಗಳನ್ನು ವಿಳಂಬವಾಗಿ ಸಲ್ಲಿಸಿರುವ ಪ್ರಯುಕ್ತ ಎನ್.ಡಿ.ಸಿ. ಬಿಲ್ಲುಗಳ ಸಲ್ಲಿಕೆಯಲ್ಲಿ ವಿಳಂಬವಾಗಿದೆ. ಇನ್ನು ಕಾಲ ವಿಳಂಬವಾಗದಂತೆ ಎಚ್ಚರವಹಿಸಲಾಗುವುದು.<br><br>ತುಮಕೂರು ವಿಶ್ವವಿದ್ಯಾನಿಲಯವು ಪ್ರಾರಂಭವಾದಾಗಿನಿಂದಲೂ ವಿದ್ಯಾರ್ಥಿಗಳ ಹಾಜರಾತಿಯ ವಹಿಯನ್ನು ನಿರ್ವಹಿಸಿರುವುದಿಲ್ಲ. ಇನ್ನು ಮುಂದೆ ನಿರ್ವಹಿಸಲಾಗುವುದು. |

| | | |
|---|---|---|
| | <table><tr><th>ಕ್ರಮ ಸಂಖ್ಯೆ</th><th>ವಿವರ</th><th>ಪ್ರತಿ ಸಿಲೆಂಡರ್ ಪರಿಮಾಣ</th><th>ಪ್ರತಿ ಸಿಲೆಂಡರ್‌ನ ಬೆಲೆ</th><th>ಪ್ರತಿ ಕೆ.ಜಿ. ಗ್ಯಾಸ್ ಬೆಲೆ</th></tr><tr><td>1</td><td>ಸರ್ಕಾರಿ ಸ್ವಾಮ್ಯದ ಕಂಪನಿ</td><td>19</td><td>1200.00</td><td>63.15</td></tr><tr><td>2</td><td>ಖಾಸಗಿ ಸ್ವಾಮ್ಯದ ಕಂಪನಿ (ಮಾರುತಿ ಗ್ಯಾಸ್ ಏಜೆನ್ಸಿ)</td><td>17</td><td>1500.00</td><td>88.23</td></tr><tr><td colspan="4">ವ್ಯತ್ಯಾಸ</td><td>25.08</td></tr></table><br>2015–16ನೇ ಸಾಲಿಗೆ 55 ಸಿಲಿಂಡರ್‌ಗಳನ್ನು ಖರೀದಿಸಿದ್ದು, 55x17x25.08=23450.00 ಗಳನ್ನು ಹೆಚ್ಚುವರಿ ಮೊತ್ತ ಪಾವತಿಸಿರುವುದಕ್ಕೆ ಸ್ಪಷ್ಟೀಕರಣ ನೀಡಲು ಕೋರಲಾಗಿ ವಿವರ ಸಲ್ಲಿಸದ ಕಾರಣ 23450.00 ವಸೂಲಾತಿಗೆ ಸೂಚಿಸಿದೆ. | ತುಮಕೂರು ವಿಶ್ವವಿದ್ಯಾನಿಲಯವು ಪ್ರಾರಂಭವಾದಾಗಿನಿಂದಲೂ ದಿನಸಿ ಸಾಮಗ್ರಿ ಖರೀದಿ ದಾಸ್ತಾನು ವಹಿನ್ನು ನಿರ್ವಹಿಸಿರುವುದಿಲ್ಲ. ಇನ್ನು ಮುಂದೆ ನಿರ್ವಹಿಸಲಾಗುವುದು ಎಂದು ತಿಳಿಸುತ್ತಾ ಸದರಿ ಅಕ್ಷೇಪಣೆಯನ್ನು ಕೈಬಿಡುವಂತೆ ಕೋರಿದೆ.<br>ಮಾರುತಿ ಗ್ಯಾಸ್ ಏಜೆನ್ಸಿ ತುಮಕೂರು ರವರಿಂದ 17 ಕೇಜಿ ತೂಕದ ಸಿಲಿಂಡರ್‌ಗಳನ್ನು ಖರೀದಿಸಿದ ಬಾಬ್ತು 23,450/–ಗಳನ್ನು ವಸೂಲಾತಿ ಸೂಚಿಸಲಾಗಿದ್ದು, ಪರಿಶಿಷ್ಟ ಜಾತಿ ಪರಿಶೀಷ್ಠ ಪಂಗಡಗಳ ವಿದ್ಯಾರ್ಥಿನಿಲಯಕ್ಕೆ ತುರ್ತಾಗಿ ಬೇಕಾಗಿರುವುದರಿಂದ ಖರೀದಿಸಲಾಗಿದ್ದು ಇನ್ನು ಮುಂದೆ ತಮ್ಮ ನಿರ್ದೇಶನದಂತೆ ಸರ್ಕಾರಿ ಸ್ವಾಮ್ಯದ ಕಂಪನಿಯವರಿಂದ ಖರೀದಿಸಲು ಕ್ರಮ ಕೈಗೊಳ್ಳಲಾಗುವುದು. ಆದ್ದರಿಂದ ರೂ. 23,450/–ಗಳನ್ನು ವಸೂಲಾತಿಯಿಂದ ಕೈಬಿಡಲು ಕೋರಲಾಗಿದೆ. |
| **28.** | **ಎ.ಸಿ. ಬಿಲ್ಲಿನಲ್ಲಿ ಕಂಡು ಬಂದ ನ್ಯೂನತೆಗಳು ವಿಳಂಬ ಎನ್.ಡಿ.ಸಿ ಬಿಲ್ಲುಗಳನ್ನು ವಿಳಂಬವಾಗಿ ಸಲ್ಲಿಕೆ:–**<br>ಬ್ಯಾಂಕ್ ಖಾತೆ 6310790672ರಲ್ಲಿ ಡಾ. ಜಯಶೀಲ, ಪ್ರಾಧ್ಯಾಪಕರು ಹಾಗೂ ಯೋಜನಾ ನಿರ್ದೇಶಕರು, ICSSR Major Research Project, Department of Studies & Research in Economics ಸಂಬಂಧಪಟ್ಟ ವೋಚರ್ಸ್ ಪರಿಶೀಲಿಸಲಾಗಿ, ನಗದು ಪುಸ್ತಕದ ಪ್ರಕಾರ ದಿನಾಂಕ:10.04.2015ರಂದು ಎ.ಸಿ.ಬಿಲ್ಲಿನಲ್ಲಿ ಪ್ರಯಾಣ ವೆಚ್ಚ ಹಾಗೂ ಸಾದಿಲ್ವಾರು ವೆಚ್ಚಗಳಿಗೆ ಒಟ್ಟು ರೂ.1,02,000/–ಗಳನ್ನು ಸೆಳೆದಿದ್ದು, ಸದರಿ ಮೊತ್ತಕ್ಕೆ ಎನ್.ಡಿ.ಸಿ. ಬಿಲ್ಲನ್ನು ದಿನಾಂಕ:02.01.2016ರಂದು ಸಲ್ಲಿಸಿರುತ್ತಾರೆ. MCE 1958 ನಿಯಮ 36 (6) & 37 (3) ರಂತೆ 1 ತಿಂಗಳ ಒಳಗಾಗಿ ಎನ್.ಡಿ.ಸಿ. ಸಲ್ಲಿಸಬೇಕಾಗಿದ್ದು, ವಿಳಂಭವಾಗಿ ಸಲ್ಲಿಸಿರುವುದು ಕಂಡುಬಂದಿದ್ದು, ಈ ಕುರಿತು ಸ್ಪಷ್ಟೀಕರಣವನ್ನು ಲೆಕ್ಕ ಪರಿಶೋಧನೆಗೆ ಸಲ್ಲಿಸಲು ಸೂಚಿಸಲಾಗಿ ಅನುಸರಣೆ ಸಲ್ಲಿಸಿರುವುದಿಲ್ಲ. ಎನ್.ಡಿ.ಸಿ ಬಿಲ್ಲುಗಳು ವಿಳಂಬ ಸಲ್ಲಿಕೆಗೆ ಆ ಅವಧಿಯಲ್ಲಿ ಚಾಲ್ತಿಯಲ್ಲಿದ್ದ ಬ್ಯಾಂಕ್ ಬಡ್ಡಿದರ ದಂಡ ವಿಧಿಸಿ ವಸೂಲಿಸಿ, ವಿವರಗಳನ್ನು ಸಲ್ಲಿಸಲು ಸೂಚಿಸಿದೆ. | ICSSR ಸಂಶೋಧನಾ ಯೋಜನೆಯ ಸಂಶೋಧನಾ ಕಾರ್ಯಕ್ಕಾಗಿ ಮುಂಗಡವಾಗಿ 1,02,000/– ಗಳನ್ನು ಪಡೆದಿರುತ್ತಾರೆ. ಸದರಿ ಸಂಶೋಧನಾ ನಿರ್ದೇಶಕರು<br><br>ಮಾಹಿತಿ ಸಂಗ್ರಹಣೆಗಾಗಿ ಕ್ಷೇತ್ರ ಕಾರ್ಯಕ್ಕೆ ವಿವಿಧ ಪ್ರದೇಶಗಳಿಗೆ ಭೇಟಿ ನೀಡುವ ಸಂಬಂಧ ಎನ್.ಡಿ.ಸಿ. ಬಿಲ್ಲುಗಳನ್ನು ಸಲ್ಲಿಸಲು ವಿಳಂಭವಾಗಿರುತ್ತದೆ. ಈ ಸಂಬಂಧ ಇನ್ನು ಮುಂದೆ ಈ ರೀತಿ ಆಗದಂತೆ ಎಚ್ಚರ ವಹಿಸಲಾಗುವುದು ಆದ್ದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಿದೆ. |
| **29** | **ಎ.ಸಿ ಬಿಲ್ಲಿನಲ್ಲಿ ಕಂಡು ಬಂದ ನ್ಯೂನತೆಗಳು ಸಂಶೋಧನಾ ಕಾರ್ಯಕ್ಕೆ ಸಂಬಂಧಿಸಿದ ಎ.ಸಿ. ಬಿಲ್ಲಿನಲ್ಲಿ ಕಂಡುಬಂದ ನ್ಯೂನತೆಗಳು ವಸೂಲಾತಿ ರೂ. 35,000/– ಹಾಗೂ ರೂ. 23,664/– ಆಕ್ಷೇಪಣೆಯಲ್ಲಿಡಲಾಗಿದೆ:–**<br>ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆದೇಶ ಸಂಖ್ಯೆ:ತುವಿ:ಡಿಇವಿ:02:2015–16/3162 ದಿನಾಂಕ:15.02.2016 ರಲ್ಲಿ ಯು.ಜಿ.ಸಿ. ಯಿಂದ ಮಂಜೂರಾಗಿರುವ "Measuring the Scientific Productivity, web visibility and citation patterns of Science Academics using Google Scholar" ಎಂಬ ಸಂಶೋಧನೆಯಡಿಯಲ್ಲಿ Dr. B.T. Sampth Kumar ಸಂಶೋಧನಾ ಪ್ರಾಧ್ಯಾಪಕರು, ಇವರು ದಿನಾಂಕ:15.02.2016ರಲ್ಲಿ ರೂ. 95,000/–ಗಳನ್ನು ಎ.ಸಿ.ಬಿಲ್ಲಿನಲ್ಲಿ ಪಡೆದಿರುತ್ತಾರೆ. | ಎ.ಸಿ. ಬಿಲ್ಲಿನಲ್ಲಿ ಒಟ್ಟು 95,000/–ಗಳನ್ನು ಸಂಶೋಧನಾ ಕಾರ್ಯಕ್ಕಾಗಿ ತೆಗೆದುಕೊಂಡಿದ್ದು, ರೂ. 23,664/–ಗಳಿಗೆ ಇಂಧನ ವೆಚ್ಚವೆಂದು ದೃಢೀಕರಿಸಿದ್ದ ಸಬ್ ವೋಚರ್ಸ್‌ಗಳನ್ನು ಲೆಕ್ಕ ಪರಿಶೋಧನೆಗೆ ಸಲ್ಲಿಸಲಾಗಿರತ್ತದೆ. ಹಾಗೂ ರೂ. 35,000/– ಗಳನ್ನು ಸಂಶೋಧನಾ ಯೋಜನೆಗೆ ವೆಬ್ ಡಿಸೈನಿಂಗ್ ಎಂದು ತೆಗೆದುಕೊಂಡಿದ್ದು, ಕೆಲವು ಕಾರಣಾಂತರಗಳಿಂದ 2018–19ನೇ ಸಾಲಿನಲ್ಲಿ ಸದರಿ ಮೊತ್ತವನ್ನು ಸಂಶೋಧನಾ ಯೋಜನೆಯ ಖಾತೆಗೆ |

| | | |
|---|---|---|
| | 1. ಎಂ.ಸಿ.ಇ. ನಿಯಮ 36 (6) ರಂತೆ 30 ದಿನಗಳೊಳಗೆ ಎನ್.ಡಿ.ಸಿ. ಬಿಲ್ಲುಗಳನ್ನು ಸಲ್ಲಿಸಬೇಕಿದ್ದು, ದಿನಾಂಕ:03.03.2017 ರಂದು ಸಲ್ಲಿಸಿದ್ದು, ಇವುಗಳಲ್ಲಿ Hiring Services Rs. 35,000/- ಗಳಿಗೆ ಎನ್.ಡಿ.ಸಿ. ಸಲ್ಲಿಸಿರುವುದಿಲ್ಲ. ಎನ್.ಡಿ.ಸಿ ಬಿಲ್ಲುಗಳು ವಿಳಂಬ ಸಲ್ಲಿಕೆಗೆ ಆ ಅವಧಿಯಲ್ಲಿ ಚಾಲ್ತಿಯಲ್ಲಿದ್ದ ಬ್ಯಾಂಕ್ ಬಡ್ಡಿದರ ದಂಡ ವಿಧಿಸಿ ವಸೂಲಿಸಿ, ವಿವರಗಳನ್ನು ಸಲ್ಲಿಸಲು ಸೂಚಿಸಿದೆ.<br><br>2. ಪ್ರಯಾಣ ವೆಚ್ಚ ರೂ. 40,000/-ಗಳಲ್ಲಿ ರೂ. 23,664/-ಗಳಿಗೆ ಇಂದನ ವೆಚ್ಚವೆಂದು ಧೃಡೀಕರಿಸಿದ್ದು, Sub Vouchers ಸಲ್ಲಿಸಿರುವುದಿಲ್ಲ. ಹಾಗೂ ಬಾಕಿ ಬಿಲ್ಲುಗಳಿಗೆ ವೋಚರ್ ಸಲ್ಲಿಸುವುದು.<br><br>ಅನುಸರಣೆಯನ್ನು ಲೆಕ್ಕಪರಿಶೋಧನೆಗೆ ಈವರೆಗೂ ಸಲ್ಲಿಸದ ಕಾರಣ ರೂ. 35000.00 ಗಳನ್ನು ವಸೂಲಾತಿಗೂ ಹಾಗೂ ರೂ.23664.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | ಹಿಂದಿರುಗಿಸಿರುತ್ತಾರೆ. ಆದ್ದರಿಂದ ಸದರಿ ಆಕ್ಷೇಪಣೆಗಳನ್ನು ಕೈಬಿಡುವಂತೆ ಕೋರಲಾಗಿದೆ. |
| **30.** | **SCP/TSP ಯೋಜನೆಯಡಿಯಲ್ಲಿ ಬಂದಂತಹ ಅನುದಾನಗಳಲ್ಲಿ ಕೆಲವೊಂದು ಕಾರ್ಯಕ್ರಮಗಳನ್ನು ರೂಪಿಸಿದ್ದು, ಭರಿಸಿರುವ ವೆಚ್ಚಗಳಲ್ಲಿ ಈ ಕೆಳಕಂಡ ನ್ಯೂನತೆಗಳನ್ನು ಪಟ್ಟಿ ಮಾಡಲಾಗಿದೆ. ರೂ. 19,546/- ವಸೂಲಾತಿ**<br><br>**<u>ವಿಶೇಷ ಘಟಕ ಯೋಜನೆ</u>**<br><br>**1 ಕೌಶಲ್ಯ ಸಾಮರ್ಥ್ಯ ನಿರ್ಮಾಣ ತರಭೇತಿ**<br>ಎ) ಧನಾದೇಶ ಸಂಖ್ಯೆ: 062925 ರೂ. 68,000/- ದಿನಾಂಕ:08.10.2015 ರಂದು ಎ.ಸಿ. ಬಿಲ್ಲಿನಲ್ಲಿ ಮುಂಗಡ ಪಡೆದಿದ್ದು, ಕೌಶಲ್ಯ & ಸಾಮರ್ಥ್ಯ ನಿರ್ಮಾಣ ತರಬೇತಿ ಕಾರ್ಯಕ್ರಮ ರೂಪಿಸಿದ್ದು, ದಿನಾಂಕ:08.10.2015 ರಂದು ಜರುಗಿದ "ವ್ಯಕ್ತಿತ್ವ ವಿಕಸನ" ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಡಾ. ಸೈಯದ್ ಆತಿಕ್ ರವರಿಗೆ ಪ್ರಯಾಣ ಭತ್ಯೆ ಬೆಂಗಳೂರಿನಿಂದ ತುಮಕೂರು ಎಸ್.ಎಲ್.ವಿ. ಟೂರ್ಸ್ ರವರಿಗೆ ರೂ. 3,400/- ಗಳು ಪಾವತಿಸಿದ್ದು, ಬೆಂಗಳೂರಿನಿಂದ ತುಮಕೂರಿಗೆ ಒಟ್ಟು ಎಷ್ಟು ಕಿ.ಮೀ.ಗಳು ಹಾಗೂ ಯಾವ ದರದಲ್ಲಿ ಪಾವತಿಸಲಾಗಿದೆ? ಡ್ರೈವರ್ ಬಾಟ,Tool Fee ಗಳನ್ನು ಪಾವತಿಸಲು ನಿಯಮಗಳಲ್ಲಿ ಅವಕಾಶವಿದೆಯೇ? ಆದೇಶವಿದ್ದರೇ ಲೆಕ್ಕ ತನಿಖೆಗೆ ಸಲ್ಲಿಸುವುದು.<br><br>ಬಿ) ದಿನಾಂಕ:09.10.2015 ರಂದು ಡಾ॥ ಎಂ.ಪಿ. ಕಾಮತ್ ಬಾಶ್ ಇಂಡಿಯಾ ಪೌಂಡೇಶನ್ ಇವರಿಗೆ ಬೆಂಗಳೂರು ನಿಂದ ತುಮಕೂರಿಗೆ ಪ್ರಯಾಣ ಭತ್ಯೆ ರೂ. 7,900/- ಗಳನ್ನು ಪಾವತಿಸಿದ್ದು, ಸದರಿಯವರು ದಿನಾಂಕ:09.10.2015ರಂದು ಮಾತ್ರ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿರುತ್ತಾರೆ. ಆದರೆ 2 ದಿನಗಳಿಗೆ ಪಾವತಿಸಿರುವ ಪ್ರಯಾಣ ಭತ್ಯೆಯ ವಿವರಗಳನ್ನು ಲೆಕ್ಕ ತನಿಖೆಗೆ ಸಲ್ಲಿಸಿ ಹೆಚ್ಚುವರಿಯಾಗಿ ಪಾವತಿಸಿರುವ 6300/-ಗಳನ್ನು ಸಂಬಂಧಿಸಿದವರಿಂದ ವಸೂಲಿಸುವುದು. | ಡಾ.ಸೈಯದ್ ಅತೀಕ್ ಕ್ಷೇತ್ರ ನಿರ್ದೇಶಕರು, ಬಾಶ್ ಇಂಡಿಯಾ ಫೌಂಡೇಷನ್, ಬೆಂಗಳೂರು. ಇವರಿಗೆ ಪ್ರಯಾಣ ಭತ್ಯೆಯಾಗಿ ರೂ.3400ಗಳನ್ನು ಪಾವತಿಸಿದ್ದು, ಸದರಿಯವರು ಒಂದು ದಿನದ ಟ್ಯಾಕ್ಸಿ ಬಾಡಿಗೆಯ ಮೊತ್ತಕ್ಕೆ ಬಾಡಿಗೆಯನ್ನು ಪಡೆದಿರುತ್ತಾರೆ. ಸದರಿ ಮೊತ್ತವು ವಿಶ್ವವಿದ್ಯಾನಿಲಯ ನಿಯಮಾನು ಸಾರವಾಗಿ ಅಂದರೆ ಬಾಡಿಗೆ ವಾಹನಕ್ಕೆ ವಾಸ್ತವಿಕ ವೆಚ್ಚ (As Against The Taxi Bill) ಅನುಗುಣವಾಗಿ ಪಾವತಿಸಲಾಗಿದೆಯೆಂದು ತಿಳಿಸಲಾಗಿದ್ದು, ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.<br><br>ಡಾ.ಎಂ.ಪಿ ಕಾಮತ್ ಕ್ಷೇತ್ರ ನಿರ್ದೇಶಕರು, ಬಾಶ್ ಇಂಡಿಯಾ ಫೌಂಡೇಷನ್, ಬೆಂಗಳೂರು. ಇವರು 2 ದಿನಗಳು ಕೌಶಲ್ಯ ಮತ್ತು ಸಾಮರ್ಥ್ಯ ನಿರ್ಮಾಣ ತರಬೇತಿ ಕಾರ್ಯಗಾರದಲ್ಲಿ ಪಾಲ್ಗೊಂಡಿರುತ್ತಾರೆ. ಸದರಿಯವರು ಒಂದು ದಿನದ ಗೌರವ ಸಂಭಾವನೆಯಾಗಿ ಮಾತ್ರ ಪಡೆದಿರುತ್ತಾರೆ. ಎರಡನೇ ದಿನ ಸದರಿಯವರು ಗೋಷ್ಠಿ ಅಧ್ಯಕ್ಷತೆಯನ್ನು ವಹಿಸಿದ್ದು ಆ ದಿನ ಅವರಿಗೆ ಸಂಭಾವನೆಯನ್ನು ನೀಡಿಲ್ಲ ಮತ್ತು ಟ್ಯಾಕ್ಸಿ ಬಿಲ್ಲಿನ ಮೊತ್ತವನ್ನು ಮಾತ್ರ ಪಾವತಿಸಲಾಗಿದೆ. Taxi Bill ನ ಅನುಗಣವಾಗಿ ಹಣ ಪಾವತಿಸಲಾಗಿದೆ. |

| | | |
|---|---|---|
| | | ವಿಶ್ವವಿದ್ಯಾನಿಲಯದ ನಿಯಮಾನುಸಾರ ಅಂದರೆ ಬಾಡಿಗೆ ವಾಹನದ ವಾಸ್ತವದ ವೆಚ್ಚದ ಅನುಗುಣವಾಗಿ ಪಾವತಿಸಲಾಗಿದೆ ಆದುದ್ದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |
| | 2. ಶ್ರೀ ಗಂಗಾಪ್ರಸಾದ್ ರವರಿಗೆ ಪ್ರಯಾಣ ಭತ್ಯೆ ರೂ. 4440/– ಗಳನ್ನು ಕೀರ್ತನ ಟ್ರಾವೆಲ್ಸ್ ರವರಿಗೆ ಪಾವತಿಸಿದ್ದು, ಹೆಚ್ಚುವರಿಯಾಗಿ ಪಾವತಿಸಿರವ ರೂ.2840/–ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ ಲೆಕ್ಕ ತನಿಖೆಗೆ ವಿವರ ನೀಡುವುದು. | ದಿನಾಂಕ: 31.10.2015 ಮತ್ತು 01.11.2015ರಂದು ಪದವಿ ಕಾಲೇಜಿನ ಪ್ರಾಧ್ಯಾಪಕರ ಹುದ್ದೆಗೆ ಪರೀಕ್ಷಾ ಪೂರ್ವ ತರಬೇತಿ ಕಾರ್ಯಗಾರವನ್ನು ವಿಶೇಷ ಘಟಕ ಯೋಜನೆಯಡಿಯಲ್ಲಿ ನಡೆಸಲಾಗಿದ್ದು, ಸದರಿ ಕಾರ್ಯಗಾರಕ್ಕೆ ಶ್ರೀ.ಗಂಗಾಪ್ರಸಾದ್, ಸಂಪನ್ಮೂಲ ವ್ಯಕ್ತಿ ಬೆಂಗಳೂರು. ಇವರು ಮೆ.ಕೀರ್ತನ ಟ್ರಾವೆಲ್ಸ್ ಬೆಂಗಳೂರು. ಇವರಿಂದ ಬಾಡಿಗೆ ವಾಹನದಲ್ಲಿ ಪ್ರಯಾಣಿಸಿದ್ದು, ಸದರಿ ಟ್ಯಾಕ್ಸಿ ಹುಂಡಿಯ ಮೊತ್ತ ರೂ.4440=00(ನಾಲ್ಕು ಸಾವಿರದ ನಾಲ್ಕು ನೂರ ನಲವತ್ತು)ಗಳನ್ನು ಮೆ.ಕೀರ್ತನ ಟ್ರಾವೆಲ್ಸ್, ಬೆಂಗಳೂರು. ಇವರಿಗೆ ಹಣ ಪಾವತಿಸಲಾಗಿದ್ದು, ಸದರಿ ಮೊತ್ತವು ವಿಶ್ವವಿದ್ಯಾನಿಲಯದ ನಿಯಮಾನುಸಾರ ಟ್ಯಾಕ್ಸಿ ಬಿಲ್ಲಿನ ಅನುಗುಣವಾಗಿ ಹಣ ಪಾವತಿಸಲಾಗಿದೆಯೆಂದು ತಮ್ಮ ಅವಗಾಹನೆಗೆ ತರುತ್ತಾ ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |
| | 3. ಕಾರ್ಯಕ್ರಮಕ್ಕಾಗಿ ಖರೀದಿಸಿರುವ ಸ್ಟಡಿ ಮೆಟಿರಿಯಲ್ಸ್ ಹಾಗೂ ಪ್ರಮಾಣ ಪತ್ರಗಳ ದಾಸ್ತಾನು ಹಾಗೂ ವಿತರಣೆಯನ್ನು ಲೆಕ್ಕ ತನಿಖೆಗೆ ಸಲ್ಲಿಸುವುದು. | ಈಗಾಗಲೇ ಲೆಕ್ಕ ಪರಿಶೋಧನೆಯ ವಿಭಾಗಕ್ಕೆ ದಾಸ್ತಾನು ಪುಸ್ತಕವನ್ನು ದಾಸ್ತಾನು ಪರಿಶೀಲನೆಗಾಗಿ ನೀಡಲಾಗಿದೆ. |
| | 4. ಎಂ.ಸಿ.ಇ ನಿಯಮ 36 (6) ರಂತೆ 30 ದಿನಗಳ ಒಳಗಾಗಿ ಎನ್.ಡಿ.ಸಿ. ಬಿಲ್ಲುಗಳನ್ನು ಸಲ್ಲಿಸಬೇಕಾಗಿದ್ದು, ವಿಳಂಬವಾಗಿ ಸಲ್ಲಿಸಿರುವ ವಿವರಗಳನ್ನು ಲಗತ್ತಿಸಿದ್ದು, ಈ ಬಗ್ಗೆ ಸ್ಪಷ್ಟೀಕರಣ ನೀಡುವುದು. **ಅನುಬಂಧ–7** | ವಿಶ್ವವಿದ್ಯಾನಿಲಯದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗೆ ಈ ಹಿಂದೆ ಕಛೇರಿಯ ಕೆಲಸಕ್ಕಾಗಿ ಯಾವೊಬ್ಬ ನೌಕರರು ಇಲ್ಲದ ಪ್ರಯುಕ್ತ ಎನ್.ಡಿ.ಸಿ ಸಲ್ಲಿಸಲು ಸ್ವಲ್ಪ ವಿಳಂಬವಾಗಿದ್ದು, ಇನ್ನು ಮುಂದೆ ಈ ರೀತಿ ಆಗದಂತೆ ಎಚ್ಚರಿಕೆ ವಹಿಸಲಾಗುವುದು. ಅನುಬಂಧ 02 ರಲ್ಲಿರುವ ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |
| | 5. ಎ) ಶ್ರೀ ರವಿಕುಮಾರ್‌ರವರಿಗೆ ದಿ.30.01.2016ರಲ್ಲಿ ರೂ.3,500/–ಗಳನ್ನು ಪ್ರಯಾಣ ಭತ್ಯೆಯಾಗಿ ಕೀರ್ತನ ಟ್ರಾವೆಲ್ಸ್‌ರವರಿಗೆ ಪಾವತಿಸಿದ್ದು, ಹೆಚ್ಚುವರಿಯಾಗಿ ಪಾವತಿಸಿರುವ ರೂ.1900/–ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ ವಿವರ ನೀಡುವುದು. | ಶ್ರೀ.ರವಿಕುಮಾರ್ ಟಿ, ಸಿ.ಈ.ಓ ಟ್ರಿನಿಟಿ ಎನ್.ಡಿ.ಟಿ ಸಂಪನ್ಮೂಲ ವ್ಯಕ್ತಿ ದಿನಾಂಕ; 30.01.2016 ರಂದು ಸಂಪನ್ಮೂಲ ವ್ಯಕ್ತಿಯಾಗಿ ಉದ್ಯಮಶೀಲತೆ ಅಭಿವೃದಿ (Entrepreneurship Development Training Programme) ಎಂಬ ಕಾರ್ಯಗಾರಕ್ಕೆ ಬಾಡಿಗೆ ಟ್ಯಾಕ್ಸಿಯಲ್ಲಿ ಭಾಗವಹಿಸಿದ್ದು, ಸದರಿ ಟ್ಯಾಕ್ಸಿ ಸಂಸ್ಥೆಯವರು |

| | | |
|---|---|---|
| | | ನೀಡಿರುವ ಬಿಲ್ಲಿನ ಅನುಗುಣವಾಗಿ ಅಂದರೆ ಬಾಡಿಗೆ ವಾಹನಕ್ಕೆ ವಾಸ್ತವಿಕ ವೆಚ್ಚ (As Against The Taxi Bill) ಅನುಗುಣವಾಗಿ ಪಾವತಿಸಲಾಗಿದೆಯೆಂದು ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |
| | ಬಿ) ಶ್ರೀ ಜಯರಾಮ ಶೆಟ್ಟಿ ಇವರಿಗೆ ಪ್ರಯಾಣ ಭತ್ಯೆಯಾಗಿ (ದಿ.31.01.2016) ರೂ.3,500/- ಗಳನ್ನು ಕೀರ್ತನ ಟ್ರಾವೆಲ್ಸ್‌ಗೆ ಪಾವತಿಸಿದ್ದು, ಹೆಚ್ಚುವರಿ ಭತ್ಯೆ ರೂ.1900/- ಸಂಬಂಧಿಸಿದವರಿಂದ ವಸೂಲಿಸಲು ಸೂಚಿಸಿದೆ. | ಶ್ರೀ ಜಯರಾಮ ಶೆಟ್ಟಿ ಎನ್ ಪ್ರೊ.ನಿಟ್ಟೆ ಸ್ಕೂಲ್ ಆಫ್ ಮೆನೇಜ್ ಮೆಂಟ್ ಇವರು ದಿನಾಂಕ: 31.01.2016ರಂದು ಟ್ಯಾಕ್ಸಿಯನ್ನು ಬಳಸಿ ಬೆಂಗಳೂರಿನಿಂದ ತುಮಕೂರಿಗೆ ಪ್ರಯಾಣಿಸಿದ್ದು, ಸದರಿಯವರು ನೀಡಿರುವ ಟ್ಯಾಕ್ಸಿ ಬಿಲ್ಲಿನ್ನು ವಿಶ್ವವಿದ್ಯಾನಿಲಯದ ಧರಕ್ಕೆ ಅನುಗುಣವಾಗಿ ಅಂದರೆ ಬಾಡಿಗೆ ವಾಹನಕ್ಕೆ ವಾಸ್ತವಿಕ ವೆಚ್ಚ (As Against The Taxi Bill) ಅನುಗುಣವಾಗಿ ಪಾವತಿಸಲಾಗಿದೆಯೆಂದು ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |
| | ಸಿ) ಶ್ರೀ ಆರ್.ಡಿ.ಗುಪ್ತ ಇವರಿಗೆ ಪ್ರಯಾಣ ಭತ್ಯೆಯಾಗಿ (ದಿ.03.01.2016) ರೂ.3500/- ಗಳನ್ನು ಕೀರ್ತನ ಟ್ರಾವೆಲ್ಸ್ ಇವರಿಗೆ ಪಾವತಿಸಿದ್ದು, ಹೆಚ್ಚುವರಿ ಮೊತ್ತ ರೂ.1900/- ವಸೂಲಾತಿಗೆ ಸೂಚಿಸಿದೆ. | ಶ್ರೀ ಆರ್.ಡಿ. ಗುಪ್ತ ಸಿ.ಈ.ಓ ಅಪ್ಪು ಅಲ್ಯೂಮಿನಿಯಂ ಬೆಂಗಳೂರು. ಇವರು ದಿನಾಂಕ: 31.01.2016 ರಂದು ಉದ್ಯಮಶೀಲತೆ ಅಭಿವೃದ್ಧಿ(Entrepreneurship Development Training Programme) ಎಂಬ ಕಾರ್ಯಗಾರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಲಾಗಿದೆ. ಸದರಿಯವರಿಗೆ ವಿಶ್ವವಿದ್ಯಾನಿಲಯದ ನಿಯಮಾನುಸಾರವಾಗಿ ವಾಸ್ತವಿಕ ವೆಚ್ಚವಾಗಿ ರೂ.3500=00(ರೂ. ಮೂರು ಸಾವಿರದ ಐನೂರು)ಗಳನ್ನು ಮೆ.ಕೀರ್ತನ ಟ್ರಾವೆಲ್ಸ್, ಬೆಂಗಳೂರು. ಇವರಿಗೆ ಅಂದರೆ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಬಾಡಿಗೆ ವಾಹನಕ್ಕೆ ವಾಸ್ತವಿಕ ವೆಚ್ಚ (As Against The Taxi Bill) ಅನುಗುಣವಾಗಿ ಪಾವತಿಸಲಾಗಿದೆಯೆಂದು ತಮ್ಮ ಅವಗಾಹನೆಗೆ ತರುತ್ತಾ ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |
| | ಡಿ) ವೀರಶೈವ ಕೆಟರಿಂಗ್‌ರವರಿಗೆ ರೂ.28,800/- ಪಾವತಿಸಿದ್ದು, ಇವರಿಂದ ಕೊಟೇಶನ್ ಪಡೆದಿರುವ ವಿವರಗಳನ್ನು ಸಲ್ಲಿಸಿರುವುದಿಲ್ಲ ಹಾಗೂ ಆದಾಯ ತೆರಿಗೆ ನಿಯಮ 194(ಸಿಜೆ) ಪ್ರಕಾರ 2.36% ರಂತೆ ಆದಾಯ ತೆರಿಗೆ ಕಟಾವಣೆ ಮಾಡಿರುವ ವಿವರ ಸಲ್ಲಿಸಿರದ ಕಾರಣ ರೂ. 680/- ವಸೂಲಾತಿಗೆ ಸೂಚಿಸಿದೆ. | ಮೆ.ವೀರಶೈವ ಕುಕ್ಕಿಂಗ್ ಅಂಡ್ ಕ್ಯಾಟೆರಿಂಗ್, ತುಮಕೂರು. ಸದರಿ ಸಂಸ್ಥೆಯವರು ತುಮಕೂರು ವಿಶ್ವವಿದ್ಯಾನಿಲಯದ ಕ್ಯಾಂಟಿನ್‌ದಾರರಾಗಿದ್ದು, ವಿಶ್ವವಿದ್ಯಾನಿಲಯದ ದರ ಒಪ್ಪಂದ ಮಾಡಿಕೊಂಡಿರುವ ಸಂಸ್ಥೆಯವರಿಂದಲೆ ವಿದ್ಯಾರ್ಥಿಗಳಿಗೆ ಮದ್ಯಾಹ್ನದ ಊಟದ ಸಲುವಾಗಿ ರೂ.28.800=00ಗಳನ್ನು ವೆಚ್ಚಮಾಡಲಾಗಿದ್ದು, ಸದರಿ |

| | | |
|---|---|---|
| | | ಸರಬರಾಜು ಸಂಬಂಧವು ವಿಶ್ವವಿದ್ಯಾನಿಲಯದ ದರ ಒಪ್ಪಂದ ಮಾಡಿಕೊಂಡಿರುವ ದರಗಳಂತೆ ಸರಬರಾಜು ಪಡೆಯಲಾಗಿರುತ್ತದೆ. ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ ಆದಾಯ ತೆರಿಗೆ ಪಾವತಿಸಲು ಈಗಾಗಲೇ ಸದರಿ ಸಂಸ್ಥೆಯ ಮಾಲಿಕರಿಗೆ ಮೌಖಿಕವಾಗಿ ತಿಳಿಸಲಾಗಿದೆ. ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |
| | 6. ವೀರಶೈವ ಕೆಟರಿಂಗ್‌ರವರಿಗೆ ಪಾವತಿಸಿರುವ ರೂ. 20,160/-ಗಳ ಪಾವತಿಸಿದ್ದು, ಸದರಿ ಬಿಲ್ಲಿಗೆ ಆದಾಯ ತೆರಿಗೆ ನಿಯಮ ಸೆಕ್ಷನ್ 194(ಸಿಜೆ) ಪ್ರಕಾರ 2.36% ರಂತೆ ಆದಾಯ ತೆರಿಗೆ ಕಟಾವಣೆ ಮಾಡಿರದ ಕಾರಣ ರೂ. 476/- ವಸೂಲಿಸಿ ವಿವರಗಳನ್ನು ಸಲ್ಲಿಸುವುದು. | ಮೆ.ವೀರಶೈವ ಕುಕ್ಕಿಂಗ್ ಅಂಡ್ ಕ್ಯಾಟೆರಿಂಗ್, ತುಮಕೂರು. ಸದರಿ ಸಂಸ್ಥೆಯವರು ತುಮಕೂರು ವಿಶ್ವವಿದ್ಯಾನಿಲಯದ ಕ್ಯಾಂಟಿನ್‌ದಾರರಾಗಿದ್ದು, ವಿಶ್ವವಿದ್ಯಾನಿಲಯದ ದರ ಒಪ್ಪಂದ ಮಾಡಿಕೊಂಡಿರುವ ಸಂಸ್ಥೆಯವರಿಂದಲೆ ವಿದ್ಯಾರ್ಥಿಗಳಿಗೆ ಮದ್ಯಾಹ್ನದ ಊಟದ ಸಲುವಾಗಿ ರೂ.20160=00ಗಳನ್ನು ವೆಚ್ಚಮಾಡಲಾಗಿದ್ದು, ಸದರಿ ಸರಬರಾಜು ಸಂಬಂಧವು ವಿಶ್ವವಿದ್ಯಾನಿಲಯದ ದರ ಒಪ್ಪಂದ ಮಾಡಿಕೊಂಡಿರುವ ದರಗಳಂತೆ ಸರಬರಾಜು ಪಡೆಯಲಾಗಿರುತ್ತದೆ. ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ ಆದಾಯ ತೆರಿಗೆ ಪಾವತಿಸಲು ಈಗಾಗಲೇ ಸದರಿ ಸಂಸ್ಥೆಯ ಮಾಲಿಕರಿಗೆ ಮೌಖಿಕವಾಗಿ ತಿಳಿಸಲಾಗಿದೆ. ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |
| | 7 ಸಾಮಾಜಿಕ ಸಂಶೋಧನೆ ತಂತ್ರಾಂಶ ಕುರಿತು ಕಾರ್ಯಗಾರ ಚೆಕ್ ಸಂಖ್ಯೆ:219827/26.03.2016 ಎ) ಅರುಣ್ ಕ್ಯಾಬ್ಸ್ ದಿ.28.03.2016 ರೂ.4,300/- ಹೆಚ್ಚುವರಿ ಪಾವತಿ ರೂ.2,700 ವಸೂಲಿಸುವುದು. | ದಿನಾಂಕ 28.03.2016 ಮತ್ತು 29.03.2016ರಂದು ಜರುಗಿದ ಸಾಮಾಜಿಕ ಸಂಶೋಧನೆ ಮತ್ತು ತಂತ್ರಾಂಶದ ಎರಡು ದಿನಗಳ ಕಾರ್ಯಗಾರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಶ್ರೀ.ಅಲ್ಲೇನ್ ಗಾಡ್ ಪೇರ್, ಸೆಂಟ್ ಜೋಸೆಫ್ ಕಾಲೇಜ್ ಬೆಂಗಳೂರು. ಇವರು ಎರಡು ದಿನಗಳ ಕಾರ್ಯಗಾರದಲ್ಲಿ ಭಾಗವಹಿಸಲಾಗಿದ್ದು, ಸದರಿಯವರು ಬಳಸಿದ ಅರುಣ್ ಕ್ಯಾಬ್ಸ್ ನ ಟ್ಯಾಕ್ಸಿ ಬಿಲ್ಲಿನ ಮೊತ್ತ 4300 ರೂಗಳಾಗಿದ್ದು, ತಂಗುದಾಣ (Halting Charges) ಸೇರಿದಂತೆ ಟ್ಯಾಕ್ಸಿ ಹುಂಡಿಯ ವಾಸ್ತವಿಕ ವೆಚ್ಚ ಅನುಗುಣವಾಗಿ ಸದರಿ ಮೊತ್ತವನ್ನು ಪಾವತಿಸಲಾಗಿದೆಯೆಂದು ತಮ್ಮ ಅವಗಾಹನೆಗೆ ತರುತ್ತಾ ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |

| | | |
|---|---|---|
| | ಬಿ) ವೀರಶೈವ ಕೆಟರಿಂಗ್‌ರವರಿಗೆ ಪಾವತಿಸಿರುವ ರೂ.36,000/–ಗಳ ಮಾಡಿರದ ಕಾರಣ ರೂ.850 ವಸೂಲಾತಿ. | ಮೆ.ವೀರಶೈವ ಕುಕ್ಕಿಂಗ್ ಅಂಡ್ ಕ್ಯಾಟೆರಿಂಗ್, ತುಮಕೂರು. ಸದರಿ ಸಂಸ್ಥೆಯವರು ತುಮಕೂರು ವಿಶ್ವವಿದ್ಯಾನಿಲಯದ ಕ್ಯಾಂಟಿನ್‌ದಾರರಾಗಿದ್ದು, ವಿಶ್ವವಿದ್ಯಾನಿಲಯದ ದರ ಒಪ್ಪಂದ ಮಾಡಿಕೊಂಡಿರುವ ಸಂಸ್ಥೆಯವರಿಂದಲೆ ವಿದ್ಯಾರ್ಥಿಗಳಿಗೆ ಮದ್ಯಾಹ್ನದ ಊಟದ ಸಲುವಾಗಿ ರೂ.36000=00ಗಳನ್ನು ವೆಚ್ಚಮಾಡಲಾಗಿದ್ದು, ಸದರಿ ಸರಬರಾಜು ಸಂಬಂಧವು ವಿಶ್ವವಿದ್ಯಾನಿಲಯದ ದರ ಒಪ್ಪಂದ ಮಾಡಿಕೊಂಡಿರುವ ದರಗಳಂತೆ ಸರಬರಾಜು ಪಡೆಯಲಾಗಿರುತ್ತದೆ. ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ ಆದಾಯ ತೆರಿಗೆ ಪಾವತಿಸಲು ಈಗಾಗಲೇ ಸದರಿ ಸಂಸ್ಥೆಯ ಮಾಲಿಕರಿಗೆ ಮೌಖಿಕವಾಗಿ ತಿಳಿಸಲಾಗಿದೆ. ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |
| **31.** | **ಪ್ರವೇಶಾತಿಯಲ್ಲಿ ಕಂಡಬಂದ ನ್ಯೂನತೆಗಳು ವಸೂಲಾತಿ ರೂ. 4,45,280/– :–** <br> ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2015–16ನೇ ಸಾಲಿನ ಪ್ರವೇಶಾತಿ ಕಡತಗಳು ಹಾಗೂ DCB ಪರಿಶೀಲನೆಯಲ್ಲಿ ಕಂಡ ಕೆಲವೊಂದು ಕಾಲೇಜುಗಳು ಪ್ರವೇಶ ಶುಲ್ಕವನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸಿಲ್ಲದಿರುವುದು ಕಂಡು ಬಂದಿದೆ. ಕೂಡಲೇ ಕಾಲೇಜುಗಳಿಂದ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ಶುಲ್ಕವನ್ನು ವಸೂಲಾತಿ ಮಾಡಿ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸಲು ಸೂಚಿಸಿದ ಕಾಲೇಜುಗಳಿಂದ ವಸೂಲಿಸಬೇಕಾದ ಒಟ್ಟು ಮೊತ್ತ ರೂ. 4,63,680/– ಗಳಾಗಿರುತ್ತದೆ. ರೂ. 18400.00 ಗಳಿಗೆ ಚಲನ್ ಒದಗಿಸಿರುವುದರಿಂದ ಬಾಕಿ ಇರುವ ಮೊತ್ತ 445280/– ವಸೂಲಿಸಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಸೂಚಿಸಿದೆ. | ಲೆಕ್ಕ ಪರಿಶೋಧನೆಯಲ್ಲಿ 2015–16ನೇ ಸಾಲಿನ ಪ್ರವೇಶಾತಿಯಲ್ಲಿ ಎಸ್.ಸಿ/ಎಸ್.ಟಿ. ವಿದ್ಯಾರ್ಥಿಗಳ ಪ್ರವೇಶ ಶುಲ್ಕವನ್ನು ಕೆಲವೊಂದು ಕಾಲೇಜುಗಳು ಪಾವತಿಸಿಲ್ಲದಿರುವುದು ಕಂಡುಬಂದಿರುವುದಾಗಿ ಹಾಗೂ ಕೂಡಲೇ ಕಾಲೇಜುಗಳಿಂದ ಸದರಿ ಶುಲ್ಕವನ್ನು ವಸೂಲಾತಿ ಮಾಡಿ ವಿವರಗಳನ್ನು ಒದಗಿಸುವಂತೆ ಸೂಚಿಸಿರುತ್ತಾರೆ. <br> ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಈ ಕಛೇರಿಯ ಉಲ್ಲೇಖಿತ ಟಿಪ್ಪಣಿ ಪತ್ರದಲ್ಲಿ ಮಾಹಿತಿಯನ್ನು ಲೆಕ್ಕ ಪರಿಶೋಧಕರಿಗೆ ಒದಗಿಸಲಾಗಿತ್ತು. ಆದರೂ ಸಹ ಆಕ್ಷೇಪಣೆಯಲ್ಲಿ ವಸೂಲಿಸಿರುವ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸುವಂತೆ ಮತ್ತೊಮ್ಮೆ ಸೂಚಿಸಿರುವುದರಿಂದ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳ ಪ್ರವೇಶ ಶುಲ್ಕವನ್ನು ಕಾಲೇಜುಗಳು ವಿಶ್ವವಿದ್ಯಾನಿಲಯಕ್ಕೆ ಪ್ರವೇಶ ಶುಲ್ಕ ಪಾವತಿಸಿರುವುದಕ್ಕೆ ಸಂಬಂಧಿಸಿದ ಚಲನ್‌ಗಳ ಝೆರಾಕ್ಸ್ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮಗೆ ಸಲ್ಲಿಸಿದೆ. |
| **32.** | **ಡಾ:. ಬಿ. ಆರ್. ಅಂಬೇಡ್ಕರ್ ಮತ್ತು ಡಾ॥ ಬಾಬು ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರಕ್ಕೆ ಬಿಡುಗಡೆಯಾದ ಅನುದಾನ ಸದ್ಬಳಕೆ ಮಾಡದಿರುವುದು: ಆಕ್ಷೇಪಣೆ: 26,94,184/–** <br> ಲೆಕ್ಕ ಖಾತೆ ಸಂಖ್ಯೆ:3862101002927 ಡಾ॥ ಬಿ.ಆರ್. ಅಂಬೇಡ್ಕರ್ ಮತ್ತು ಡಾ॥ ಬಾಬು ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರಕ್ಕೆ ಸಂಬಂಧಪಟ್ಟ ಬ್ಯಾಂಕ್‌ಪಾಸ್ ಪುಸ್ತಕ ನಗದು ಪುಸ್ತಕ ಹಾಗೂ ವೋಚರ್‌ಗಳನ್ನು ಪರಿಶೀಲಿಸಿದಾಗ ದಿನಾಂಕ:31.03.2016ರ ಅಂತ್ಯಕ್ಕೆ 26,94,184–00 ಉಳಿಕೆಯಾಗಿದ್ದು, ನಿಗದಿಪಡಿಸಿದ ಉದ್ದೇಶಗಳಿಗೆ ವೆಚ್ಚ ಭರಿಸದಿರಲು ಸ್ಪಷ್ಟೀಕರಣ | ತುಮಕೂರು ವಿಶ್ವವಿದ್ಯಾನಿಲಯದ ಡಾ॥ ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರಕ್ಕೆ ಸಂಬಂಧಿಸಿದಂತೆ ದಿನಾಂಕ:31.03.2016ರ ಅಂತ್ಯಕ್ಕೆ ರೂ. 26,94,184/–ಗಳು ಉಳಿಕೆಯಾಗಿದ್ದು, ಪ್ರಸ್ತಾವನೆಯಲ್ಲಿ ನಿಗಧಿಪಡಿಸಿದ ಉದ್ದೇಶಗಳಿಗೆ ವೆಚ್ಚ ಭರಿಸದಿರಲು ಸ್ಪಷ್ಟೀಕರಣ ನೀಡಲು |

ನೀಡಲು ಸೂಚಿಸಲಾಗಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲವಾದ್ದರಿಂದ ರೂ. 26,94,184/– ಆಕ್ಷೇಪಣೆಯಲ್ಲಿಡಲಾಗಿದೆ.

ಈ ಕೆಳಕಂಡ ನಮೂನೆಯಲ್ಲಿ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸಲು ಸೂಚಿಸಿದೆ.

| ಕ್ರಮ ಸಂಖ್ಯೆ | ಕಾರ್ಯಕ್ರಮ ವಿವರ | ಪ್ರಸ್ತಾವನೆ ಮೊತ್ತ | ಕ್ರಿಯಾ ಯೋಜನೆ ಮೊತ್ತ | ಈವರೆಗೆ ಬಿಡುಗಡೆಯಾದ ಅನುದಾನ | ಈವರೆಗೆ ಭರಿಸಿದ ವೆಚ್ಚ | ಉಳಿಕೆ |
|---|---|---|---|---|---|---|
| | | | | | | |

ನಿಗದಿತ ಸಮಯದಲ್ಲಿ ಸಂಶೋಧನಾ ಕಾರ್ಯಗಳನ್ನು ಕೈಗೊಳ್ಳದ ಕಾರಣ ಯೋಜನೆ ಸಫಲಗೊಂಡಿರುವುದಿಲ್ಲ.

